4. ನಿಯಮ 69ರ ಮೇರೆಗೆ ಚರ್ಚೆ

ವಿಷಯ: ಜವಹರಲಾಲ್ ನೆಹರು ರಾಷ್ಟ್ರೀಯ ನಗರ ಪುನರ್ ನಿರ್ಮಾಣ ಯೋಜನೆಯಡಿಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನಡೆದಿರತಕ್ಕಂಥ ಅವ್ಯವಹಾರದ ಬಗ್ಗೆ.

ಶ್ರೀ ಡಿ.ಕೆ.ಶಿವಕುಮಾರ್ (ಸಾತನೂರು): ಮಾನ್ಯ ಅಧ್ಯಕ್ಷರೆ, ನಮ್ಮ ವಿರೋಧ ಪಕ್ಷದ ವತಿಯಿಂದ ಬೆಂಗಳೂರು ನಗರದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅನೇಕ ವಿಚಾರಗಳನ್ನು , ಅಲ್ಲಿ ನಡೆದಂತಹ ಅನೇಕ ಅವ್ಯವಹಾರಗಳ ಬಗ್ಗೆ ಬೆಳಕನ್ನು ಚೆಲ್ಲಬೇಕೆಂದು ಹೇಳಿ ತಮಗೆ ನಾವು ನಿಯಮ 69 ರ ಅಡಿಯಲ್ಲಿ ಅವಕಾಶವನ್ನು ಕೇಳಿಕೊಂಡಿದ್ದೆವು. ಅವಕಾಶ ಕೊಟ್ಟಿದ್ದೀರಿ. ಅದಕ್ಕೆ ನಮ್ಮ ಧನ್ಯವಾದಗಳು. ಮಾನ್ಯ ಪ್ರಧಾನ ಮಂತ್ರಿ ಡಾ: ಮನಮೋಹನ್ ಸಿಂಗ್ ಅವರ ಅಚ್ಚು ಮೆಚ್ಚಿನ ಕಾರ್ಯಕ್ರಮದಲ್ಲಿ ಇದೊಂದು. ಏಕೆಂದರೆ ಕರ್ನಾಟಕ ಭಾರತದಲ್ಲಿ 36 ರಿಂದ 39% ಜನಸಂಖ್ಯೆ ಬೆಂಗಳೂರು ನಗರಗಳಲ್ಲಿ ಇದ್ದಾರೆ. ಒಂದು ಕಡೆ ಗ್ರಾಮೀಣ ಪ್ರದೇಶದ ಜನರ ಬಗ್ಗೆ ಸರ್ಕಾರ ವಿವಿಧ ರೀತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ನಗರದಲ್ಲಿ, ನಗರ ಪ್ರದೇಶಗಳಲ್ಲಿ ಇರುವಂತಹ ಜನ ಅತಿ ಹೆಚ್ಚು ತೆರಿಗೆಯನ್ನು ಕೊಡುತ್ತಾರೆ. ಹೊರಗಡೆಯಿಂದ ಬೆಂಗಳೂರು ನಗರಕ್ಕೆ ಹೆಚ್ಚಿಗೆ ಹೊಲಸೆ ಬರುತ್ತಿದ್ದಾರೆ. ಬಂದಂತಹ ಜನರಿಗೆ ನವು ಅನುಕೂಲವಾದಂತಹ ಅವಕಾಶ ಮಾಡಿಕೊಡಬೇಕೆಂದು ಹೇಳಿ ನಮ್ಮ ಪ್ರಧಾನ ಮಂತ್ರಿಗಳು ಒಂದು ವಿಶೇಷವಾದಂತಹ ಯೋಜನೆಯನ್ನು ತಯಾರು ಮಾಡಿದ್ದಾರೆ. ಆ ಯೋಜನೆಯ ಬಹುತೇಕ ಭಾರತದ ಅಂದರೆ. Jawaharlal Neharu National Urban Renewal Mission (JNURM) ಎಂದು ಹೇಳಿ ಭಾರತದ ಅನೇಕ ಪಟ್ಟಣಗಳಿಗೆ ಈ ಅವಕಾಶ ಮಾಡಬೇಕೆಂದು ಈ ಕಾರ್ಯಕ್ರಮವನ್ನು ರೂಪಿಸಿದ್ದಾರೆ. ರಾಜೀವ್ ಗಾಂಧಿಯವರು 1974ನೇ ತಿದ್ದುಪಡಿಯನ್ನು ತಂದಂತಹ ಸಂದರ್ಭದಲ್ಲಿ ಅವರು ಇಂತಹ ಕಾರ್ಯಕ್ರಮಗಳಲ್ಲಿ ಏನೇ ಮಾಡಬೇಕಾದರೂ ಕೂಡ ಸ್ಥಳೀಯ ಸಂಸ್ಥೆಗಳು ಅಧಿಕಾರದಲ್ಲಿರಬೇಕು. ಸ್ಥಳಿಯ ಸಂಸ್ಥೆಗಳು ಅಧಿಕಾರ ಇದ್ದಂತಹ ಸಂದರ್ಭದಲ್ಲಿ ಇಂತಹ ಕಾರ್ಯಕ್ರಮವನ್ನು ರೂಪಿಸಬೇಕು ಎನ್ನುವುದನ್ನು ಅವರು ನಿಗದಿ ಮಾಡಿದ್ದಾರೆ. ಕೇಂದ್ರ ಸರ್ಕಾರ, ರಾಜ್ಯಸರ್ಕಾರ ಮತ್ತು ಸ್ಥಳೀಯ ಸಂಸ್ಥೆಗಳು, ಈ ಮೂರು ಸಂಸ್ಥೆಗಳು ಸೇರಿ ಈ ಕಾರ್ಯಕ್ರಮವನ್ನು ತೆಗೆದುಕೊಂಡಿವೆ. ಭಾರತ ಸರ್ಕಾರದ 50%, ರಾಜ್ಯ ಸರ್ಕಾರದ 35% ಮತ್ತು ಸ್ಥಳೀಯ ಸಂಸ್ಥೆಯ 15% ಸೇರಿ ಈ

ಕಾರ್ಯಕ್ರಮವನ್ನು ತೆಗೆದುಕೊಂಡಿವೆ. ಮನಮೋಹನ್ ಸಿಂಗ್‌ರವರ ಯುಪಿಎ ಸರ್ಕಾರ .. ಈ ಕಾರ್ಯಕ್ರಮಕ್ಕೆ ಜವಹರಲಾಲ್ ನೆಹರೂರವರ ಹೆಸರನ್ನು ಏಕೆ ಇಟ್ಟಿದ್ದಾರೆಂದರೆ, ಈ ರಾಷ್ಟ್ರದ ಮೊದಲನೇ ಪ್ರಧಾನಿಯಾದ ಜವಹರಲಾಲ್ ನೆಹರೂರವರು 1924ರಲ್ಲಿ ಅಲಹಾಬಾದ್ ಮುನಿಸಿಪಲ್ ಕಾರ್ಪೋರೇಷನ್ನಿನ ಅಧ್ಯಕ್ಷರಾಗಿ ಸುಮಾರು ಎರಡು ವರ್ಷಗಳ ಕಾಲ ಕರ್ತವ್ಯ ನಿರ್ವಹಿಸಿದರು. ಅದಾದ ನಂತರ, ಎರಡು ವರ್ಷಗಳ ಕಾಲ ಅಲ್ಲಿ ಅವರು Chief Excutive Officer ಆಗಿ ಕೆಲಸ ಮಾಡಿದ್ದಾರೆ. ಅವರಿಗೆ ಇದ್ದಂತಹ ಅನುಭವ, ಅವರು ನಗರಗಳ ಬಗ್ಗೆ ತೋರಿಸಿದ ಆಸಕ್ತಿ, ಅವರ ಕಾರ್ಯಕ್ರಮ, ಅವರ vision, ಇದೆಲ್ಲವನ್ನೂ ಚಿಂತನೆ ಮಾಡಿ ಯುಪಿಎ ಸರ್ಕಾರ, ಭಾರತ ಸರ್ಕಾರ ರಾಷ್ಟ್ರದ ಅನೇಕ ನಗರಗಳಿಗೆ ಈ ಅವಕಾಶ ಮಾಡಿಕೊಡಬೇಕೆಂದು.... ಮುಂಬೈನ ದೊಡ್ಡ ಸ್ಲಮ್ ವಿಚಾರದಲ್ಲಿ, ಹೂಳು ಕಟ್ಟಿಕೊಳ್ಳುವ ವಿಚಾರದಲ್ಲಿ ತೊಂದರೆಯಾದ ಸಂದರ್ಭದಲ್ಲಿ ಅವರ ಹೆಸರನ್ನು ಇವತ್ತು ಈ ಕಾರ್ಯಕ್ರಮಕ್ಕೆ ಇಟ್ಟಿದ್ದಾರೆ. ಈ ಕಾರ್ಯಕ್ರಮವನ್ನು ಜಾರಿಗೊಳಿಸುವ ಸಂದರ್ಭದಲ್ಲಿ, ಈ ಕಾರ್ಯಕ್ರಮ ಏತಕ್ಕಾಗಿ ಜಾರಿಗೊಳಿಸಬೇಕೆಂದು, ಬೇಸಿಕ್ ಆಗಿ ಇಂತಿಂತಹ ಕೆಲಸಗಳನ್ನು ಮಾಡಬೇಕೆಂದು ಏನು ನಿಗದಿ ಮಾಡಿದ್ದಾರೆಂದರೆ, ಮೋರಿಯಿಂದ ಹೂಳು ತೆಗೆಯುವುದು, ಮೋರಿಗಳನ್ನು ಅಗಲಗೊಳಿಸುವುದು, ಆರ್.ಸಿ.ಸಿ ಹಾಗೂ ಕಲ್ಲು ಕಟ್ಟಡಗಳನ್ನು, ಮೋರಿ ಗೋಡೆಗಳನ್ನು ನಿರ್ಮಿಸುವುದು, ಮೋರಿಗಳ ಗೋಡೆ ಹಾಗೂ ಕಲ್ವರ್ಟ್‌ಗಳನ್ನು ಪುನರ್ ಸ್ಥಾಪಿಸುವುದು, ನಾಲೆಗಳ ಕೆಳ ಭಾಗಕ್ಕೆ ಸುರಕ್ಷಿತವಾಗಿ ಕಾಂಕ್ರೀಟ್ ಅಳವಡಿಸುವುದು, ಮಳೆ ನೀರು ಸುಗಮವಾಗಿ ಹರಿದು ಹೋಗುವಂತೆ ಅವಕಾಶ ಕಲ್ಪಿಸುವುದು, ಒಳಚರಂಡಿ, ಕೊಳವೆ ಮತ್ತು ಕೇಬಲ್‌ಗಳನ್ನು ಸ್ಥಳಾಂತರಿಸುವುದು, ಮುಖ್ಯ ನಾಲೆಗೆ ಮತ್ತು ಬೇರೆ ಇತರ ಕೊಳವೆಗಳನ್ನು ಅಭಿವೃದ್ಧಿಪಡಿಸುವುದು, ಹೀಗೆ ಅನೇಕ ಕಾಮಗಾರಿಗಳು, ಕೆಲವು separators, ಕೆಲವು Housing Programmes, Slums ಅನ್ನು rehabilitate ಮಾಡುವುದು, ಇವೆಲ್ಲದಕ್ಕೂ ಕಾರ್ಯಕ್ರಮ ಹಾಕಿಕೊಟ್ಟಿದ್ದಾರೆ. ನಮ್ಮ ರಾಜ್ಯದಲ್ಲಿ ಬೆಂಗಳೂರು ನಗರ ಮತ್ತು ಮೈಸೂರು ನಗರವನ್ನು ತೆಗೆದುಕೊಂಡಿದ್ದಾರೆ. ಬೆಂಗಳೂರು ನಗರಕ್ಕೆ ಸುಮಾರು ಅನೇಕ ಕಾರ್ಯಕ್ರಮಗಳನ್ನಿಟ್ಟು, 13 ಕಾರ್ಯಕ್ರಮಗಳಿಗೆ 933 ಕೋಟಿ ರೂಪಾಯಿಗಳ ಒಂದು ಕಾರ್ಯಕ್ರಮ ಮತ್ತು Basic Services For Urban Poor ಕಾರ್ಯಕ್ರಮದಲ್ಲಿ ಕೆಲವು slums ಅನ್ನು rehabilitate ಮಾಡುವುದಕ್ಕೆ, ಒಂದು ಕಡೆ 30 ಸ್ಲಮ್ಸ್, ಇನ್ನೊಂದು ಕಡೆ 2 ಸ್ಲಮ್ಸ್, ಮತ್ತೊಂದು ಕಡೆ 13 ಸ್ಲಮ್‌ಗಳಿಗೆ 262 ಕೋಟಿ ಮತ್ತು ಮೈಸೂರಿನಲ್ಲಿ

Remodeling Of Water Distribution ಗಾಗಿ 194 ಕೋಟಿ ರೂಪಾಯಿಗಳು. ಹೀಗೆ ಕರ್ನಾಟಕ ರಾಜ್ಯದಲ್ಲಿ ಒಟ್ಟು 1,496 ಕೋಟಿ ರೂಪಾಯಿಗಳ ಯೋಜನೆ ತಯಾರಿಸಿ, ನಮ್ಮ ರಾಜ್ಯ ಸರ್ಕಾರದ ಜೊತೆ ಒಂದು ಒಡಂಬಡಿಕೆ ಮಾಡಿಕೊಂಡಿದ್ದಾರೆ. ಈ ಕಾರ್ಯಕ್ರಮವೇನಿದೆ, ದಿನಾಂಕ 14.6.2007ರಂದು ಕೇಂದ್ರ ಸರ್ಕಾರದ ಯೋಜನೆಯೊಂದನ್ನು ಕೈಗೆತ್ತಿಕೊಂಡಿದ್ದು, ಇದರಲ್ಲಿ ಮುಖ್ಯವಾಗಿ ಇಲ್ಲಿ 4 ಕಣಿವೆಗಳನ್ನು ತಗೆದುಕೊಳ್ಳಲಾಗಿದೆ. ಒಂದು, ಕೋರಮಂಗಲ ವ್ಯಾಲಿ, ಎರಡು, ಚಲ್ಲಘಟ್ಟವ್ಯಾಲಿ, ಮೂರು, ಹೆಬ್ಬಾಳ ವ್ಯಾಲಿ ಮತ್ತು ನಾಲ್ಕನೆಯದು ವೃಷಭಾವತಿ ವ್ಯಾಲಿ. ಈ 4 ವ್ಯಾಲಿಗಳಿಗೆ ಸಂಬಂಧಿಸಿದಂತೆ ಸುಮಾರು 643 ಕೋಟಿ ರೂಪಾಯಿಗಳಷ್ಟು ಹಣವನ್ನು estimate ಮಾಡಿ, ಇದಕ್ಕೆ agreement ಮಾಡಿಕೊಂಡು ಈ ಕಾರ್ಯಕ್ರಮ ಮಾಡಿದ್ದಾರೆ. ಹೂಳೆತ್ತುವುದು ಎಷ್ಟಿದೆಯೆಂದರೆ, 252 ಕಿಲೋಮೀಟರ್! ಅಂದರೆ, ಇಲ್ಲಿಂದ ಮೈಸೂರಿಗೆ ಎರಡು ಸಲ ಹೋಗಿ ಬರಬಹುದು! ಇಲ್ಲವೇ ದಾವಣಗೆರೆ ಹೋಗಬಹುದೆಂದು ಕಾಣುತ್ತದೆ! ಅಷ್ಟು ಉದ್ದದ ಹೂಳು ತೆಗೆಯುವ ಕೆಲಸ ಮಾಡಿದ್ದಾರೆ. ಈ ಹೂಳು ತಗೆಯುವುದರ ಜೊತೆಗೆ, ಸರ್ಕಾರ ಮೊದಲಿನಂದಲೂ ವಿವಿಧ ರೀತಿಯಲ್ಲಿ ಬೇಕಾದಷ್ಟು ಹೂಳನ್ನು ತೆಗೆಯುತ್ತಾ ಬಂದಿದೆ. ಇದು ಕೇವಲ ಈ ವರ್ಷ, ಕಳೆದ ವರ್ಷ ಪ್ರಾರಂಭವಾಯಿತೆಂದು ನಾನು ಹೇಳಲು ತಯಾರಿಲ್ಲ. ಕಳೆದ 20–30–40 ವರ್ಷಗಳಿಂದಲೂ, ಈ ಸಮಸ್ಯೆ ಬಂದಾಗೆಲ್ಲ ಹೂಳು ತೆಗೆಯುವ ಕೆಲಸ ಮಾಡಿದೆ. ಇದರ ಬಗ್ಗೆ agreement ಮಾಡಿಕೊಳ್ಳುವ ಸಂದರ್ಭದಲ್ಲಿ ಅಶೋಕ್‌ರವರೆ, ತಾವು ಬಂದಿದ್ದರೆ, ಚೆನ್ನಾಗಿರುತ್ತಿತ್ತು. ತಾವು District Minister ಆಗಿದ್ದೀರಿ. ತಾವಾದರೂ ಇದ್ದರೆ ನಮಗೆ ಸಂತೋಷ. ಬನ್ನಿ, ಬನ್ನಿ. ಈ ಕೆಲಸವನ್ನು ತಗೆದುಕೊಳ್ಳುವ ಸಂದರ್ಭದಲ್ಲಿ 74ನೇ ತಿದ್ದುಪಡಿಯ ಪ್ರಕಾರ ಸ್ಥಳೀಯ ಸಂಸ್ಥೆಗಳು ಇಂತಹ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕಾದರೆ, ಅಧಿಕಾರದಲ್ಲಿರಬೇಕೆಂಬುದನ್ನು ಕಾರ್ಪೋರೇಷನ್‌ರವರು ಕೂಡ ಕೇಂದ್ರ ಸರ್ಕಾರ ಮತ್ತು ಕರ್ನಾಟಕ ರಾಜ್ಯ ಸರ್ಕಾರ, ಎರಡೂ ಸೇರಿ ಇಲ್ಲಿ ಒಂದು agreement ಮಾಡಿಕೊಂಡಿವೆ. ಇದರ ಜೊತೆಗೆ, ಇದನ್ನು ಮಾಡುವಂತಹ ಸಂದರ್ಭದಲ್ಲಿ ಕಾರ್ಯರೂಪಕ್ಕೆ ಬರಬೇಕಾದರೆ, ಕೇಂದ್ರ ಸರ್ಕಾರದ agreement ಪ್ರಕಾರ 6 ತಿಂಗಳಿನಲ್ಲಿ three tier ಸಂಸ್ಥೆ, ಏನೆಂದರೆ, Area Sabha, Ward Committee, ಕಾರ್ಪೋರೇಷನ್‌ನಲ್ಲಿ ಚುನಾಯಿತ ಪ್ರತಿನಿಧಿಗಳು, ಇವೆಲ್ಲವೂ ಇರಬೇಕೆಂದು agreement ನಲ್ಲಿ ಅವರು ನಿಗದಿ ಮಾಡಿದ್ದಾರೆ. ಈ ಎಲ್ಲ ಸಮಿತಿಗಳ ರಚನೆಯಾಗಿದೆಯೋ ಇಲ್ಲವೋ ಎನ್ನುವುದನ್ನು ಉತ್ತರ ಹೇಳುವಾಗ

ಹೇಳಬೇಕು. ಈ ಬಗ್ಗೆ ನಮ್ಮ ಶಾಸಕರನ್ನು ಕೇಳಿದರೆ, ಯಾವ ಕಮಿಟಿಯೂ ಆಗಿಲ್ಲ, ಯಾವ ವಾರ್ಡ್ ಸಭೆಯೂ ಆಗಿಲ್ಲ, ಬೇರೆ ಯಾವ ಏರಿಯಾ ಸಭೆಯೂ ಆಗಿಲ್ಲವೆಂದು ಶಾಸಕ ಮಿತ್ರರು ತಿಳಿಸುತ್ತಾರೆ. ಇಲ್ಲಿ ಭಾರತ ಸರ್ಕಾರದ 50%, ರಾಜ್ಯ ಸರ್ಕಾರದ 35% ಮತ್ತು ಸ್ಥಳೀಯ ಸಂಸ್ಥೆಗಳ 15% ಆಗಿರುವಂತಹ ಸಂದರ್ಭದಲ್ಲಿ ಕೆಲವು ಮಾಧ್ಯಮದಲ್ಲಿ ಈ ಬಗ್ಗೆ ವರದಿ ಬಂತು. ಏನೆಂದರೆ, 'ಹೂಳೆತ್ತುವ ಕೆಲಸದಲ್ಲಿ ಭಾರಿ ಅವ್ಯವಹಾರ ನಡೆದಿದೆ. ಇದು ಹಗರಣಗಳ ರಾಜ' ಎಂದು ಕರೆಯಬಹುದೆಂದು ಕೆಲವು ಪತ್ರಿಕೆಗಳಲ್ಲಿ ಬಂದಿದೆ. ಇದರ ಬಗ್ಗೆ ಪ್ರಜಾವಾಣಿ ಪತ್ರಿಕೆಯಲ್ಲಿ ಐಟಂ ಹಾಕಿ ಬರೆದಿದ್ದರು. 'ಹಗರಣಗಳ ರಾಜ' ಎಂದರೆ ಏನೆಂದು ನಾನು ಇದನ್ನು ನೋಡಿದೆ. ಏಕೆಂದರೆ ಈಗ ಕಾರ್ಪೋರೇಷನ್‌ಗೆ ಸುಬ್ರಹ್ಮಣ್ಯರವರು ಬಂದಿದ್ದಾರೆ. ನಾನು ಅವರ ಬಗ್ಗೆ ಹೇಳುವುದಕ್ಕೆ ತಯಾರಿಲ್ಲ. ಪ್ರಾಮಾಣಿಕತೆಗೆ, ನಿಷ್ಠೆಗೆ ಅವರದೇ ಆದ ಕಾರ್ಯಶೈಲಿಯಲ್ಲಿ ಅವರು ಕೆಲಸ ಮಾಡುತ್ತಿದ್ದಾರೆ. ಅವರು Finanace Department ನಲ್ಲಿದ್ದಾಗ ಕೆಲಸ ಮಾಡಿರುವುದನ್ನು ನಾವು ನೋಡಿದ್ದೇವೆ. ಅದೇ ರೀತಿ ಅವರು ಬೇರೆ ಬೇರೆ ಕಡೆಗಳಲ್ಲೂ ಕೆಲಸ ಮಾಡಿದ್ದಾರೆ. ಇದನ್ನು ಅವರು ಮಾಡಿದ್ದಾರೆಂದು ನಾನು ಹೇಳಲು ತಯಾರಿಲ್ಲ. ಇದನ್ನು Chief Minister ಮಾಡಿದ್ದಾರೆಂದು ಹೇಳಲೂ ನಾನು ತಯಾರಿಲ್ಲ. ಇಲ್ಲವೇ Chief Minister ಇದರಲ್ಲಿ ಭಾಗಿಯಾಗಿದ್ದಾರೆಂದು ಹೇಳಲೂ ನಾನು ತಯಾರಿಲ್ಲ. ಇಲ್ಲವೇ, District Minister ಇದರಲ್ಲಿ ಭಾಗಿಯಾದ್ದಾರೆಂದು ನಾನು ಹೇಳಲೂ ತಯಾರಿಲ್ಲ. ಏಕೆಂದರೆ, ಅಧ್ಯಕ್ಷರೇ, ಇದು ವಿಶೇಷ ಹಗರಣವಾಗಿದೆ. ನಾವು ಬೇಕಾದಷ್ಟು ಹಗರಣಗಳನ್ನು ನೋಡಿದ್ದೇವೆ. ಬಾಟ್ಲಿಂಗ್ ಹಗರಣ ನೋಡಿದ್ದೇವೆ, ಮೇವು ಹಗರಣ ನೋಡಿದ್ದೇವೆ, ಛಾಪಾ ಕಾಗದ ಹಗರಣ ನೋಡಿದ್ದೇವೆ, ಬರಗಾಲದಲ್ಲಿ ಪೂರೈಸಿದ ಅಕ್ಕಿ ತಿಂದ ಹಗರಣವನ್ನೂ ನಾವು ನೋಡಿದ್ದೇವೆ, ಅದರ ಬಗ್ಗೆ ನಮ್ಮ ಶಿವರಾಮುರವರು ಅಲ್ಲೆಲ್ಲೋ ಪ್ರಸ್ತಾಪಿಸಿದ್ದರು. ಬರಗಾಲದಲ್ಲಿ ಪೂರೈಸಿದ ಅಕ್ಕಿಯನ್ನು ತಿಂದ ಹಗರಣವನ್ನೂ ನೋಡಿದ್ದೇವೆ, ಚಿನ್ನ ಅಡವಿಟ್ಟ ಹಗರಣವನ್ನೂ ನೋಡಿದ್ದೇವೆ, ಬ್ಯಾಂಕಿಂಗ್ ಹಗರಣವನ್ನೂ ನೋಡಿದ್ದೇವೆ, ಷೇರು ಮಾರುಕಟ್ಟೆ ಹಗರಣವನ್ನು ನೋಡಿದ್ದೇವೆ, ಶವ ಪೆಟ್ಟಿಗೆ ಹಗರಣವನ್ನೂ ನೋಡಿದ್ದೇವೆ, ಬಿತ್ತನೆ ಬೀಜ ಹಗರಣದ ಬಗ್ಗೆ ನಿನ್ನೆ ಮಾತನಾಡುತ್ತಿದ್ದರು. ಪಾರ್ಲಿಮೆಂಟ್‌ನಲ್ಲಿ ಪ್ರಶ್ನೆಗಳನ್ನು ಕೇಳುವುದಕ್ಕೂ ಆದ ಹಗರಣವನ್ನೂ ನೋಡಿದ್ದೇವೆ, ಟೆಲಿಫೋನ್ ಹಗರಣವನ್ನೂ ನೋಡಿದ್ದೇವೆ ಮತ್ತು ಹೆಂಗಸರನ್ನು deport ಮಾಡುವಂತಹ ಹಗರಣವನ್ನೂ ನೋಡಿದ್ದೇವೆ. ಆದರೆ ಇದು ಅಂತಹ

ಹಗರಣವೇನೂ ಅಲ್ಲ. ಇದು ಬಹಳ ವಿಶೇಷವಾದ ಹಗರಣ. ಲಕ್ಷಾಂತರ ಜನರು ದಿನನಿತ್ಯ ಮಲ, ಮೂತ್ರ ವಿಸರ್ಜನೆ ಮಾಡಿದ್ದಾರಲ್ಲ, ಆ ಮಲ, ಮೂತ್ರವನ್ನೇ ಕಬಳಿಸಿದಂತಹ ಹಗರಣ ಇದಾಗಿದೆ. ಇದು ಹಗರಣಗಳ ರಾಜ. ಇದರ ರೂವಾರಿ ಯಾರು? ಯಾರು ಎಂದು ಹೇಳುವುದಕ್ಕೂ ನಾನು ತಯಾರಿಲ್ಲ. ನಿಮ್ಮ ಹೆಸರು, ಪಾಪ! ಈಗಿರುವ ಕಾರ್ಪೋರೇಷನ್ ಅಫೀಸರ್ ಇಲ್ಲವೇ ಪಕ್ಕದಲ್ಲಿ ಗೌರವ್ ಗುಪ್ತಾ ಕುಳಿತಿದ್ದಾರೆ. ಅವರ ಬಗ್ಗೆಯೂ ನಾನು ಹೇಳುವುದಕ್ಕೆ ತಯಾರಿಲ್ಲ. ಯಾರ ಬಗ್ಗೆಯೂ ಹೇಳುವುದಕ್ಕೆ ತಯಾರಿಲ್ಲ. ಇಲ್ಲೊಂದು ವಿಶೇಷವಾದ ತಂಡವಿದೆ, ಈ ದೊಡ್ಡ ತಂಡದ ಹಗರಣದ ರೂವಾರಿ ಯಾರು? ಸೃಷ್ಟಿಕರ್ತರು ಯಾರು ಎಂಬುದನ್ನು ನಾವು ಕಷ್ಟಪಟ್ಟು ತಿಳಿದುಕೊಳ್ಳಬೇಕಾಗಿದೆ. ನಾವು ಇಲ್ಲಿಗೆ World Bankನ ಅನುಭವಸ್ಥರನ್ನೂ ಕರೆದುಕೊಂಡು ಬಂದೆವು. ಪಾಪ! ಅಶೋಕ್‌ರವರು ಇದ್ದಾರಲ್ಲ, ನಮ್ಮ ಸಾಮ್ರಾಟ್ ಅಶೋಕ್‌ರವರನ್ನೇ ಅವರು ಮೀರಿಸಿಬಿಟ್ಟಿದ್ದಾರೆ! ಈ ಹಗರಣದಲ್ಲಿ ಅವರಿಗೆ ಟೋಪಿ ಹಾಕಿದ್ದಾರೆ! ಪಾಪ! ಅವರು ಪತ್ರಿಕೆಗೆ ಹೇಳಿದರು. 'ಇದು ಬಹಳ ತಪ್ಪಾಗಿದೆ, ಇದರ ವರದಿಯನ್ನು ನನಗೆ ಕೊಡಿ. ನಾವು ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಂಡು ಶಿಕ್ಷೆ ಮಾಡುತ್ತೇವೆ' ಎಂದರು. ಮೂರು ತಿಂಗಳಾದ ನಂತರ ಅವರಿಗೆ ಒಂದು ವರದಿ ಬಂದಿದೆ. ಆ ವರದಿಯ copy ನನ್ನ ಬಳಿ ಇದೆ. ಇವರು ಯಾರು ಎಂದರೆ, ಮುಂದಿನ ಚುನಾವಣೆಗೆ ಬಸವನಗುಡಿ ಎಲೆಕ್ಷನ್‌ಗೆ ಇವರಿಗೆ ಟಿಕೇಟ್ ಬೇಕಂತೆ! ಇಲ್ಲವೇ ನಮ್ಮ South Constituencyಯಿಂದ....

ಶ್ರೀ ಡಿ.ಕೆ.ಶಿವಕುಮಾರ್: ಕಾಂಗ್ರೆಸ್‌ನಂದಲೇ ಅಂದುಕೊಳ್ಳಿ. ನಮ್ಮ South Parliament ನಿಂದ ಅವರಿಗೆ ಟಿಕೇಟ್ ಬೇಕಂತೆ. ಅದು ಬಿಟ್ಟರೆ, next, ಇದು ಆಗುವುದಕ್ಕಿಂತಲೂ ಮುಂಚಿತವಾಗಿ ಅವರು ಈ ರಾಜ್ಯದ Chief Secretary ಆಗಬೇಕಂತೆ. ಅವರ ಹೆಸರನ್ನು ಹೇಳಬೇಕಾ? ಇದು Senior Officer ಅವರ ನಾಯಕತ್ವ ಯಾರು ಎಂದರೆ ಶಿಲ್ಡ್ ಕಿಂಗ್ ಜಯರಾಜ್ ಎಂದು. ಅವರ ನಾಯಕತ್ವದಲ್ಲಿ ಇದು ನಡೆಯುತ್ತಿದೆ. ಕಾರ್ಪೋರೇಷನ್‌ಗೆ ಬರಲಿ, ಎಲ್ಲಿಗೇ ಬರಲಿ ಅವರ ಒಂದು ದೊಡ್ಡ ತಂಡವನ್ನೇ ತೆಗೆದುಕೊಂಡು ಬರುತ್ತಾರೆ. ಕೆ.ಪಿಸಿ. ಯಿಂದ ಆಗಲಿ, ಬೇರೆ ಬೇರೆ ಕಡೆಯಿಂದ ಆಗಲಿ ಮೂರ್‍ನಾಕು ಜನ ಅಧಿಕಾರಿಗಳನ್ನು ಕರೆದುಕೊಂಡು ಬಂದು ಅವರ mouds operandi ಇದೆಯಲ್ಲ, ಬಹಳ ವಿಶೇಷವಾದ Operation. ನಾನು ಅದರ ಬಗ್ಗೆ ವಿವರಿಸಿ ಹೇಳುತ್ತೇನೆ. ಸಚಿವರಾದ ಸಾಮ್ರಾಟ್ ಅಶೋಕ್‌ರವರನ್ನೇ ದಾರಿ ತಪ್ಪಿಸಿಬಿಟ್ಟರು ಎಂದರೆ, ಇವರು ಪಾಪ ಮೂರು ಸಲ ಎಂ.ಎಲ್.ಎ. ಆಗಿದ್ದಾರೆ. ಅವರಿಗೆ

reply ಕೊಟ್ಟಿದ್ದಾರೆ. ನಾನು ಏಕೆ ಅದನ್ನು ಹೇಳುತ್ತಿದ್ದೇನೆ ಎಂದರೆ ನಾನು ಆ replyನ್ನು ಓದುತ್ತೇನೆ. ಇವರ mouds operandi ಹೇಗೆ ಇವರು ಬೇರೆ ಕಡೆಯಿಂದ ಅಧಿಕಾರಿಗಳನ್ನು ಕರೆದುಕೊಂಡು ಬರುವುದು. ಅವರ ಕೈಯಲ್ಲಿ ಮಾತ್ರ ಇಂಥ ಕೆಲಸಗಳನ್ನು ಮಾಡಿಸುವುದು. ನಾವೂ ಕೂಡ ಅವರನ್ನು ಬಹಳ ಹಚ್ಚಿಕೊಂಡಿದ್ದವು ಬಿಡಿ. ನಾವು ಇವರನ್ನು ಬಹಳ ಹತ್ತಿರದಿಂದ ತಬ್ಬಾಡಿದ್ದೇವೆ. ನಮ್ಮದೂ ಇದರಲ್ಲಿ ಬೇಕಾದಷ್ಟು ತಪ್ಪುಗಳಿದೆ. ಅದು ಬೇರೆ ವಿಚಾರ. ಆದರೆ ಇರತಕ್ಕ ವಿಚಾರವನ್ನು ತಮಗೆ ಹೇಳುತ್ತಿದ್ದೇನೆ. ಸತ್ಯವನ್ನು ನಾನು ಏಕೆ ಮುಚ್ಚಲಿ. ನಮಗೆ ಇದರ ಬಗ್ಗೆ ಅನುಭವ ಇದೆ. ಇಲ್ಲಿ ಏನಾಗಿದೆ ಎಂದರೆ, ಮೊನ್ನೆ Chief Minister ರವರಿಗೆ ಒಂದು reply ಕೊಟ್ಟಿದ್ದಾರೆ. ಎಂ ಶ್ರೀನಿವಾಸ್, ಎಂ.ಎಲ್.ಸಿ.ಯವರು ಒಂದು ಪ್ರಶ್ನೆ ಕೇಳಿದ್ದಾರೆ. ಈಗಲೂ ಒಂದು reply ಬಂತು. Chief Minister ರವರು ಸಹಿ ಹಾಕಿದ್ದಾರೆ. Starred question 855, Legislative Council M. Srinivas, M.L.C.ರವರು 26.07.2007ರಂದು Hon'ble Chief Ministerರವರಿಗೆ ಒಂದು ಪ್ರಶ್ನೆ ಕೇಳಿದ್ದಾರೆ. ಏನು ಕೇಳಿದ್ದಾರೆಂದರೆ "what is the quantity of silt which has been taken so far?"14 ಲಕ್ಷದ 52 ಸಾವಿರದ 480 cubic metres ಎಂದು ಉತ್ತರದಲ್ಲಿ ಹೇಳುತ್ತಾರೆ. ಇಷ್ಟು cubic metres 252 ಕಿಲೋಮೀಟರ್ ಅಷ್ಟು ದೂರ, ಇದನ್ನು ತೆಗೆಯಬೇಕಾದರೆ, ನಾನೂ ಸ್ವಂತ ಲಾರಿಯನ್ನು ಇಟ್ಟುಕೊಂಡಿರುವ ಅನುಭವ ಇದೆ. ನಾನು ಗ್ರಾನೈಟ್ business ಮತ್ತೊಂದನ್ನೆಲ್ಲ ಮಾಡಿದ್ದೇನೆ. ಒಂದು ಲಾರಿಗೆ ಮಲಮೂತ್ರವನ್ನೆಲ್ಲ ವಿಸರ್ಜನೆ ಮಾಡಿದ್ದೇವಲ್ಲ, ಇದೆಲ್ಲ ಸಿಲ್ಟ್ ಏಕೆಂದರೆ ಇದು ತೇವ ಆಗಿರುತ್ತದೆ, ಏನೇನೋ ಇರುತ್ತದೆ, ನಮ್ಮ ಕಚಡಾಗಳೆಲ್ಲ ಅದರಲ್ಲಿ ಇರುತ್ತದಲ್ಲ, 5 ಟನ್ maximum 6 ಟನ್ ಒಂದು ಲೋಡಿಗೆ ಹಾಕಬಹುದು. ನಾನು ಇದರ ಬಗ್ಗೆ ಅಧ್ಯಯನ ಮಾಡಿದ್ದೇನೆ. ನಾನು Urban Development Minister ಆಗಿ 2 ವರ್ಷ ಹಿಂದೆ ಕೆಲಸ ಸಹ ಮಾಡಿದ್ದೇನೆ. 14 ಲಕ್ಷದ 52 ಸಾವಿರದ 480 cubic meter ಎಂದರೆ 3 ಲಕ್ಷದ 90 ಸಾವಿರ ಲಾರಿ ಲೋಡುಗಳು ಎತ್ತಬೇಕು. ಹೆಚ್ಚು ಕಮ್ಮಿ 4 ಲಕ್ಷ ಲಾರಿ ಲೋಡುಗಳು. ಇದು ಬೆಂಗಳೂರಿನಿಂದ ಸಾಗಾಣಿಕೆ ಆಗಬೇಕು ಎಲ್ಲಿಗೆ ಸಾಗಾಣಿಕೆ ಆಗಬೇಕು? 15–20 ಕಿಲೋಮೀಟರ್ ದೂರಕ್ಕೆ ಎಂದು ಅವರು ಒಂದು ಜಾಗವನ್ನು ನಗದಿ ಮಾಡಿದ್ದಾರೆ. ನಮ್ಮ ಸಾಮ್ರಾಟ್ ಅಶೋಕ್‌ರವರಿಗೆ ಉತ್ತರವನ್ನು ಕೊಡುವಾಗ ಎಲ್ಲಿ ಎಂದು ಹೇಳಿದ್ದಾರೆ. ಏನು ಹೇಳಿದ್ದಾರೆಂದರೆ ಬೆಂಗಳೂರು University, ಓಕಳಿಪುರಂ low lying area, nearby low lying area, Railway Yard ಗೆ

ಹಾಕಿದ್ದಾರಂತೆ. ನಾನು ನಮ್ಮ ಸ್ನೇಹಿತರೊಂದಿಗೆ ರೈಲ್ವೆ ಯಾರ್ಡ್ officer ಹತ್ತಿರ ಹೋಗಿದ್ದೆ. ಏನು ಈ ರೀತಿ ಬಂದಿದೆಯಲ್ಲ, ರೈಲ್ವೆ ಯಾರ್ಡ್‌ಗೆ ಹಾಕಿಸಿಕೊಂಡಿದ್ದೀರಲ್ಲ, ನಿಮ್ಮ ಹತ್ತಿರ ಅದು ಬಂದಿರುವುದಕ್ಕೆ ಏನಾದರು ದಾಖಲೆ ಇದೆಯೇ, ನೀವು ಏನಾದರೂ ಹಣ ಕೊಟ್ಟು ತೆಗೆದುಕೊಂಡಿದ್ದೀರಾ? ಅದನ್ನು ಹಾಕಿಸಿಕೊಳ್ಳಲು ನೀವು ಏನಾದರೂ ಅನುಮತಿ ಕೊಟ್ಟಿದ್ದೀರ? ನೀವು ಇದನ್ನು ಇಲ್ಲಿಂದ ಬೇರೆ ಎಲ್ಲಿಗಾದರೂ shift ಮಾಡುತ್ತಿದ್ದೀರಾ? ಎಂದು ನಾನೇ ರೈಲ್ವೆ ಅಧಿಕಾರಿಗಳನ್ನು ಭೇಟಿ ಮಾಡಿದಾಗ ಕೇಳಿದೆ. ಅವರು ಅದಕ್ಕೆ ನಾವು ಏಕೆ ನಮ್ಮ ಜಾಗದಲ್ಲಿ ಅದನ್ನು ಹಾಕಿಸಿಕೊಳ್ಳೋಣ, ಹಾಕಿಸಿಕೊಳ್ಳುತ್ತೇವೆ, ಆ ರೀತಿ ಹಾಕಿಸಿಕೊಂಡು ಹಾಸನಕ್ಕೋ, ರಾಮನಗರಕ್ಕೋ, ಮೈಸೂರಿಗೋ, ಮಂಗಳೂರಿಗೋ ಎಲ್ಲಿಗಾದರೂ ಬೇಕಾದರೆ ನಾವು transport ಮಾಡಿಕೊಡುತ್ತೇವೆ. ಗೊಬ್ಬರವನ್ನು ಬೇಕಾದರೆ transport ಮಾಡುವುದಕ್ಕೆ ಲಾಲೂಪ್ರಸಾದ್‌ರವರು ಕಾನೂನಿನಲ್ಲಿ ಅವಕಾಶ ಮಾಡಿಕೊಟ್ಟಿದ್ದಾರೆ. ಆ ರೀತಿ ಮಾಡಿಕೊಡುತ್ತೇವೆಂದು ಅವರು ಹೇಳಿದರು. ಇಲ್ಲಾ ನೋಡಿ ಇಲ್ಲಿ ಬರೆದಿದ್ದಾರೆ, ನಮ್ಮ ಮಂತ್ರಿಗಳಿಗೆ ಬರೆದಿದ್ದಾರೆ, ರೈಲ್ವೇ ಡಂಪಿಂಗ್ ಯಾರ್ಡ್ ಎಂದು ಬರೆದಿದ್ದಾರೆ, ಇಲ್ಲಿ ಏನಾದರೂ ಅವಕಾಶ ಮಾಡಿದ್ದಾರೆಯೇ ಎಂದು ಕೇಳಿದಾಗ ಅವರು ನಮ್ಮಲ್ಲಿ ಏನೂ ಇಲ್ಲ ಎಂದು ಹೇಳಿದರು. ಅನಂತರ Universityಗೆ ಹೋದೆ. Bangalore University low lying area, ಎಂದು ಇದೆ. ಆ University area 300 ಎಕರೆ ಇದೆಯಲ್ಲ, ಅಲ್ಲಿಯ Registrarನ್ನು ಹೋಗಿ ಭೇಟಿ ಮಾಡಿದೆ. Vice Chancellor ರವರ P.A ಗೆ ಹೋಗಿ ನಮಗೆ ಇದರ ಬಗ್ಗೆ ಏನಾದರೂ ಬರೆದಿದ್ದಾರೆಯೇ ಎಂದು ಕೇಳಿದೆ. Education Minister ಇಲ್ಲವೆ Governorರವರನ್ನೇ ಕೇಳಬೇಕಲ್ಲ, ಏಕೆಂದರೆ ಅವರು Chancellor, ನಾನು ಅವರನ್ನು ಕೇಳಿದೆ, ಅವರನ್ನು ಕೇಳಿದಾಗ ಅವರು ಇಲ್ಲಾ, ನಮ್ಮ ಹತ್ತಿರ ಇಲ್ಲ ಎಂದು ಹೇಳಿದರು. ನಮಗೆ ಏನಾದರೂ ಶೋಧನೆ ಮಾಡುವುದಕ್ಕೆ ಈ ಮಲಮೂತ್ರದ ಬಗ್ಗೆ ವಿಶೇಷ ಏನದೆ ಎಂದು ಏನಾದರೂ ಮಾಡಿದ್ದಾರಾ ಎಂದು ಅವರನ್ನು ನಾನು ಕೇಳಿದೆ, ಅವರು ನಮಗೆ ಏನೂ ಗೊತ್ತಿಲ್ಲ, ನಾವು ಏನೂ Permission ಕೊಟ್ಟಿಲ್ಲ ಎಂದು ಹೇಳಿದರು. ನಾನು ಏಕೆ ಇದನ್ನು ಹೇಳುತ್ತಿದ್ದೇನೆಂದರೆ ಇಲ್ಲಿ agreement ಮಾಡಿಕೊಂಡಿದ್ದಾರೆ. ಅದರ ಪ್ರಕಾರ ಎಲ್ಲಾದರೂ ಒಂದು ಜಾಗಕ್ಕೆ ಈ ವೇಸ್ಟ್‌ನ್ನು ತೆಗೆದುಕೊಂಡು ಹಾಕಬೇಕಾದರೆ ನೋಟಿಫಿಕೇಷನ್ ಆಗಬೇಕು, Permission ಆಗಬೇಕು. ವಿಡಿಯೋ ಆಗಬೇಕು, ಪ್ರತಿ ಹಂತದಲ್ಲೂ ಲಾಗ್ ಪುಸ್ತಕವನ್ನು maintain ಮಾಡಬೇಕು. ಇವೆಲ್ಲ ಬಹಳ ಕ್ರಮಬದ್ಧವಾಗಿ ನಡೆಯಬೇಕು. ಇದೆಲ್ಲ

agreement ನಲ್ಲೇ ಇದೆ. ಏನು ಜಯರಾಜ್ ಸಾಹೇಬರು Corporation ಬೃಹತ್ Bangalore ಪರವಾಗಿ ಕೇಂದ್ರ ಸರ್ಕಾರ ರಾಜ್ಯ ಸರ್ಕಾರದ ಈ Contractor ಗಳ ಜೊತೆ ಏನು agreement ಮಾಡಿಕೊಂಡಿದ್ದಾರೆ. ಅವರು ಹೇಳಿದ್ದಾರೆ. "It should be in a notified place." ಅವರು agreement ನಲ್ಲಿ ಏನು ಮಾಡಿಕೊಂಡಿದ್ದಾರೆ ಎಂಬುದನ್ನು ಓದುತ್ತೇನೆ. "Progress: The Progress, Photographs of all the major events shall be submitted by the Contractor along with proposed progress no extra Payment will be made for the supply of Photographs, video recording of the progress of the work shall be maintained from the beginning till completion of the work as directed by the employer representative and true copies of vedio cassette shall be submitted at extra cost of the employer." ಅನಂತರ ಎಲ್ಲಿ ಹಾಕುತ್ತಾರೆಂದರೆ, ಅವರು ಎಲ್ಲಿ ಹಾಕಬೇಕಾದರೂ ಕೂಡ ಆ ಜಾಗ ಒಂದು ನೋಟಿಫಿಕೇಷನ್ ಆಗಬೇಕು. Deputy Commissioner ನೋಟಿಫೈ ಮಾಡಬೇಕು. ಇಲ್ಲದಿದ್ದರೆ Corporation Commissioner ಇಂಥ ಜಾಗದಲ್ಲಿ ಹಾಕಬೇಕೆಂದು notification ಮಾಡಬೇಕು. " Disposal of executed earth and debris: The contractor shall make his own arrangement to dispose of the executed earth and debris. Further, to convey the same from the work spot and dispose it in authorized notified dumping project area by the employer, where the same shall be handed and disposed in such a manner that it should not cause nuisance in any manner and should be acceptable to the authorities concerned." ವಿಶ್ವವಿದ್ಯಾನಲಯದವರೂ ನಮಗೆ ಗೊತ್ತಿಲ್ಲವೆಂದು ಹೇಳುತ್ತಾರೆ. ಹೆಣ್ಣೂರಿನವರು ನಮಗೆ ಗೊತ್ತಿಲ್ಲವೆಂದು ಹೇಳುತ್ತಾರೆ. ರೈಲ್ವೆಯವರೂ ನಮಗೆ ಗೊತ್ತಿಲ್ಲವೆಂದು ಹೇಳುತ್ತಾರೆ. 20–30–45 ವರ್ಷದಿಂದ drive ಮಾಡಿಕೊಂಡು ಬಂದಿದ್ದರಲ್ಲ, culvert,re-usable material ಮತ್ತೊಂದು ಎಲ್ಲಾ, ಆ ಸಾಮಾನನ್ನು ತೆಗೆಯಬೇಕಾದರೂ ಕೂಡ

re-usable material, ಎಂದು stock ಇಡಬೇಕಂತೆ. ಏನು ಹೇಳುತ್ತಾರೆಂದರೆ "All the re-usable materials that for dismantling like size stones, jerk stones, mud stones, slabs shall be stocked neatly and safely and joint measurement shall be taken and new re-usable material which are for the construction shall be used only with the prior approval of the employer representative." ನಾನು ನಮ್ಮ ಅಧಿಕಾರಿಗಳನ್ನು ಕೇಳಿದೆ. ಕೆಲವನ್ನು

Right To Information Act ನಲ್ಲಿ ತೆಗೆದುಕೊಂಡೆ. ಯಾವುದೂ ಕೂಡ ಇಲ್ಲಯವರೆಗೆ ಇದು re-usable, ಇದು ಅನುಕೂಲಕ್ಕೆ ಬರುತ್ತದೆ ಎಂದು ಯಾರೂ ಕೂಡ ಹಾಕಿದನ್ನು ನಾನು ನೋಡಿಲ್ಲ. ಇಲ್ಲಿ ಎಲ್ಲಾ ಕೆಲಸಗಳಿಗೂ ಸುಮಾರು ಜನರ ಹತ್ತಿರ agreement ಅನ್ನು ಮಾಡಿಕೊಂಡಿದ್ದಾರೆ. ಏನು agreement ಮಾಡಿಕೊಂಡಿದ್ದಾರೆಂದರೆ ಕೆಲವರಿಗೆ work order ನ್ನು ಕೊಟ್ಟಿದ್ದಾರೆ, Mahadev High-tech engineering Pvt Ltd., Hebbal Valley Package 20.3.07, the contract value 60.745 crores based on rates quoted. ಅವರಿಗೆ 2003 ಕ್ಕಿಂತ 64% above ಕೊಡುತ್ತಾರೆ. East Coast Constructions ಗೆ 45 ಕೋಟಿ ರೂಪಾಯಿ ಕೆಲಸ, ಅವರಿಗೆ ಅವತ್ತಿನ ಎಸ್.ಆರ್ ರೇಟ್‌ಗಿಂತ 34% above ಕೊಡುತ್ತಾರೆ. Vrushabavathi Valley East Coast ಗೆ ಅವತ್ತಿನ ಎಸ್.ಆರ್ ರೇಟ್‌ಗಿಂತ 35% above ಕೊಡುತ್ತಾರೆ. GVR Engeneering Limited ಗೆ ಹೆಬ್ಬಾಳ main package ನಲ್ಲಿ 50% ಕೊಟ್ಟಿದ್ದಾರೆ. ಅದ್ಯಾರೋ Central Government ನ EPAP ಯವರಂತೆ. ಪಾಪ ಅವನೇನೂ ಕೊಡುವುದಿಲ್ಲವಲ್ಲ ! Centeral Government ನವರು ಸರಿಯಾಗಿ ಏನೂ ಕೊಡುವುದಿಲ್ಲ, ಅವರ ಹತ್ತಿರ ಬಹಳ ಕಷ್ಟ. ಅವರಿಗೆ 34 ಕೋಟಿ ರೂಗಳದ್ದು 16% ಕೊಟ್ಟಿದ್ದಾರೆ. ಅವರಿಗೆ ಮಾತ್ರ 16% ಕೊಟ್ಟಿದ್ದಾರೆ. ಬೇರೆಯವರಿಗೆ 64%, ಕೆಲವರಿಗೆ 16% ಕೊಟ್ಟಿದ್ದಾರೆ. ಈ ರೀತಿಯಾಗಿ agreement ಅನ್ನು ಅವರು ಮಾಡಿಕೊಂಡಿದ್ದಾರೆ. ಆಧ್ಯಕ್ಷರೆ, ತಾವು ಇದನ್ನು ಗಮನಿಸಬೇಕು. ಕೆಲವರಿಗೆ ಸುಲಭವಾದಂತಹ ಕೆಲಸ ಕೊಡಲಾಗಿದೆ. ಇಲ್ಲಿ ಕೆಲವು ಹೂಳೆತ್ತುವ ಕೆಲಸ ಇದೆ, ಕೆಲವು ಕಲ್ಲು ಕಟ್ಟುವ ಕೆಲಸ ಇದೆ. ಕೆಲವು ಕಂಬಿ ಹಾಕುವ ಕೆಲಸ ಇದೆ. ಹೀಗೆ ವಿವಿಧ ರೀತಿಯ ಕೆಲಸಗಳಿವೆ. ನಾವು ಮತ್ತು ನೀವು ಹಳ್ಳಿಗಳಲ್ಲಿ ಬೇಕಾದಷ್ಟು ನೋಡುತ್ತೇವೆ. ಯಾರಾದರು 1 ರೂಪಾಯಿ ಕೋಟ್ ಮಾಡುತ್ತಾರೆ ಎಂದಿಟ್ಟು ಕೊಳ್ಳಿ. ಈಗ ನೋಡಿ ಸುಮ್ಮನೆ ನಾನು ಉದಾಹರಣೆಗೆ ಹೇಳಬಯಸುತ್ತೇನೆ. ಚಲ್ಲಘಟ್ಟ ವ್ಯಾಲಿಯಲ್ಲಿ ಯಾವುದೋ ಒಂದು ಕೆಲಸ ಇತ್ತು ಅದಕ್ಕೆ ಒಂದು ಕ್ಯೂಬಿಕ್ ಮೀಟರ್‌ಗೆ 2,500 ರೂ.ಗಳ ರೇಟ್ ಫಿಕ್ಸ್ ಮಾಡಲಾಗಿದೆ. ಅವನ quoted rate 2,500 ರೂ.ಗಳು. ಆದರೆ ಅವನಿಗೆ 4,500 ರೂಗಳಿಗೆ agreement ಅನ್ನು ಮಾಡಿಕೊಡಲಾಗಿದೆ. 80% ಹೆಚ್ಚಳ ಇನ್ನೊಂದು ಕಡೆ dismantling of SSM Lime water ಕಾಮಗಾರಿಗೆ ರೇಟ್ 55 ಫಿಕ್ಸ್ ಮಾಡಲಾಗಿದೆ. ಅವನ quoted rate 55% ಇದ್ದರೆ, agreement ಮಾಡಿಕೊಟ್ಟಿರುವುದು 180% ಗೆ. ಅಂದರೆ 227% ಅವರಿಗೆ extra. Slab

ಹಾಕುವುದಕ್ಕೆ 37% estimate ಮಾಡಿದ್ದಾರೆ. ಅವನು 52% quote ಮಾಡಿದ್ದಾನೆ. ಅವನಿಗೆ agreement ಮಾಡಿಕೊಟ್ಟಿರುವುದು 120 ಕ್ಕೆ. ಹೀಗೆ ಕೆಲವು ಕಡೆ ಕೆಲವರಿಗೆ 39 ರೂ. estimate ಆಗಿ, 54 ರೂ. quote ಮಾಡಿ,ತಿರುಗಿ ಅವನಿಗೆ agreement ಮಾಡಿಕೊಟ್ಟಿರುವುದು 180 ರೂ.ಗಳಿಗೆ ಅಂದರೆ 335% extra ಹೀಗೆ ಪ್ರತಿಯೊಂದು ಪ್ಯಾಕೇಜ್‌ನಲ್ಲೂ ಒಂದು ಪಟ್ಟಿ ಮಾಡಬಹುದು. ನಾನು ನಿಮಗೆ ಚೆಲ್ಲಘಟ್ಟದ್ದು ಸುಮ್ಮನೆ ಉದಾಹರಣೆಯಾಗಿ ಹೇಳಿದ್ದೇನೆ. Next Hebbal Valley ಗೆ ಬರೋಣ. EWE in water fore conditions, ಇಲ್ಲಿ estimated ರೇಟ್ 41 ರೂ.ಗಳು. ಅವನು quote ಮಾಡಿದ್ದು 68 ರೂ.ಗಳು. ಅವನಿಗೆ agreement ಮಾಡಿಕೊಟ್ಟಿದ್ದು 210 ರೂ.ಗಳಿಗೆ ಯಾರಾದರೂ quote ಮಾಡಿದ್ದಕ್ಕಿಂತ ಜಾಸ್ತಿ ರೇಟ್‌ಗೆ agreement ಮಾಡಿಕೊಡುತ್ತಾರೆಯೇ? ಏನೋ ಸಿಮೆಂಟ್, ಕಬ್ಬಿಣ ಇತ್ಯಾದಿ ಕೆಲವು ವಿಚಾರದಲ್ಲಿ ಜಾಸ್ತಿ ಬೆಲೆಯಾಯಿತು ಎಂದರೆ ಅದಕ್ಕೆ ಸಂಬಂಧಪಟ್ಟಂತೆ ಈ ರೀತಿ ಮಾಡುವುದಿದೆ. ಆದರೆ ಇದೆಲ್ಲಾ ಮಣ್ಣಿನ ಕೆಲಸ. ಈ ಕೆಲಸಗಳಿಗೆಲ್ಲಾ ಇದು ಅನ್ವಯಿಸುವುದಿಲ್ಲ. ಅಂದರೆ 405% extra. ಹೀಗೆ ಕೆಲವು ಕಡೆ 40%, ಕೆಲವು ಕಡೆ 153%, ಕೆಲವು ಕಡೆ ಸಾವಿರಾರು ಪರ್ಸೆಂಟ್ ಇದೆ. ಹೆಬ್ಬಾಳ ವ್ಯಾಲಿಯಲ್ಲಿ Pointing of SMS after the joints, ಈ ಕೆಲಸಕ್ಕೆ estimated rate was 27%, quoted 300%. ಪಾಪ! ಅವನು 300 ರೂ. Quote ಮಾಡಿದ. ಅವನಗೆ ಅಷ್ಟಕ್ಕೇ agreement ಮಾಡಿದರು. ಅಂದರೆ, 983% above ಆಯಿತು. ಇನ್ನೊಂದು ಕಡೆ Drilling of all kinds of soils ಗೆ ರೇಟ್ 25 ಸಾವಿರ ರೂ. ಇರುತ್ತದೆ. ಅದಕ್ಕೆ estimated 2500 ರೂ.ಗಳಿದ್ದರೆ, ಅವನು quote ಮಾಡಿದ್ದು 35 ಸಾವಿರ ರೂ. ಅವನಿಗೆ agreement ಮಾಡಿಕೊಟ್ಟಿದ್ದೂ ಸಹ 35 ಸಾವಿರ ರೂ.ಗಳಿಗೆ ಅಂದರೆ, 1300 times extra ಆಗಿದೆ. ಎಲ್ಲಾ ಕಡೆಗಳಲ್ಲೂ ಇದೇ ರೀತಿಯಾಗಿದೆ. ಹೆಬ್ಬಾಳ, ಚೆಲ್ಲಘಟ್ಟ ಎಲ್ಲಾ ಕಡೆ ಇದೇ ರೀತಿಯಾಗಿದೆ. ಕೋರಮಂಗಲದಲ್ಲೂ same ಇದೇ package ನಲ್ಲಿ ಇದೇ ರೀತಿಯಾಗಿದೆ. ಈ ರೀತಿ ಪ್ರತಿಯೊಂದು ಪ್ಯಾಕೇಜ್‌ನಲ್ಲೂ ಕೂಡ ಆಗಿದೆ. ಏನೇ ಒಂದು ಮಾಡಬೇಕಾದರೂ PWD code ಎಂಬುದು ಇರುತ್ತದೆ. ಏನಾದರೂ enhance ಮಾಡಬೇಕಾದರೆ ರಾಜ್ಯ ಸರ್ಕಾರ ಆದೇಶ ಮಾಡುತ್ತದೆ. ನಾನು Urban Development Department Officers ಕೇಳಿದೆ. ನಾನು ಆ ಇಲಾಖೆಯಲ್ಲಿ ಕೆಲಸ ಮಾಡಿದ್ದೆನು. ನಾನು ಫೋನ್ ಮಾಡಿ, ನಮ್ಮ ಹಂತಕ್ಕೆ ಪರ್ಮಿಷನ್‌ಗೆ ಏನಾದರೂ ಈ ವಿಷಯ ಬಂದಿತ್ತೇ ಎಂದು ಕೇಳಿದೆ. ಅವರು ಇದು ಯಾವುದೂ ಬಂದಿಲ್ಲವೆಂದು ನನಗೆ ಹೇಳಿದರು. ಯಾವ Urban

Department Department ಗೂ ಬಂದಿಲ್ಲ. ಎಲ್ಲಾ ಅವರೇ ಮಾಡಿಕೊಂಡಿದ್ದಾರೆ. ಯಾರೋ ರಂಗನಾಥ್ ಅಂತೆ, ಶಿವಕುಮಾರ್ ಅಂತೆ, ಮೃತ್ಯುಂಜಯ ಅಂತೆ. ಅವರನ್ನೆಲ್ಲಾ ಸೇರಿಸಿ ಒಂದು ತಂಡ ಇವರು ಕರೆದುಕೊಂಡು ಬಂದಿದ್ದರಲ್ಲಾ, ಎಲ್ಲಾ ಇವರೇ ಸೇರಿಕೊಂಡು, ಇವರಿಗೆ ಏನೇನು ಬೇಕೋ ಅದನ್ನು ಕೊಟ್ಟು, ಬರೆದು ಬರೆದು ಹಾಕಿ ಈ ರೀತಿ ಮಾಡಿ ಕಳುಹಿಸಿದ್ದಾರೆ. ನಮ್ಮ ಮಾನ್ಯ ಅಶೋಕ್‌ರವರಿಗೆ ಲೇಟರ್ ಕಳುಹಿಸಿದ್ದಾರೆ. ಅವರು ಅದನ್ನು ಎಷ್ಟು ಗಮನಿಸಿದ್ದಾರೋ ಏನೋ ನನಗೆ ಗೊತ್ತಿಲ್ಲ. ಅವರಿಗೆ Abstract summary showing vally wise details ಎಂದು ಕಳುಹಿಸಿದ್ದಾರೆ. ಅವರು ಅದನ್ನು ಎಷ್ಟರ ಮಟ್ಟಿಗೆ study ಮಾಡಿದರೋ, ಏನೋ ನನಗೆ ಗೊತ್ತಿಲ್ಲ. ಹೆಬ್ಬಾಳ ವ್ಯಾಲಿಯಲ್ಲಿ 3,4,5,6 ಮತ್ತು 8ನೇ ತಾರೀಖು ಐದು ದಿನಕ್ಕೆ 47,891 ಕ್ಯುಬಿಕ್ ಹೂಳನ್ನು ತೆಗೆದರಂತೆ. ಅಂದರೆ ಬರೇ ಇದೊಂದೇ ಕಡೆ 7981 ಲಾರಿ ಐದು ದಿನಕ್ಕೆ ತೆಗೆದಿದ್ದಾರೆ. ಹೀಗೆ ಪ್ರತಿಯೊಂದು ಕಡೆಗೂ ಮಾಡಿದ್ದಾರೆ. ನೀವು ಯಾವುದನ್ನಾದರೂ ತಗೆದುಕೊಳ್ಳಿ. ಇನ್ನೊಂದು ಕಡೆ 22,637 ಲೋಡ್ divided by 13 days ದಿನಕ್ಕೆ 1741 ಲಾರಿ ಆಗುತ್ತದೆ. ಬೆಂಗಳೂರಿನಲ್ಲಿ ದಿನಕ್ಕೆ ಐದು ಲಾರಿ ಮೇಲೆ ಕಳುಹಿಸಲಿಕ್ಕೆ ಆಗುವುದಿಲ್ಲ. ಈ ಟ್ರಾಫಿಕ್‌ನಲ್ಲಿ ಎಲ್ಲೇ ಹೋದರೂ ಅದಕ್ಕಿಂತ ಹೆಚ್ಚಿಗೆ ಆಗುವುದಿಲ್ಲ. ಹಗಲು ಇವೆಲ್ಲಾ ಮಾಡುವುದಕ್ಕೆ 2 ಗಂಟೆ ಬೇಕು. ಹೋಗುವುದಕ್ಕೆ 1 ಗಂಟೆ, ತುಂಬುವುದಕ್ಕೆ 15 ನಿಮಿಷ ಆದರೂ ಬೇಕು, ಬರುವುದಕ್ಕೆ 1 ಗಂಟೆ ಬೇಕು. ಇವರು ಎಷ್ಟೇ fast ಆಗಿ traffic ನಲ್ಲಿ ಹೋದರೂ ಸಹಿತ 5–6 ಮೇಲೆ ಮಾಡಲಿಕ್ಕಾಗುವುದಿಲ್ಲ. ಈ ಹಗರಣಕ್ಕೆ ಏನೆಂದು ಕರೆಯಬೇಕೋ, ಇದಕ್ಕೆ ಏನು ಹೆಸರಿಡಬೇಕೋ, ಇವರಿಗೆ ಏನು ಶಿಕ್ಷೆ ಕೊಡಬೇಕೋ ಗೊತ್ತಾಗುತ್ತಿಲ್ಲ. ಇದರಲ್ಲಿ ಬರೇ ಹಣ ತಿಂದಿಲ್ಲ. ಬೇರೆ ಕಡೆಯಲ್ಲಾ ಹಣ ತಿಂದಿರುವುದನ್ನು ನೋಡಿದ್ದೇವೆ. ಆದರೆ ಇಲ್ಲಿ ಮಲಮೂತ್ರವನ್ನೇ ತಿಂದಿದ್ದಾರೆ. ಎಂದರೆ ಇವರು ಎಂತಹ ಗಟ್ಟಿ ಜನ ಎನ್ನುವುದನ್ನು ತಾವು ಈ ಸಂದರ್ಭದಲ್ಲಿ ತಿಳಿದುಕೊಳ್ಳಬೇಕು. ಈ ರೀತಿ ಬೇಕಾದಷ್ಟು ಆಗಿದೆ. Minister ಗೆ ಕಳುಹಿಸಿರುವ report ನಲ್ಲಿ ಡಂಪ್ ಮಾಡಿರುವ ಜಾಗಗಳನ್ನು ಉಲ್ಲೇಖಿಸಿದ್ದಾರೆ, ಆ ಜಾಗಗಳ ಹೆಸರುಗಳನ್ನು ಒಂದ್ಸಲ ನೋಡಿ. ರಾಜರಾಜೇಶ್ವರಿ ನಗರ ಅಂತೆ, ನಾರಾಯಣಪುರ ಕ್ವಾರಿ ಅಂತೆ, ರೈಲ್ವೆ ಯಾರ್ಡ್ ಅಂತೆ, ಆಮೇಲೆ low lying area ಅಂತೆ. ಅಲ್ಲದೆ Chief Minister constituency ಆದ ರಾಮನಗರದ ರೋಡ್ ಬಳಿಯೂ ಎಲ್ಲೋ ಕಳುಹಿಸಿಬಿಟ್ಟಿದ್ದೇವೆಂದು ಹೇಳುತ್ತಾರೆ. ನಾನು ನಮ್ಮ DC ಗೆ phone ಮಾಡಿ ಕೇಳಿ ಅವರಿಗೊಂದು letter

ಕಳುಹಿಸಿದೆ. ನೀನೇನಾದರೂ silt ತೆಗೆದುಕೊಂಡಿದ್ದೀಯಾ? ಏನ್ಸಮಾಚಾರ? ಎಂದು ನಾನು ಡಿ.ಸಿ.ಗೆ ಲೆಟರ್ ಕಳುಹಿಸಿದೆ. ಇಲ್ಲ ಸ್ವಾಮಿ, ನಾವು ಯಾವುದನ್ನೂ notify ಮಾಡಿಲ್ಲವೆಂದು DC ಯವರೂ ಕೂಡ ನನಗೆ ಲೆಟರ್ ಅನ್ನು ಕಳುಹಿಸಿಕೊಟ್ಟಿದ್ದಾರೆ. ಏಕೆಂದರೆ ನಾವು ನೋಡಿಕೊಳ್ಳಬೇಕಲ್ಲಾ? ಇಲ್ಲಿರುವ contract ಪ್ರಕಾರ ಆ ಬಗ್ಗೆ notification ಆಗಬೇಕೆಂದು ಇದೆ. Trip sheet ವಿಷಯ ಬೇರೆ Nearby Railway dumping yard ಎಂದು ಹೇಳುತ್ತಾರೆ. Place of Dumping:- Railway dumping yard, Nagarbhavi ಇತ್ಯಾದಿ ಬರೆಯುತ್ತಾರೆ. ಅದು ಯಾವ ಸರ್ವೆ ನಂಬರ್? ಯಾವ ಖಾನೆಷು ಮಾರಿ? ಯಾರು ಅದಕ್ಕೆ owner? ನಾಗರಬಾವಿ, ಸಿಗೇಹಳ್ಳಿ, ರೈಲ್ವೆ ಯಾರ್ಡ್, ರಾಜರಾಜೇಶ್ವರಿ ನಗರದಲ್ಲಿ dumping ಮಾಡಿದ್ದೇವೆಂದು ಬರೆಯುತ್ತಾರೆ. ರಾಜರಾಜೇಶ್ವರಿ ನಗರ ಹೆಚ್ಚು ಕಡಿಮೆ ಸುಮಾರು 5–10 ಕಿ.ಮೀ. ಇದೆ. Nearby Low lying area ಎಂದು ಬರೆಯುತ್ತಾರೆ. ಎಲ್ಲಿ Nearby Low lying area? ಎಷ್ಟು ದುಡ್ಡು ತೆಗೆದುಕೊಂಡಿದ್ದಾರೆ? ಇದೆಲ್ಲಾ ಲೆಕ್ಕ ಹಾಕಿ ನೋಡಬೇಕು. ಇನ್ನೊಂದು ಕೊಟ್ಟಿದ್ದಾರೆ, near Shakthi Garden, Mudalpalya, Adharshanagar. ನೀನು ಎಲ್ಲಿಗೆ ಹಾಕಿದ್ದೀಯಾ? ಎಂದರೆ nearby low level area ಎನ್ನುತ್ತಾರೆ. Remarks ನಲ್ಲಿ as per MB records. ಎಂದು ಇದೆ. ಇದರ ಬಗ್ಗೆ ಪ್ರಜಾವಾಣಿಯಲ್ಲಿ ಪ್ರಕಟವಾಯಿತು. ಅದಾದ ನಂತರ ವೈಯಾಲಿಕಾವಲ್‌ನಲ್ಲೊಂದು ಆಫೀಸ್ ಇದೆ, ಪಾಪ! ಸುಬ್ರಹ್ಮಣ್ಯ ಸಾಹೇಬರಿಗೆ ಇದರ ಬಗ್ಗೆ ಗೊತ್ತಿಲ್ಲ. ಅಲ್ಲಿ ಹಗಲು ರಾತ್ರಿ records ತಿದ್ದುತ್ತಿದ್ದಾರೆ, ಅದಕ್ಕೆ ಏನು ಹೇಳುತ್ತೀರಿ? ಅಲ್ಲಿ ಎಷ್ಟು ಅಧಿಕಾರಿಗಳು ಎಷ್ಟು ರೆಕಾರ್ಡ್ಸ್‌ಗಳನ್ನು ತಿದ್ದುತ್ತಿದ್ದಾರೋ ಗೊತ್ತಿಲ್ಲ. ಅಲ್ಲಿ ಅಷ್ಟಿಷ್ಟು ರೆಕಾರ್ಡ್ಸ್ ತಿದ್ದುತ್ತಿಲ್ಲ. Estimate ಮಾಡುವಾಗ ಕೂಡ special ಆಗಿ ಮಾಡಿದ್ದಾರೆ. 25–40 ವರ್ಷಗಳಿಂದ ಇಲ್ಲಿ ಹೂಳು ತೆಗೆಸಿಕೊಂಡು ಬರಲಾಗಿದೆ. ಜ್ಯೋತಿ ರಾಮಲಿಂಗಂ ಕಾಲ ಇರಬಹುದು, ಶ್ರೀನಿವಾಸಮೂರ್ತಿಯವರ ಕಾಲ ಇರಬಹುದು, ಲಕ್ಷ್ಮಣರಾವ್ ಕಾಲ ಇರಬಹುದು, ಹೀಗೆ ಬೇರೆ ಬೇರೆಯವರ ಕಾಲ ಇರಬಹುದು, ಆ ಕಾಲದಿಂದ ಇವರೇನು silt ತೆಗೆದುಕೊಂಡು ಬಂದಿದ್ದಾರೋ .....

ಶ್ರೀ ಎಂ.ಪಿ.ವೆಂಕಟೇಶ್: ಅದು ನಿಮ್ಮ ಕಾಲದಲ್ಲೂ ಇರಬಹುದು.

ಶ್ರೀ ಡಿ.ಕೆ. ಶಿವಕುಮಾರ್: ನಾನು ಡಿ.ಕೆ. ಶಿವಕುಮಾರ್‌ದ್ದೂ ಸೇರಿ ಎಂದು ಹೇಳುತ್ತಿದ್ದೇನೆ. ನೀನು ಸ್ವಲ್ಪ ಕುಳಿತುಕೊಳ್ಳಪ್ಪ.

ಶ್ರೀ ಎಂ.ಪಿ.ವೆಂಕಟೇಶ್ : ಒಂದು ನಿಮಿಷ ಸ್ವಾಮಿ. ತಾವು ಮಾತನಾಡುವುದೆಲ್ಲಾ ನೋಡಿದರೆ, ಎಲ್ಲಾ ಅಧಿಕಾರಿಗಳು ನಮಗೆ endorsement ಕೊಟ್ಟಿದ್ದಾರೆ ಎನ್ನುವ ತರಹದಲ್ಲಿ ಮಾತನಾಡುತ್ತಿದ್ದೀರಿ. ಇದೆಲ್ಲಾ ನೀವು ಆಡಳಿತದಲ್ಲಿ ದರ್ಬಾರ್ ನಡೆಸುತ್ತಿದ್ದಾಗ ಮಾಡಿರುವಂತಾದ್ದು. ಆ ಒಂದು ಜ್ಞಾನದಿಂದ ನೀವು ಹೇಳುತ್ತಿದ್ದೀರೋ, ಏನೋ? ಗೊತ್ತಾಗುತ್ತಿಲ್ಲ. ನೀವು ಇದನ್ನು ಮಾಡುತ್ತಿದ್ದೀರಿ, ಹೀಗೆ ಆಗಿತ್ತು ಎಂದು ಅಧಿಕಾರಿಗಳು ತಮಗೆ endorsement ಕೊಟ್ಟು ಹೇಳಿದ್ದನ್ನು ನೀವು ಹೇಳುತ್ತಿದ್ದೀರಾ ಏನೋ ಗೊತ್ತಾಗುತ್ತಿಲ್ಲ ಅಥವಾ ನಿಮ್ಮ ಅನುಭವದಿಂದ ಹೇಳುತ್ತಿದ್ದೀರೋ, ಏನೋ ಗೊತ್ತಾಗುತ್ತಿಲ್ಲ.

ಶ್ರೀ ಡಿ.ಕೆ. ಶಿವಕುಮಾರ್: ಯಾವುದಾದರು ವಿಷಯವನ್ನು ತೆಗೆದುಕೊಂಡು debate ಮಾಡು. ಆಗ ನಿನಗೆ ಎಲ್ಲಾ ಗೊತ್ತಾಗುತ್ತದೆ. ಇದು ಸುಮ್ಮನೆ ನಿಂತುಕೊಂಡು ಮಾತನಾಡಿದಂತಲ್ಲ.

ಶ್ರೀ ಆರ್.ಧ್ರುವ ನಾರಾಯಣ: ನೀವು ಯಾವುದಾದರೂ subject ತೆಗೆದುಕೊಂಡು debate ಮಾಡಿ. ಆಗ ನಿಮಗೆ ಅದರ ಕಷ್ಟ ಏನೆಂದು ಗೊತ್ತಾಗುತ್ತದೆ. ಯಾರು ಮಾತನಾಡಿದರೂ ಮಧ್ಯೆ ಮಧ್ಯೇ ಎದ್ದು ನಿಂತು disturb ಮಾಡುತ್ತೀರಿ.

ಶ್ರೀ ಡಿ.ಕೆ. ಶಿವಕುಮಾರ್: ನಿನ್ನ ಮಲ, ಮೂತ್ರ ಇದೆಯಲ್ಲಾ, ಅದನ್ನು ಕಬಳಿಸಿರುವಂತಹ ಹಗರಣದ ಬಗ್ಗೆ ನಾನಿಲ್ಲಿ ಹೇಳುತ್ತಿದ್ದೇನೆ.

ಶ್ರೀ ಎಂ.ಪಿ.ವೆಂಕಟೇಶ್ : ನಿಮ್ಮ ಸದ್ದಾಂ ಹುಸೇನ್ ದರ್ಬಾರಿನ ಬಗ್ಗೆ ಇತಿಹಾಸವೇ ಇದೆ, ಮಂತ್ರಿಗಳಾಗಿ ನೀವು ಮಾಡಿದ ದರ್ಬಾರಿನ ರೀತಿ ಇನ್ನು 50 ವರ್ಷವಾದರೂ ಮತ್ತೆ ಬರುವುದಕ್ಕಾಗುವುದಿಲ್ಲ, ಜನರನ್ನು ಕೇಳಿ.

ಶ್ರೀ ಡಿ.ಕೆ. ಶಿವಕುಮಾರ್: ಅದನ್ನು ಬಿಡಿ, ನಾವು ಯಾವತ್ತು ಸೀರಿಯಸ್ ಆಗಿ ತೆಗೆದುಕೊಂಡಿಲ್ಲ, ತಲೆ ಕೆಡಿಸಿಕೊಳ್ಳುವುದು ಬೇಡ. ಈ ರೀತಿ ಇಷ್ಟು ದೊಡ್ಡ ಮೊತ್ತದ ಹಗರಣವಾಗಿದೆ. ಇವತ್ತು, ನಾವು ಅಷ್ಟು ಕೆಲಸ ಮಾಡಿಲ್ಲ, ಇಷ್ಟು ಕೆಲಸ ಮಾಡಿದ್ದೇವೆಂದು ರಿಪ್ಲೈ ಕೊಟ್ಟಿರಬಹುದು. ಯಾವುದು ಹಣ ಬರುತ್ತದೆ, ಅಷ್ಟು ಕೆಲಸವನ್ನು ಮಾತ್ರ ಇಲ್ಲಿ ಮಾಡಿದ್ದಾರೆ. ಜೊತೆಗೆ ಇಲ್ಲಿ ಏನಾಗಿದೆ ಎಂದರೆ, ಪಾಪ ಒಬ್ಬ ಮುಖ್ಯಮಂತ್ರಿಗಳ ಹೆಸರಿನಲ್ಲಿ 10% ಕಲೆಕ್ಟ್ ಮಾಡಿದ್ದಾರೆ. ಓ! ನನ್ನ ಹೆಸರಿನಲ್ಲಿ 10% ಕಲೆಕ್ಟ್ ಮಾಡುತ್ತಿದ್ದಾರೆಂದು ಮುಖ್ಯಮಂತ್ರಿಗಳಿಗೆ ಗೊತ್ತಾಯಿತು, ಓ! ಏಕೊ ಕೆಲಸ ಕೆಟ್ಟಿತು ಎಂದ ತಕ್ಷಣ ಅವರನ್ನು ಖಾಲಿ ಮಾಡಿಸಿಬಿಟ್ಟರು.

ಆ ಪ್ರೆಸ್ ಅವರನ್ನು ಹಾಕಿಬಿಟ್ಟರು, ಆ ಪ್ರೆಸ್‌ನವರ ಹೆಸರಿನಲ್ಲಿ 2%. ಆಮೇಲೆ ಪಾಪ. ಜಯಪಾಲ ರೆಡ್ಡಿಯವರು ಎಂಥ ವ್ಯಕ್ತಿ ಎಂಬುದು ತಮಗೂ ಗೊತ್ತಿದೆ, ಪಾಪ, ಅವರು ಇವರೆಲ್ಲರ ಸ್ನೇಹಿತರು, ಕೇಂದ್ರ ಸರ್ಕಾರಕ್ಕೆ ಕೊಡಬೇಕೆಂದು ಅವರ ಹೆಸರಿನಲ್ಲಿ 5%. ಈ ಜಿಲ್ಲಾ ಮಂತ್ರಿಗಳಿಗೆ 2% ಅಂತೆ, ಅವರಿಗೆ ಏನಯ್ಯ ಎಂದರೆ ಅವರು, ಏನ್ರಿ ನನ್ನನ್ನು ಉಳಿಸಬೇಕೆಂದು ಮಾಡಿದ್ದಾರೋ ಹೇಗೆ ಎಂದು ತಲೆ ತಲೆ ಚಚ್ಚಿಕೊಂಡು ಅವತ್ತು ಹೇಳುತ್ತಾರೆ. ಹೀಗೆ ಎಲ್ಲರ ಹೆಸರಿನಲ್ಲೂ ಕೂಡ ಸುಮಾರು 30–35% ಅಷ್ಟು ಇದಕ್ಕೆ ಮಾಡಿದ್ದಾರೆ. ಇದಕ್ಕೆ ನಾವು ಇಷ್ಟು ಜಾಸ್ತಿ ಕೊಡುತ್ತೇವೆಂದು ಎಸ್ಟಿಮೇಟ್ ಮಾಡುವಾಗಲೇ 10%. ಆದುದರಿಂದ ಈ ಹಗರಣದ ಸತ್ಯಾಂಶ, ಸಾರಾಂಶ ಇದಲ್ಲದೇ ಇನ್ನು ಇದಕ್ಕೆ ಸಂಬಂಧಿಸಿದ್ದು ಏನೇನು ಬೇಕೋ ಅದನ್ನೆಲ್ಲಾ ನಮಗೆ ವಿವರಿಸುತ್ತೇನೆ. ಪಾಪ, ಪ್ರಾಮಾಣಿಕವಾಗಿ, ಕರೆಕ್ಟ್ ಆಗಿ ಮುಖ್ಯಮಂತ್ರಿಗಳು 14,52,000 ಎಂದು ಕೊಟ್ಟು ಬಿಟ್ಟಿದ್ದಾರೆ. ಈ 4 ಲಕ್ಷ ಲಾರಿಗಳು ಬೆಂಗಳೂರಿನಲ್ಲಿ ಓಡಾಡುವುದಕ್ಕೆ ಸಾಧ್ಯವೇ? ಓಡಾಡಿದ್ದರೆ ಆ ರೋಡ್ ಪರಿಸ್ಥಿತಿ ಏನಾಗುತ್ತಿತ್ತು? ಆ ಕಚಡವೇನಾಗುತ್ತಿತ್ತು? ಆ ಲಾರಿಗಳು ಯಾರದು? ಯಾರಿಗೆ ಆ ಲಾರಿಗಳು ಅಗ್ರಿಮೆಂಟ್ ಆಗಿತ್ತು? ಆ ಅಗ್ರಿಮೆಂಟ್ ಲಾರಿ ಎಲ್ಲಿ ಹೋಯಿತು? ಈ ಎಲ್ಲಾ ಪ್ರಶ್ನೆಗಳನ್ನು ನಾವು ಈ ಸಂದರ್ಭದಲ್ಲಿ ಹಾಕಿಕೊಳ್ಳಬೇಕಾಗುತ್ತದೆ. ಇದನ್ನು ಹಾಕಿಕೊಂಡು ಅದಕ್ಕೆ ಉತ್ತರವನ್ನು ಕೂಡ ಕೊಡಬೇಕಾಗುತ್ತದೆ. ಬಹುಶಃ ಹಿಂದೆ ಬಹಳಷ್ಟು ಸ್ಕ್ಯಾಂಗಳು ಬಂದಾಗ ಮುಖ್ಯಮಂತ್ರಿಗಳು, ಬಳ್ಳಾರಿಯಲ್ಲಿ ಒಂದು ಕೇಸು, ಕನಕಪುರದಲ್ಲಿ ಒಂದು ಕೇಸು ಎಂದು ನಮ್ಮ ಮನೆಯವರ ಮೇಲೆಲ್ಲಾ ಕೇಸ್ ಹಾಕಿ ಏನೇನೋ ಪ್ರಯತ್ನಪಟ್ಟರು. ಪಾಪ, ಇದರಲ್ಲಿ ಅವರ ಹೆಸರು ಕೂಡ ಬಂದುಬಿಟ್ಟಿದೆ. ಅವರು ಪ್ರಾಮಾಣಿಕರಾಗಿದ್ದರೆ, ನಿಷ್ಠರಾಗಿದ್ದರೆ, ಬೇಕಾದಷ್ಟು ಜನ ಉತ್ತಮರಾದ ಅಧಿಕಾರಿಗಳಿದ್ದಾರೆ, ನಾನು ಇಲ್ಲವೆಂದು ಹೇಳುವುದಿಲ್ಲ, ಇದಕ್ಕೆ ಸಂಬಂಧಿಸಿದವರನ್ನು ಕೂಡಲೇ ಅರೆಸ್ಟ್ ಮಾಡಿಸಬೇಕು. ಯಾರೋ ಲೋಕಾಯುಕ್ತರಿಗೆ ಕೊಟ್ಟಿದ್ದಾರೆ, ಇನ್ನೊಂದು ಹೇಳುವುದನ್ನು ಕೇಳುವುದಕ್ಕೆ ನಾನು ತಯಾರಿಲ್ಲ. ಇಲ್ಲಿ ಸೆಂಟ್ರಲ್ ಗೌರ್ನಮೆಂಟ್ ಹಣವಿರುವುದರಿಂದ ಕೇಂದ್ರ ಸರ್ಕಾರ ನಮಗೆ ಇನ್ನು ಸಾವಿರಾರು ಕೋಟಿ ರೂಪಾಯಿಗಳನ್ನು ಮುಂದೆ ಕೊಡುತ್ತದೆ. ಮೊನ್ನೆ ತಾನೆ ಪ್ರಧಾನ ಮಂತ್ರಿಗಳು ಬಂದು, ಈ ಮಿಷನ್, ಈ ಕಾರ್ಯಕ್ರಮಕ್ಕೆ ನಾನು ಹೆಚ್ಚಿನ ಒತ್ತನ್ನು ಕೊಡುತ್ತೇನೆಂದು ಹೇಳಿದ್ದಾರೆ, ಪಾರದರ್ಶಕತೆಗೆ ಹೆಸರಾಗಿದ್ದು ಬೇಕಾದಷ್ಟು ಅಧಿಕಾರಿಗಳು ಟ್ಯಾಕ್ಸ್ ಕಲೆಕ್ಟಿಂಗ್ ಸಿಸ್ಟಂ ಮತ್ತೊಂದು ಸೇರಿದಂತೆ ಬೆಂಗಳೂರಿಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಶೋಭೆ ತರುವಂಥ ಉತ್ತಮವಾದ

ಕೆಲಸವನ್ನು ಮಾಡಿದ್ದಾರೆ. ಅಂಥ ಸಂದರ್ಭದಲ್ಲಿ ಇಂಥ ಕಪ್ಪು ಚುಕ್ಕೆಗಳನ್ನು ತೆಗೆದು ಹಾಕಿ, ಇಂಥವರನ್ನು ಬಲಿ ಹಾಕಲಿಲ್ಲವೆಂದರೆ, ಇಂಥವರನ್ನು ಜೈಲಿಗೆ ಕಳುಹಿಸಲಿಲ್ಲವೆಂದರೆ, ಇಂಥವರನ್ನು ನಾವು ಮನೆಗೆ ಕಳುಹಿಸಲಿಲ್ಲವೆಂದರೆ ಈ ಚೇರ್‌ಗಳಲ್ಲಿ ನಮ್ಮಂಥವರು ಕುಳಿತುಕೊಂಡು ದೊಡ್ಡ ಲೋಪ ಮಾಡಿದಂತಾಗುತ್ತದೆ, ನಮ್ಮ ಕರ್ತವ್ಯಕ್ಕೆ ಲೋಪ ಮಾಡಿದಂತಾಗುತ್ತದೆ. ಇದಕ್ಕೆ ಬೇರೆ ಇನ್ನೇನು ಇಲ್ಲ, ಇದನ್ನು ಸಿಬಿಐಗೆ ಒಪ್ಪಿಸಬೇಕು, ಇದನ್ನು ಸಿಬಿಐ ಬಿಟ್ಟರೆ ಇನ್ಯಾರು ತನಿಖೆ ಮಾಡಲಾಗುವುದಿಲ್ಲ. ಏಕೆಂದರೆ, ಇದು ಸೆಂಟ್ರಲ್ ಗೌರ್ನಮೆಂಟ್ ಹಣ, 15% ಟ್ಯಾಕ್ಸ್ ಪೇಯರ್ಸ್ ಹಣವಿದೆ, ಸರ್ಕಾರದ್ದು ಬಿಡಿ. ಜೊತೆಗೆ ಇಲ್ಲೊಂದು ಕಮಿಟಿ ಇದೆ, ಇದಕ್ಕೆ ಎಂಎಲ್‌ಎಗಳು, ಎಂಪಿಗಳು, ಅರ್ಬನ್ ಲೋಕಲ್ ಬಾಡೀಸ್ ಸದಸ್ಯರಿದ್ದಾರೆ, ಕಮಿಟಿಗಳಾಗಿಲ್ಲ. ಈ ಬೃಹತ್ ನಗರದ ಹೆಸರಿನಲ್ಲಿ, ಪಾಪ, ಒತ್ತಡದಲ್ಲಿ ಮುಖ್ಯಮಂತ್ರಿಗಳು ಏನು ಮಾಡುವುದಕ್ಕೆ ಸಾಧ್ಯ? ಇದ್ದಿದ್ದರಲ್ಲಿ ಅಲ್ಲಿ ಇಲ್ಲಿ ಸ್ವಲ್ಪ ಹೆಚ್ಚು ಕಡಿಮೆಯಾಗುತ್ತಿದೆ ಎಂದು ಹೇಗೂ ರೇವಣ್ಣನವರಿಗೆ ಗೊತ್ತಾಗಿದೆ. ಟಕ್ಕನೆ, ಮೂರು ಜನರನ್ನು ಕೆಪಿಸಿಗೆ ವಾಪಸ್ಸು ಕರೆಯಿಸಿಕೊಂಡು ಬಿಟ್ಟಿದ್ದಾರೆ. ಹೀಗೆ 4–5 ಜನರ ಒಂದು ತಂಡ, ಇದ್ದಾವೆ ಅವುಗಳ ಹೆಸರುಗಳು ನನಗೆ ಗೊತ್ತಿಲ್ಲ, ಕನ್ಸಲ್ಟೆನ್ಸಿ ನಡೆಯುತ್ತಿದೆ. ಇದಕ್ಕೆಲ್ಲಾ ಬಿಲ್ ಮಾಡುವ ಕೆಲವರೆಲ್ಲಾ ಯೂನಿವರ್ಸಿಟಿ ಕಾಲೇಜಿನವರಂತೆ. ಪಾಪ, ಅವರನ್ನೆಲ್ಲಾ ಕರೆದುಕೊಂಡು ಅವರ ಮೇಲೆ ಒತ್ತಡ ತಂದು ಅವರ ಕೈಯಲ್ಲಿ ಬರೆಯಿಸಿ ಹಗಲು–ರಾತ್ರಿ ಈ ರೀತಿ ನಡೆಯುತ್ತಿದೆ. ಬೇಕಾದ ರೆಕಾರ್ಡ್ ಮತ್ತೊಂದು, ಕಚೇರಿಗಳಿಂದ ನಮ್ಮವರೆಲ್ಲಾ ಮಾಹಿತಿಯನ್ನು ಕಲೆಕ್ಟ್ ಮಾಡಿದ್ದಾರೆ. ನಾನು ಇಲ್ಲಿ ಬಂದು ಇಷ್ಟು ಮಾತನಾಡುತ್ತಿದ್ದೇನೆಂದರೆ, ನಾನು ಸುಮಾರು 15 ದಿವಸಗಳ ಕಾಲ ಸತ್ಯವೇನೆಂದು ನೋಡಿ, ವಿಚಾರ ತಿಳಿಯಬೇಕೆಂದು ನಾನು ಕೂಡ ಈ ಬಗ್ಗೆ ಒಳಗೆ ಹೋಗಿ ಸತ್ಯಾಂಶವನ್ನು ತಿಳಿದುಕೊಂಡಿದ್ದೇನೆ. ಏಕೆಂದರೆ, ಇಲ್ಲಿ ನಮಗೂ ಕೂಡ ಅಟ್ಯಾಕ್ ಮಾಡುವ ಬಹಳ ಜನರಿದ್ದಾರೆ. ನಾವೇನಾದರೂ ಒಂದು ಚೂರು ತಪ್ಪು ಮಾಡಿದರೆ ಸಾಕು ನಮ್ಮನ್ನು ಸೀಳಿ ಬಿಡುತ್ತಾರೆ, ಜನ ಬಿಡುವುದಿಲ್ಲ, ನಮ್ಮ ವಿರುದ್ಧವಾಗಿ ಬೇಕಾದಷ್ಟು ಹೋರಾಟ ಮಾಡುತ್ತಾರೆ. ಆದರೆ, ನಾನು, ಬಹಳ ಪ್ರಾಮಾಣಿಕತೆಯಿಂದ ಮಾಡಬೇಕು, ಸರಿಯಾದ ಸತ್ಯವನ್ನು ತಿಳಿಯಬೇಕೆಂದು ಬಹಳ ಆಳವಾಗಿ ಹೋಗಿ, ನಾನೇನು ಸತ್ಯವನ್ನು ಮಾತನಾಡಿದ್ದೇನೆ, ಕೇವಲ ಉದಾಹರಣೆಗಳನ್ನು ಮಾತ್ರ ಕೊಟ್ಟಿದ್ದೇನೆ. ಆದುದ್ದರಿಂದ, ಈ ಬಗ್ಗೆ ಸಿಬಿಐ ತನಿಖೆಯಾಗಬೇಕು, ಅವರನ್ನು ಕೂಡಲೇ ಬಂಧಿಸಬೇಕು, ಸಸ್ಪೆಂಡ್ –ಗಿಸ್ಪೆಂಡ್ ಮಾಡುವುದಲ್ಲ. ಇಲ್ಲಿ ಐಎಎಸ್

ಅಧಿಕಾರಿಗಳು ಸೇರಿದ್ದಾರೆ, ಹಾಗಾಗಿ ತನಿಖೆ ಸೆಂಟ್ರಲ್ ಗೌರ್ನಮೆಂಟ್‌ನಿಂದಲೇ ಆಗಬೇಕು, ಅವರನ್ನು ಬಂಧಿಸಬೇಕು. ಪಾಪ ಲೋಕಾಯುಕ್ತರ ಕೈನಲ್ಲಿ ಏನೂ ಮಾಡುವುದಕ್ಕೆ ಸಾಧ್ಯವಿಲ್ಲ, ಅವರಿಗೂ ಒತ್ತಡ. ಏಕೆಂದರೆ, ಅಲ್ಲಿನ ಕಮೀಷನರ್ ಇರಬಹುದು, ಅವರ ಕೈಕೆಳಗಿನ ಅಧಿಕಾರಿಗಳು ಇಲ್ಲಿ ಯಾರು ಹೆಜ್ಜೆಯನ್ನು ಮುಂದಿಟ್ಟಿದ್ದಾರೆ, ಈಗೇನು ಪ್ರಯತ್ನ ಮಾಡುತ್ತಿದ್ದಾರೆ, ಅವರಿಗೂ ಶಕ್ತಿ ಬರಬೇಕಾಗುತ್ತದೆ. ಅವರು ಈ ಎಲ್ಲಾ ಗಾಬರಿಯನ್ನು ನೋಡಿ, ಅವರು ಇಲ್ಲಿ ಹೇಳದೇ ಇರಬಹುದು, ಅವರ ಆತ್ಮಕ್ಕೆ ಗೊತ್ತಿದೆ, ಪ್ರಾಮಾಣಿಕರಿದ್ದಾರೆ ನನಗೆ ಗೊತ್ತಿದೆ. ಆ ಅಧಿಕಾರಿ, ಹಣಕಾಸಿನ ಇಲಾಖೆಯಲ್ಲಿ ಈ ರಾಜ್ಯದ ಆರ್ಥಿಕ ವ್ಯವಸ್ಥೆಯನ್ನು ತರುವುದಕ್ಕೆ ಯಾವ ರೀತಿ ಶ್ರಮ ಪಟ್ಟರೆಂಬುದು ನಮಗೆ ಗೊತ್ತಿದೆ, ಅವರು ಪ್ರಾಮಾಣಿಕತೆಗೆ ಹೆಸರಾಗಿದ್ದಾರೆ, ಅವರಿಗೆ ಹೆಸರು ಬರಬೇಕು, ಇಲ್ಲವಾದರೆ ಅವರ ಮೇಲೆ ಲೋಪ ಬಂದಂತಾಗುತ್ತದೆ. ಮುಖ್ಯಮಂತ್ರಿಗಳು ನಿಷ್ಪಕ್ಷಪಾತವಾಗಿ ತಮ್ಮ ಮುಖಾಂತರ ಇದನ್ನು ಸಿಬಿಐಗೆ ವಹಿಸಬೇಕು, ಕೂಡಲೇ ಅವರನ್ನು ಅರೆಸ್ಟ್ ಮಾಡಿಸುವುದಕ್ಕೆ ಕಾರ್ಯಕ್ರಮವನ್ನು ರೂಪಿಸಬೇಕು. ಇದು ಮಲಮೂತ್ರ ತಿಂದಿರುವ ದೊಡ್ಡ ಹಗರಣವಾಗಿದೆ, ಮನುಷ್ಯನನ್ನು ತಿಂದಿದ್ದಲ್ಲ. ಮನುಷ್ಯ ಮಾಡಿದ ಮಲಮೂತ್ರವನ್ನೇ ತಿಂದಂಥ ಹಗರಣ, ಇದಕ್ಕೆ ಶೀಲ್ಡ್ ಕಿಂಗ್ ಜೈರಾಜ್ ನಾಯಕತ್ವವನ್ನು ವಹಿಸಿದ್ದಾರೆ, ಅವರನ್ನು ಸದೆಬಡಿಯುವಂಥ ಕೆಲಸವಾಗಬೇಕು ಎಂದು ನಾನು ತಮ್ಮ ಮುಖಾಂತರ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ವಿ.ಸೋಮಣ್ಣ (ಬಿನ್ನಿಪೇಟೆ): ಮಾನ್ಯ ಅಧ್ಯಕ್ಷರೆ, ನಾವು ಬೆಂಗಳೂರು ನಗರದ ಶಾಸಕರು ಮಾತನಾಡಲು ಅವಕಾಶ ಕೊಡಬೇಕು.

ಶ್ರೀ ಎನ್.ಎಲ್.ನರೇಂದ್ರ ಬಾಬು: ಅಧ್ಯಕ್ಷರೆ, ನಾವು ಸಹಿ ಹಾಕಿದ್ದೇವೆ.

ಅಧ್ಯಕ್ಷರು: ನಿಯಮ 69ಕ್ಕೆ 1 ಗಂಟೆ ಅವಕಾಶ ಇರುವುದು, ಚರ್ಚೆ ದಿನಗಟ್ಟಲೆ ನಡೆದಿವೆ. ಈಗ 35 ನಿಮಿಷವಾಗಿದೆ, ಸೋಮಣ್ಣನವರು ಐದು ನಿಮಿಷ ಮಾತನಾಡಿ.

ಶ್ರೀ ವಿ.ಸೋಮಣ್ಣ: ಮಾನ್ಯ ಅಧ್ಯಕ್ಷರೆ, ಈ ಬೆಂಗಳೂರು ನಗರದ ಆಧುನೀಕರಣದ ಯೋಜನೆಗಳನ್ನು ಕೈಗೆತ್ತಿಕೊಳ್ಳತಕ್ಕಂಥ ಸಂದರ್ಭದಲ್ಲಿ ಬೃಹತ್ ಬೆಂಗಳೂರನ್ನು ಮಾಡಿರುವ ಇವತ್ತಿನ ಪರಿಸ್ಥಿತಿಯಲ್ಲಿ ಏನು ಕೇಂದ್ರ ಸರ್ಕಾರದ ಸಹಯೋಗದೊಂದಿಗೆ ಈ ಯೋಜನೆಗಳನ್ನು ಕೈಗೆತ್ತಿಕೊಂಡಿರುವುದು, ಇದರ ಸಾಧ್ಯಸಾಧ್ಯತೆಗಳ, ಸಾಧಕಬಾಧಕಗಳ ಬಗ್ಗೆ ಮಿತ್ರರಾಗಿರುವ ಶಿವಕುಮಾರ್

ಅವರು ಬೆಳಕನ್ನು ಚೆಲ್ಲಿದ್ದಾರೆ. ಕೇಂದ್ರ ಸರ್ಕಾರದ, ಈ ರಾಷ್ಟ್ರದ ಪ್ರಧಾನ ಮಂತ್ರಿಗಳಾಗಿರುವ ಡಾ: ಮನಮೋಹನ್ ಸಿಂಗ್ ಅವರು ಕೇವಲ ಕರ್ನಾಟಕಕ್ಕೆ ಅಲ್ಲ, ಭಾರತದ ಎಲ್ಲಾ ನಗರ ಪ್ರದೇಶಗಳಿಗೂ ಕೂಡ ಒತ್ತನ್ನು ಕೊಡಬೇಕು, ಸ್ವಾಯತ್ತತೆಯನ್ನು ನೀಡಬೇಕು, ಮೂಲಭೂತ ಸೌಕರ್ಯಗಳನ್ನು ಕೊಡುವುದಕ್ಕೆ, ರಾಜ್ಯ ಸರ್ಕಾರದ ನೆರವಿನಿಂದ ಮಾಡುವ ಯೋಜನೆಗಳು ತೃಪ್ತಿದಾಯಕವಾಗಿರುವುದಿಲ್ಲವೆನ್ನುವ ಒಂದೇ ಒಂದು ದೃಷ್ಟಿಯಿಂದ ಕೇಂದ್ರ ಸರ್ಕಾರ, ಮಹಾರಾಷ್ಟ್ರಕ್ಕೆ ಅವರು ಕಳುಹಿಸಿರುವ ಯೋಜನೆಗಳಿಗೆ 20, 000 ಕೋಟಿ, ಆಂಧ್ರಪ್ರದೇಶ 914 ಕೋಟಿ, ತಮಿಳುನಾಡಿಗೆ ಸಾವಿರಾರು ಕೋಟಿ ಕೊಟ್ಟಿರುವುದು, ಗುಜರಾತ್ ಸೇರಿದಂತೆ ಭಾರತದ ಎಲ್ಲಾ ರಾಜ್ಯಗಳಿಗೆ ಕೊಟ್ಟಿರುವ ಉದಾಹರಣೆಯನ್ನು ಅರಿತುಕೊಂಡು ಕರ್ನಾಟಕಕ್ಕೂ ಕೂಡ ಈ ಒಂದು ಜೆಎನ್‌ಯುಆರ್‌ಎಂ ಜವಾಹರ್ ಲಾಲ್ ಅವರ ಹೆಸರಿನಲ್ಲಿ ಕೈಗೆ ಎತ್ತಿಕೊಂಡ ಈ ಒಂದು ಯೋಜನೆ ಕರ್ನಾಟಕ ರಾಜ್ಯದ ರಾಜಧಾನಿಯಲ್ಲಿ ಪ್ರಾರಂಭವಾಗಿರುವುದು, ಈ ಯೋಜನೆ ಪ್ರಾರಂಭವಾಗುವುದಕ್ಕೆ ಮುಂಚೆ ಈ 4 ವ್ಯಾಲಿಗಳನ್ನು ನಾವು ಆಧುನೀಕರಣಗೊಳಿಸಬೇಕೆನ್ನುವ ಒಂದು ಯೋಜನೆಯನ್ನು ಕೈಗೆತ್ತಿಕೊಂಡಿದ್ದೆವು. ಸನ್ಮಾನ್ಯ ಎಂ.ಆರ್. ಶ್ರೀನಿವಾಸಮೂರ್ತಿಯವರು ಆಯುಕ್ತರಾಗಿದ್ದಾಗ, ತದ ನಂತರ ಬಂದ ನಮ್ಮ ನಗರಾಭಿವೃದ್ಧಿ ಕಾರ್ಯದರ್ಶಿಗಳಾದ ಜ್ಯೋತಿರಾಮಲಿಂಗಂ ಅವರು ಈ ಯೋಜನೆಯನ್ನು ಕೈಗೆತ್ತಿಕೊಂಡಾಗ ಈ ಒಂದು ಪ್ರಾಜೆಕ್ಟ್ ಕೇಂದ್ರ ಸರ್ಕಾರದಿಂದ ಬಂತು. ಅದಕ್ಕೆ ಇದನ್ನು ಸೇರಿಸಿ ಸುಮಾರು 900 ಕೋಟಿ ರೂಪಾಯಿಗಳಿಗೂ ಮೇಲ್ಪಟ್ಟ ಒಂದು ಯೋಜನೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿ ಇಡೀ ರಾಷ್ಟ್ರದಲ್ಲಿ ಅನೇಕ ಕೇಂದ್ರ ಸರ್ಕಾರದ ಯೋಜನೆಗಳನ್ನು ಮಾಡುತ್ತಿರುವಾಗ, ಕರ್ನಾಟಕ ರಾಜ್ಯದಲ್ಲಿ ಒಂದೇ ಒಂದು ಯೋಜನೆಯನ್ನು ಕೈಗೆತ್ತಿಕೊಂಡು, ಆ ಯೋಜನೆಯೂ ಕೂಡ ತಾಂತ್ರಿಕ ದೋಷ ಹಾಗೂ ಹಗರಣದ ವ್ಯವಸ್ಥೆಯಿಂದ ಕೂಡಿರುವುದು ಒಂದು ರೀತಿಯ ವಿಷಾದನೀಯ ಸಂಗತಿ. ಇದು ಯಾವ ರೀತಿಯಾಗಿ ತಾಂತ್ರಿಕ ದೋಷದಿಂದ ಕೂಡಿದೆ ಎಂದರೆ, ಈ ಬಗ್ಗೆ ಸಾಕಷ್ಟು ಬೆಳಕನ್ನು ಮಿತ್ರರಾಗಿರುವ ಶಿವಕುಮಾರ್ ಅವರು ಚೆಲ್ಲಿದ್ದಾರೆ. ಈ ಯೋಜನೆಯನ್ನು ಮಾಡಿದ ಸಂದರ್ಭದಲ್ಲಿ ಬೆಂಗಳೂರು ನಗರ ಸಮುದ್ರ ಮಟ್ಟಕ್ಕಿಂತ ಸುಮಾರು 3000 ಅಡಿ ಮೇಲಿರುವ ಈ ನಗರಕ್ಕೆ 4 ದಿಕ್ಕುಗಳಲ್ಲಿರುವ ಶಾಶ್ವತವಾದ ನದಿಗಳೇನವೆ, ಇವೆಲ್ಲವೂ ಕೂಡ ಒಂದು ಕಾಲದಲ್ಲಿ ಈ ನದಿಗಳ ನೀರನ್ನು ಉಪಯೋಗಿಸಿ ಸಾರ್ವಜನಿಕರು ಅದರಿಂದ ಉಪಯೋಗ ಪಡೆಯುತ್ತಿದ್ದರು. ಆದರೆ ಈ ನಾಲ್ಕು ನದಿಗಳಲ್ಲಿ ಕೂಡ ಇವತ್ತು

ಕೊಳಚೆ ನೀರನ್ನು ಬಿಡತಕ್ಕಂತಹ ಪರಿಪಾಠ ಆಗಿದೆ. ಈ ಯೋಜನೆಯಲ್ಲಿ ತಾಂತ್ರಿಕ ದೋಷ ಇದೆ ಎಂದು ನಾನು ಏಕೆ ಹೇಳಿದೆ ಎಂದರೆ, ಯೋಜನೆಯನ್ನು ಕೈಗೆತ್ತಿಕೊಳ್ಳತಕ್ಕಂತಹ ಸಂದರ್ಭದಲ್ಲಿ ಇದಕ್ಕೆ ಬೇಕಾದ ಪೂರಕವಾದ ವ್ಯವಸ್ಥೆ ಕೇವಲ ಬೆಂಗಳೂರು ಮಹಾನಗರ ಪಾಲಿಕೆಯ ಬೃಹತ್ ಬೆಂಗಳೂರು ಅಲ್ಲ, ಇದಕ್ಕೆ ಬೆಂಗಳೂರು ಜಲ ಮಂಡಳಿಗೆ ಕೂಡ ಅಷ್ಟೇ ಜವಾಬ್ದಾರಿ ಇದೆ. ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರತಕ್ಕಂತಹ ಕೊಳಚೆ ನೀರನ್ನು ಏನು ಹೊರಗಡೆ ಕಳುಹಿಸುತ್ತಿದ್ದೇವೆ, ಆ ನೀರಿನ ಪೈಪ್‌ಗಳು ಕೂಡ ಆ ವ್ಯಾಲಿಯಲ್ಲಿ ಹೋಗಿ ಬೀಳುತ್ತಿದೆ. ಈ ವ್ಯಾಲಿಯಲ್ಲಿ ಹೋಗತಕ್ಕಂತಹ ಕೊಳಚೆ ನೀರಿನ ಪೈಪ್‌ಗಳನ್ನು ಯಾವ ರೀತಿ ಮಾಡಬೇಕು, ತಾಂತ್ರಿಕವಾಗಿ ಇದನ್ನು ಯಾವ ರೀತಿ ಸರಿಪಡಿಸಬೇಕು, ಇದರ ಸಾಧಕ ಬಾಧಕ ಏನು ಎನ್ನುವುದನ್ನು ಚಿಂತನೆ ಮಾಡದೆ, ಎಲ್ಲೋ ಒಂದು ಕಛೇರಿಯಲ್ಲಿ ಕುಳಿತು ಸುಮಾರು 900 ಕೋಟಿ ರೂಪಯಿಗಳ ಯೋಜನೆಯನ್ನು ಸಿದ್ಧಪಡಿಸಿ ಇದಕ್ಕೆ ಸುಮಾರು 15 ಕೋಟಿ ರೂಪಾಯಿಗಳ ಪ್ಯಾಕೇಜ್‌ಗಳನ್ನು ಮಾಡಿ 15 ಪ್ಯಾಕೇಜ್‌ಗಳನ್ನು ಕೊಟ್ಟಿದ್ದಾರೆ. ಅವರು ಸಾಕಷ್ಟು ವಿವರಗಳನ್ನು ಹೇಳಿದ್ದಾರೆ. ನಾನು ವಿವರಗಳಿಗೆ ಹೋಗುವುದಿಲ್ಲ. ತಮ್ಮ ಮೂಲಕ ಸರ್ಕಾರವನ್ನು ಕೇಳುತ್ತೇನೆ, ವಿಶೇಷವಾಗಿ ಮಿತ್ರರಾದ ಮಾನ್ಯ ಅಶೋಕ್‌ರವರು ಮಂತ್ರಿಗಳಾಗಿ ಒಂದು ಪತ್ರವನ್ನು ಬರೆದ ಮೇಲೆ ನಾನಿರಬಹುದು, ಬೆಂಗಳೂರು ನಗರದ 13–14 ಜನ ಶಾಸಕರು ಏನಿದ್ದೇವೆ, ಒಂದು ದಿನವೂ ಕೂಡ ನಮಗೆ ಯಾರಿಗೂ ಅದಕ್ಕೆ ಕರೆದಿಲ್ಲ. ಯಾರನ್ನೂ ಕೂಡ ಲೆಕ್ಕಕ್ಕೆ ಇಟ್ಟುಕೊಂಡಿಲ್ಲ. ಈ ಅಧಿಕಾರಿಗಳಿಗೆ ಇಚ್ಛಾಶಕ್ತಿ ಕೊರತೆ ಇದೆ. ಚುನಾಯಿತ ಪ್ರತಿನಿಧಿಗಳು ಎಂದರೆ ಇವರಿಗೆ ಅವರ ಬಗ್ಗೆ ಗೌರವ ಇಲ್ಲ. ಆದರೆ ಈ ಹಣ ಕೊಟ್ಟಿರತಕ್ಕಂಥಾದ್ದು ಡಾ॥ ಮನಮೋಹನ್‌ಸಿಂಗ್‌ರವರು ಈ ರಾಷ್ಟ್ರದ ಪ್ರಧಾನಿಗಳು ಎಲ್ಲೋ ಒಂದು ಕಡೆ ಅಭಿವೃದ್ಧಿಯ ಪಥದಲ್ಲಿ ಬೆಂಗಳೂರನ್ನು ಕೂಡ ಕೊಂಡೊಯ್ಯಬೇಕು, ವಿಶ್ವದ ಜನ ಏನು ನೋಡುತ್ತಿದ್ದಾರೆ, ಅದಕ್ಕೆ ಬೇಕಾದ ಮೂಲಭೂತ ಸೌಕರ್ಯಗಳನ್ನು ಕೊಡಬೇಕೆಂದು ತೀರ್ಮಾನ ಆಗಿತ್ತು. ಎಲ್ಲೋ ಕುಳಿತುಕೊಂಡರು, ಯಾರೋ ಗೆರೆ ಹಾಕಿದರು, ತಂದರು, ಕೊಟ್ಟರು, ಮಾಡಿದರು. ಇದರಲ್ಲಿ ಮೂರು ನಾಲ್ಕು ಅಂಶಗಳು ಅಡಕವಾಗಿವೆ. ಇವರು ಇದನ್ನು ಮಾಡುವ ಸಂದರ್ಭದಲ್ಲಿ ತಾಂತ್ರಿಕವಾಗಿ ಈ ನಾಲ್ಕು ವ್ಯಾಲಿಗಳು 250 ಕಿ.ಮಿ.. ಏನಿವೆ, ಈ ನಾಲ್ಕು ವ್ಯಾಲಿಗಳನ್ನು ಇವರು ಸರ್ವೇ ಮಾಡಿಲ್ಲ. ಇವರು ಎಲ್ಲೆಲ್ಲಿಯೂ ಓಡಾಡಿಲ್ಲ. ನಾನೂ ಕೂಡ ಬೆಂಗಳೂರು ನಗರದ ಸಚಿವನಾಗಿ ಸಿಟಿ ಮಾರುಕಟ್ಟೆಯಿಂದ ಚಲ್ಲಘಟ್ಟ ವ್ಯಾಲಿಗೆ

ನಡೆದುಕೊಂಡು ಹೋಗಿದ್ದೇನೆ. ಸುಮಾರು 16 ರಂದ 17 ಕಿ.ಮೀ. ದೂರವನ್ನು ಅಂದಿನ ಮುಖ್ಯ ಅಭಿಯಂತರರಾಗಿದ್ದ ಅಶ್ವಥನಾರಾಯಣರವರು, ನಾವು ಮತ್ತು ಅನೇಕ ಅಧಿಕಾರಿಗಳು ನಡೆದುಕೊಂಡು ಹೋದೆವು. ಬೆಂಗಳೂರು ನಗರದ ಸಿಟಿ ಮಾರುಕಟ್ಟೆಗೂ ಮತ್ತು ಚಲ್ಲಘಟ್ಟ ವ್ಯಾಲಿಗೂ ಇರತಕ್ಕಂತಹ ವ್ಯತ್ಯಾಸ ಕೇವಲ 14 ರಿಂದ 15 ಅಡಿ. ಕೋರಮಂಗಲದಲ್ಲಿ ಏನು ನಮ್ಮ ಕ್ರೀಡಾ ಗ್ರಾಮ ಇದೆ, ಈ ಕ್ರೀಡಾ ಗ್ರಾಮಕ್ಕೂ ಚಲ್ಲಘಟ್ಟ ವ್ಯಾಲಿಗೂ ನಾಲ್ಕೈದು ಅಡಿ ಇರಬಹುದು. ಮಾನ್ಯ ಶ್ರೀನಿವಾಸ್‌ರವರು ಕೂಡ ಅದನ್ನು ನೋಡಿದ್ದಾರೆ. ಇದು ಯಾವುದನ್ನೂ ಕೂಡ ಅವರು ಪರಿಗಣನೆಗೆ ತೆಗೆದುಕೊಂಡಿಲ್ಲ. ಬೆಂಗಳೂರು ನಗರದಲ್ಲಿ ಮಳೆ ಬಂದಿತು ಎಂದರೆ, 20 ವರ್ಷಗಳಲ್ಲಿ ಅದು ಎಲ್ಲೆಲ್ಲಿ ತೊಂದರೆಯಾಗುತ್ತಿತ್ತು, ಅಲ್ಲಿಯೇ ಇವತ್ತಿಗೂ ಕೂಡ ತೊಂದರೆಯಾಗುತ್ತಿದೆ. 138 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. 138 ಕೋಟಿ ರೂಪಾಯಿಗಳಲ್ಲಿ ನಾನು ಸನ್ಮಾನ್ಯ ಸಚಿವರಲ್ಲಿ ಮನವಿ ಮಾಡುತ್ತೇನೆ...

ಅಧ್ಯಕ್ಷರು: ಮಾನ್ಯ ಅಶೋಕ್‌ರವರೇ ಗಂಭೀರವಾಗಿ ಕೇಳಿ. ಶಾಸಕರು ಬಂದರೆ ಆ ಮೇಲೆ ಬನ್ನಿ ಎಂದು ಹೇಳಿ. ಬಹಳಷ್ಟು ಅವ್ಯವಹಾರಗಳಾಗಿವೆ ಎಂದು ಹೇಳುತ್ತಾರೆ. ಎಷ್ಟರ ಮಟ್ಟಿಗೆ ಆಗಿದೆ ಎಂದು ನನಗೆ ಗೊತ್ತಿಲ್ಲ. ಈ ತರಹ ಆದರೆ ಹೇಗೆ ಹೇಳಿ ನೀವು?

ಶ್ರೀ ವಿ. ಸೋಮಣ್ಣ: ಮಾನ್ಯ ಅಧ್ಯಕ್ಷರೆ, 138 ಕೋಟಿ ರೂಪಾಯಿಗಳಲ್ಲಿ ಎಷ್ಟು ಕೋಟಿ ರೂಪಾಯಿಗಳನ್ನು ಹೂಳೆತ್ತುವುದಕ್ಕೆ ಕೊಟ್ಟಿದ್ದಾರೆ, ಎಷ್ಟು ಕೋಟಿ ರೂಪಾಯಿಗಳನ್ನು RCC retaining ಮಾಡುವುದಕ್ಕೆ ಕೊಟ್ಟಿದ್ದಾರೆ, ಎಷ್ಟು ಬ್ರಿಡ್ಜ್‌ಗಳನ್ನು ಮಾಡಿದ್ದಾರೆ, ಯಾವ್ಯಾವುದಕ್ಕೆ ಎಷ್ಟೆಷ್ಟು ಖರ್ಚು ಮಾಡಿದ್ದಾರೆ, ಇದರ ಸಾಧಕ ಬಾಧಕಗಳೇನು? ಒಂದು ಶಾಶ್ವತವಾದ ಯೋಜನೆಯಲ್ಲಿ ಎಷ್ಟು ಸಾರಿ ಸಂಬಂಧಪಟ್ಟ ಜಲ ಮಂಡಳಿ ಅಧಿಕಾರಿಗಳು ಮತ್ತು ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಿಗಳು, ಚುನಾಯಿತ ಪ್ರತಿನಿಧಿಗಳು ಕುಳಿತು ಸಭೆಗಳನ್ನು ಮಾಡಿದ್ದಾರೆ. ಈ ಯೋಜನೆಗೆ ಈಚೆಗೆ ಬಂದ ಮೇಲೆ ಇವರು ಎಲ್ಲೋ ಒಂದು ಕಡೆ ಎಚ್ಚೆತ್ತುಕೊಂಡು ಈ ಯೋಜನೆಯಲ್ಲಿರುವ ಒಬ್ಬ consultancy ಯಾರಿದ್ದಾರೆ, ಈ consultancy ಯಾರು? ಇವರು ಎಷ್ಟು ಹಣವನ್ನು ಕೊಟ್ಟಿದ್ದಾರೆ, ಇದಕ್ಕೆ ಏನಾದರೂ ಟೆಂಡರ್ ಕರೆದಿದ್ದಾರಾ? ಟೆಂಡರ್ ಕರೆದಂತಹ ಸಂದರ್ಭದಲ್ಲಿ ಈ consultancy ಯಾವತ್ತಾದರೂ ಕೂಡ ಆ ವ್ಯಾಲಿಗಳಿಗೆ ಹೋಗಿ ಆ ವ್ಯಾಲಿಗಳ ಡೆಪ್ತ್ ಎಷ್ಟು? ಆ ವ್ಯಾಲಿಗಳು ಎಷ್ಟೆಷ್ಟು

ದೂರ ಬರುತ್ತವೆ, ಯಾವ ರೀತಿ ಅದನ್ನು ಮಾಡಬೇಕು ಎನ್ನುವ ಬಗ್ಗೆ ಸವಿಸ್ತಾರವಾದ ನೋಟನ್ನು ಸರ್ಕಾರಕ್ಕೆ ಕೊಟ್ಟಿದ್ದಾರಾ? ಕೊಟ್ಟಿದ್ದರೆ ಸರ್ಕಾರ ಏಕೆ ಇದರ ಬಗ್ಗೆ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿಲ್ಲ? ಲಕ್ಷಕ್ಕೂ ಮೇಲ್ಪಟ್ಟು ಮಣ್ಣನ್ನು ತೆಗೆದಿದ್ದೇವೆಂದು ಏನು ಹೇಳುತ್ತಾರೆ, ತಮಗೇ ಗೊತ್ತಿದೆ, ಒಂದು ಮನೆ ಕಟ್ಟಬೇಕಾದರೆ ಸಾಮಾನ್ಯ 30-40, 40-60, ಮತ್ತು 50-80 ರಲ್ಲಿ ಸೆಲ್ಲರ್ ಮಾಡುವುದಕ್ಕಾಗಿ ಮಣ್ಣನ್ನು ತೆಗೆಯಬೇಕಾದರೆ, ಕನಿಷ್ಟ ಅವರು ಅದನ್ನು ತೆಗೆಯುವುದಕ್ಕೆ ಒಂದೂವರೆಯಿಂದ ಎರಡು ತಿಂಗಳು ತೆಗೆದುಕೊಳ್ಳುತ್ತಾರೆ. ಲಕ್ಷಾಂತರ ಟನ್ ಮಣ್ಣನ್ನು ಅಗೆದು ಹೊರಗಡೆ ಕಳುಹಿಸುವುದು ಇದು ಸುಲಭಸಾಧ್ಯವಾದ ಕೆಲಸವಲ್ಲ. ಎಲ್ಲೋ ಒಂದು ಕಡೆ ಪತ್ರಿಕೆಗಳಲ್ಲಿ ಎಷ್ಟು ಬೇಕಾದರೂ ಬರೆದುಕೊಳ್ಳಬಹುದು. ಆದರೆ ನನ್ನ ಕ್ಷೇತ್ರದಲ್ಲಿ ವೃಷಭಾವತಿ ವ್ಯಾಲಿ ಬರುತ್ತದೆ. ಬೆಂಗಳೂರು ನಗರದ ಶೇ.55 ರಿಂದ 56% ನೀರು ನನ್ನ ಭಾಗದಲ್ಲಿ ಹೋಗುತ್ತದೆ. ಅದು ಗಾಂಧಿನಗರ ಇರಬಹುದು, ಮಲ್ಲೇಶ್ವರಂ ಇರಬಹುದು, ರಾಜಾಜಿನಗರ ಇರಬಹುದು, ಚಿಕ್ಕಪೇಟೆ ಇರಬಹುದು, ಬಸವನಗುಡಿ ಇರಬಹುದು ಮತ್ತು ಉತ್ತರ ಹಳ್ಳಿಯ ಬಹುತೇಕ ಭಾಗಗಳು ಇವೆಲ್ಲವೂ ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುತ್ತವೆ. ಮಾನ್ಯ ಅಧ್ಯಕ್ಷರೆ, ಇವರು ಏನು ತಪ್ಪು ಮಾಡಿದ್ದಾರೆಂದರೆ, ಇದಕ್ಕೆ ಯಾರೂ ಹೇಳುವವರು ಕೇಳುವವರು ಇಲ್ಲ. ಇದಕ್ಕೆ ಯಾವುದೇ ಯಜಮಾನ ಇಲ್ಲ. ಇದಕ್ಕೆ ಯಾರ ಇಚ್ಛಾಶಕ್ತಿಯೂ ಇಲ್ಲ. ಯಾರೂ ಕೂಡ ಇದರ ಬಗ್ಗೆ ಗಮನಹರಿಸದೆ, ಕೇಂದ್ರ ಸರ್ಕಾರ ಕೊಡುತ್ತದೆ, ಎಲ್ಲೋ ಒಂದು ಕಡೆ ನಡೆದುಕೊಂಡು ಹೋಗಲಿ ಎಂದು ನಡೆಯುತ್ತಿದೆ. ನಮ್ಮ ಮಿತ್ರರಾದ ಮಾನ್ಯ ಶಿವಕುಮಾರ್‌ರವರು ಹೇಳಿದರು, ಅಧಿಕಾರಿಗಳು ಯಾವ್ಯಾವ ರೀತಿ ನಡೆದುಕೊಳ್ಳುತ್ತಾರೆ ಎನ್ನುವುದಕ್ಕಿಂತ ಹೆಚ್ಚಾಗಿ IAS ಅಧಿಕಾರಿಗಳು ಕೆಲವರಿಗೆ ಎಲ್ಲೋ ಒಂದು ಕಡೆ ಅವರದೇ ಆದ ಎರಡು ಕೊಂಬುಗಳಿರುತ್ತವೆ. IAS ನ್ನು ಕೇವಲ ಆರು ತಿಂಗಳು ಒಂದು ವರ್ಷ ಓದಿ ಪಾಸು ಮಾಡಿದ ತಕ್ಷಣ ದೊಡ್ಡವರಾಗುವುದಿಲ್ಲ. ಸಾಮಾನ್ಯ ಜನರ ಒಡನಾಟ ಇರಬೇಕಾಗುತ್ತದೆ. ಬಡವರ ಬಗ್ಗೆ ಕಾಳಜಿ ಇರಬೇಕಾಗುತ್ತದೆ. ಚುನಾಯಿತ ಪ್ರತಿನಿಧಿಗಳಾದ ನಾವುಗಳು 5 ಲಕ್ಷದಿಂದ 6 ಲಕ್ಷ ಮತದಾರರನ್ನು face ಮಾಡುತ್ತೇವೆ. ಮಾನ್ಯ ಅಶೋಕ್‌ರವರು 14 ಲಕ್ಷ ಮತದಾರರನ್ನು ಫೇಸ್ ಮಾಡುತ್ತಾರೆ. ಬೆಂಗಳೂರು ನಗರ ಸೂಕ್ಷ್ಮವಾದ ನಗರ. ಇವರು ಏನೇ ತಪ್ಪು ಮಾಡಿದರೂ ಕೂಡ ಜನ ಹೇಳುವುದು ಜನಪ್ರತಿನಿಧಿಗಳಿಗೆ. ಅವರು ಏನು ಹೇಳಿದರು ಎನ್ನುವುದನ್ನು ಬೆಳಿಗ್ಗೆ ತಮ್ಮ ಕೊಠಡಿಗೆ ಬಂದು ಹೇಳಿದೆ. ಮನ ನೊಂದು ಹೇಳುತ್ತಿದ್ದೇನೆ, ಈ

ಕೆಲಸವನ್ನು ಕೇವಲ ಒಬ್ಬ ಆಯುಕ್ತರು ಮಾಡಿದ್ದಾರೆಂದರೆ, ನಾನು ಒಪ್ಪಿಕೊಳ್ಳುವುದಕ್ಕೆ ತಯಾರಿಲ್ಲ. ಅವರದೇ ಆದ ಒಂದು ಕೋಟೆ ಇದೆ. ಈ ಕೋಟೆಯಲ್ಲಿ ಯಾರ್‍ಯಾರು ಏನೇನು ಎನ್ನುವುದಕ್ಕಿಂತ ಹೆಚ್ಚಾಗಿ ಎಲ್ಲೋ ಒಂದು ಕಡೆ ಇದರ ರೂಪುರೇಷೆಗಳನ್ನು ಸಿದ್ದಪಡಿಸುವಾಗ ಆಗಿರತಕ್ಕಂತಹ ತಾಂತ್ರಿಕ ತೊಂದರೆಗಳನ್ನು ಯಾವುದೇ ಒಬ್ಬ ಅಧಿಕಾರಿ ಮನಗಾಣಲಿಲ್ಲ. ಇವತ್ತು ಮಳೆ ಬರುತ್ತಿದೆ. ಹೂಳನ್ನು ತೆಗೆದಿದ್ದೇವೆಂದು ಹೇಳುತ್ತಾರೆ. ಎರಡು ಕಡೆ ಆಸರೆ ಗೋಡೆಗಳಿವೆ. ನಾನು ಇವತ್ತು ತಮ್ಮ ಮೂಲಕ ಇಲ್ಲಿ ಕುಳಿತಿರತಕ್ಕಂತಹ ಅಧಿಕಾರಿಗಳಲ್ಲಿ ಮನವಿ ಮಾಡುತ್ತೇನೆ, ಎಷ್ಟು ಕಡೆ ತಾವು ನಡೆದುಕೊಂಡು ಹೋಗಿದ್ದೀರಿ, ಇಂತಹ ಪ್ರಕರಣಗಳ ಮೇಲೆ ಬೆಳಕು ಚೆಲ್ಲುವುದು ಬಹಳ ಕಡಿಮೆ, ಇದು ಕೇವಲ ಈ ಸರ್ಕಾರ ಮಾಡಿತು ಎಂದು ನಾವು ಹೇಳುವುದಿಲ್ಲ. ಇದು ಎಲ್ಲರೂ ಇದ್ದಾಗ ಇದ್ದಂತಹ ವ್ಯವಸ್ಥೆ ಇದು. ಕೇವಲ ಮಾನ್ಯ ಕುಮಾರಸ್ವಾಮಿಯವರು ಇದ್ದಾಗ ಇದು ಆಗಿ ಹೋಗಿದೆ ಎಂದು ಅಲ್ಲ. ಮಾನ್ಯ ಕುಮಾರಸ್ವಾಮಿಯವರ ಜಾಗದಲ್ಲಿ ಮಾನ್ಯ ಧರ್ಮಸಿಂಗ್‌ರವರು ಮುಂದುವರೆದಿದ್ದರೆ ಇದೇ ಆಗುತ್ತಿತ್ತೇನೋ ಏನೋ. ಆದರೆ ಎಲ್ಲೋ ಒಂದು ಕಡೆಗೆ ಇವತ್ತು ಆಗಿರತಕ್ಕಂತಹ ಅನ್ಯಾಯ, ಇದು ಕೇವಲ ಕರ್ನಾಟಕಕ್ಕೆ ಎನ್ನುವುದಕ್ಕಿಂತ ಹೆಚ್ಚಾಗಿ ಸಾಮಾನ್ಯ ಜನ ಯಾರು ವಾಸ ಮಾಡುತ್ತಿದ್ದಾರೆ, ಗುಡಿಸಲುಗಳನ್ನು ಕಟ್ಟಿಕೊಂಡು ಯಾರು ವಾಸ ಮಾಡುತ್ತಿದ್ದಾರೆ, ಬಡವರು ಯಾರಿದ್ದಾರೆ ಇವರಿಗೆ ಬಹಳ ಅನಾನುಕೂಲವಾಗಿದೆ. ಮಾನ್ಯ ಅಶೋಕರವರೇ, ಹೂಳನ್ನು ಅಲ್ಲಲ್ಲಿ ಅಲ್ಪಸ್ವಲ್ಪ ತೆಗೆದಿದ್ದಾರೆ. 20 ರಿಂದ 25 ವರ್ಷಗಳ ಹಿಂದೆ ಕಟ್ಟಿದ್ದಂತಹ ಆಸರೆ ಗೋಡೆಗಳು ಎಲ್ಲಾ ಬಿದ್ದು ಹೋಗಿವೆ. ಬೇರೆ ಬೇರೆ ಕಡೆ ಮಳೆ ಸುರಿಯುತ್ತಿದೆ. ಆ ರೀತಿಯ ಪ್ರವಾಹ ಬೆಂಗಳೂರಿಗೆ ಏನಾದರೂ ಬಂದಿದ್ದರೆ ನಾವು ಯಾರೂ ಬೆಂಗಳೂರು ನಗರದ ಶಾಸಕರಾಗಿ ಇರುವುದಕ್ಕೆ ಆಗುತ್ತಿರಲಿಲ್ಲ. ಮಾನ್ಯ ರಾಮಲಿಂಗಾರೆಡ್ಡಿಯವರೂ ಕೂಡ ಸಚಿವರಾಗಿ ಕೆಲಸ ಮಾಡಿದ್ದಾರೆ. ತಾಂತ್ರಿಕ ದೋಷ ಎಲ್ಲಿದೆ ಎಂದರೆ, ಇದನ್ನು ಎಸ್ಟಿಮೇಟ್ ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿದರಲ್ಲ, ಯಾವುದೇ ಮುಂದಾಲೋಚನೆ ಇಲ್ಲದೇ, ಯಾವುದೇ ಪೂರ್ವಾಗ್ರಹ ಇಲ್ಲದೇ, ಬೆಂಗಳೂರು ನಗರದ ಈ ನಾಲ್ಕು ದೊಡ್ಡ ದೊಡ್ಡ ವ್ಯಾಲಿಗಳು ಅದಕ್ಕೆ ಹೊಂದಿಕೊಂಡಿರತಕ್ಕಂತಹ ಸೆಕೆಂಡರಿ ಡ್ರೈನ್‌ಗಳು, ಅದಕ್ಕೆ ಹೊಂದಿಕೊಂಡಿರತಕ್ಕಂತಹ ಪ್ರೈಮರಿ ಡ್ರೈನ್‌ಗಳ ಇತಿಹಾಸವನ್ನು ಯಾವುದೇ ಅಧಿಕಾರಿಗಳು ನೋಡಲಿಲ್ಲ. ಇವತ್ತಿಗೂ ಕೂಡ ಅವರಿಗೆ ಸರಿಯಾಗಿ ಗೊತ್ತಿಲ್ಲ. ವಿಶೇಷವಾಗಿ ನಾನು ಸರ್ಕಾರಕ್ಕೆ ವಿನಂತಿ ಮಾಡುವುದು, 2–3 ವಿಚಾರಗಳಿವೆ.

ಇವತ್ತು ಈ ಯೋಜನೆಯನ್ನು ಏನು ಕೈಗೆತ್ತಿಕೊಂಡಿದ್ದೀರಿ, ಇದರಲ್ಲಿ ಎಷ್ಟು ತಪ್ಪುಗಳಿವೆ, ಅದನ್ನು ಯಾವ ರೀತಿ ಸರಿ ಮಾಡುತ್ತೀರಿ ಎನ್ನುವುದು ಒಂದು.ಇನ್ನೊಂದು ಈ ತಾಂತ್ರಿಕ ದೋಷಗಳಿಂದ ಕೂಡಿರತಕ್ಕಂಥ ಈ ಯೋಜನೆಯಲ್ಲಿ ಜಲ ಮಂಡಳಿಯನ್ನು ಕೂಡ ಸೇರಿಸಿಕೊಂಡು ತಾವು ಕೆಲಸ ಕಾರ್ಯಗಳನ್ನು ಪ್ರಾರಂಭ ಮಾಡುವುದಕ್ಕೆ ನಿಮ್ಮ ಕ್ರಿಯೆ ಏನು? ಮೂರನೆಯದಾಗಿ, ಈ ವ್ಯಾಲಿಯನ್ನು ಮಾಡುವಾಗ ಎಲ್ಲೋ ಒಂದು ಕಡೆ ಲೆವೆಲ್ ತೆಗೆದುಕೊಳ್ಳದೇ ಯದ್ವಾ ತದ್ವಾ ನೀವು ಮಾಡಿರುವುದರಿಂದ ಎಲ್ಲಾ ಆ ತಡೆಗೋಡೆಗಳು ಬಿದ್ದು ಹೋಗುತ್ತಿವೆ. ಇದಕ್ಕೆ ತಾವು ಎಷ್ಟು ಕೊಡುತ್ತೀರಿ? ನೌಕರರು ಮತ್ತು ಅಧಿಕಾರಿಗಳ ಒಡಂಬಡಿಕೆ ಇಲ್ಲದೇ ಈ ಯೋಜನೆಯನ್ನು ಕೈಗೆತ್ತಿಕೊಂಡಿದ್ದೀರಿ. ಇದನ್ನು ಏನಾದರೂ ಸರಿಮಾಡುವುದಕ್ಕೆ ಸಾಧ್ಯತೆ ಇದೆಯೆ? ಇದರ ಜೊತೆಗೆ ಈ ನಾಲ್ಕು ವ್ಯಾಲಿಗಳಲ್ಲಿ ಈಗಾಗಲೇ ಎಷ್ಟು ಕಿ.ಮೀ. ಆರ್.ಸಿ.ಸಿ. retaining wall ಮಾಡಿದ್ದೀರಿ? ಎಷ್ಟು ಕಡೆ ಕಲ್ಲುಗೋಡೆಗಳನ್ನು ಕಟ್ಟಿದ್ದೀರಿ? ಎಷ್ಟು ರೂಪಾಯಿ ಖರ್ಚು ಮಾಡಿದ್ದೀರಿ ಎಂಬ ಬಗ್ಗೆ ದಯಮಾಡಿ ತಿಳಿಸಬೇಕಾಗುತ್ತದೆ. ಜಲಮಂಡಳಿ ಮತ್ತು ಬೃಹತ್ ಬೆಂಗಳೂರು ಮಹಾನಗರಪಾಲಿಕೆಯವರು ಕುಳಿತುಕೊಂಡು ಇದನ್ನು ಮತ್ತೊಮ್ಮೆ ಪುನರ್ ಪರಿಶೀಲನೆ ಮಾಡಿ ಈ ಯೋಜನೆಯನ್ನು ಇನ್ನೂ ಇಪ್ಪತ್ತು, ಮೂವತ್ತು ವರ್ಷಗಳವರೆಗೆ ಸರಿಯಾದ ರೀತಿಯಲ್ಲಿ ಇರುವಂತೆ ಒಂದು ಕಾರ್ಯಕ್ರಮವನ್ನು ಮಾಡಿಕೊಡುವುದಕ್ಕೆ ತಮಗೆ ಸಾಧ್ಯತೆ ಇದೆಯೆ? ಇದರ ಜೊತೆ ತಾವೇನು ಸ್ಟೂಪ್ ಎಂದು ಕನ್ಸಲ್‌ಟೆನ್ಸಿ ಬಗ್ಗೆ ಹೇಳಿದ್ದೀರಿ, ಇವರ ಇತಿಹಾಸವೇನು? ಅವರಿಗೆ ಇದನ್ನು ಮಾಡತಕ್ಕಂಥ ಶಕ್ತಿ ಇದೆಯೆ? ಎಂಬ ಬಗ್ಗೆ ತಿಳಿದುಕೊಳ್ಳಬೇಕಾಗುತ್ತದೆ. ಇದರ ಜೊತೆಯಲ್ಲಿ ಸುಮಾರು ಕಡೆಗಳಲ್ಲಿ ಬೆಂಗಳೂರಿನಲ್ಲಿ ಅರ್ಧಂಬರ್ಧ ಕೆಲಸಗಳನ್ನು ಮಾಡಿದ್ದಾರೆ. ಈ ರೀತಿ ಮಾಡಿ ಇವತ್ತು ಸಾಕಷ್ಟು ಕೆಲಸಗಳು ನಿಂತುಹೋಗಿರುವುದರಿಂದ ಸಾರ್ವಜನಕರಿಗೆ ತುಂಬಾ ಅನಾನುಕೂಲವಾಗಿದೆ. ಈ ರೀತಿ ಅನಾನುಕೂಲದಿಂದ ನೊಂದಿರುವ ಸಾರ್ವಜನಕರ ನೋವಿಗೆ ತಾವು ಸ್ಪಂದಿಸಿ ಈ ಕಾಮಗಾರಿಗಳನ್ನು ತಕ್ಷಣವೇ ತಾವು ತೆಗೆದುಕೊಳ್ಳುವುದಕ್ಕೆ ಇಚ್ಛಾಶಕ್ತಿಯಲ್ಲಿ ಏನಾದರೂ ಇಂಥ ಭಾವನೆಗಳಿವೆಯೇ?

ಅಧ್ಯಕ್ಷರು: ಆಯಿತು ಬಿಡಿ. ಇಷ್ಟೊಂದು ಪ್ರಶ್ನೆಗಳನ್ನು ಒಟ್ಟಿಗೆ ಹಾಕಿದರೆ ಎಲ್ಲದಕ್ಕೂ ಒಮ್ಮೆಲೆ ಉತ್ತರ ಕೊಡುವುದಕ್ಕಾಗುತ್ತದೆಯೆ?

ಶ್ರೀ ವಿ. ಸೋಮಣ್ಣ: ಸನ್ಮಾನ್ಯ ಅಧ್ಯಕ್ಷರೆ, ನಾನು ಒಂದೇ ಒಂದು ವಿನಂತಿಯನ್ನು ಮಾಡುವುದು. ಇಂಥ ಯೋಜನೆಗಳನ್ನು ಕರ್ನಾಟಕ ರಾಜ್ಯದಲ್ಲಿ

ಕೇಂದ್ರ ಸರ್ಕಾರದ ನೆರವಿನೊಂದಿಗೆ ಮಾಡಬೇಕಾಗಿರುವ ಈ ಸಂದರ್ಭದಲ್ಲಿ ಅಧಿಕಾರಿಗಳು ಎಷ್ಟೊಂದು ಜಾಗರೂಕತೆ ವಹಿಸಿದರೂ ಕೂಡ ಅದು ಅಂಥ ಅತಿಶಯೋಕ್ತಿಯಲ್ಲ. ಆದುದರಿಂದ ಅಧಿಕಾರಿಗಳು ಜಾಗರೂಕತೆ ವಹಿಸುವಾಗ ಇಂಥ ಒಂದು ದೊಡ್ಡ ಅವ್ಯವಸ್ಥೆಯ ಹಗರಣವಾಗಿರತಕ್ಕಂಥ ಇದಕ್ಕೆ ನಾನು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ದಯಮಾಡಿ ಈಗ ಆಗಿರತಕ್ಕಂಥ ಕೆಲಸಗಳಿಗೆ ಒಂದು ಸದನ ಸಮಿತಿಯನ್ನು ತನಿಖೆ ಮಾಡಲು ನೇಮಕ ಮಾಡಬೇಕಾಗುತ್ತದೆ. ಈ ಸದನ ಸಮಿತಿಯನ್ನು ನೇಮಕ ಮಾಡುವಾಗ ಬೆಂಗಳೂರು ನಗರದ ಶಾಸಕರನ್ನು ಅದರಲ್ಲಿ ಸೇರಿಸಬೇಕು. ನಾವೂ ಕೂಡ ಕಳೆದ 25, 30 ವರ್ಷಗಳಿಂದ ಕೆಲಸ ಮಾಡುತ್ತಿದ್ದೇವೆ. ನಮಗೂ ಕೂಡ ಅನುಭವ ಇದೆ. ಆದುದರಿಂದ ಬೆಂಗಳೂರು ನಗರದ ಶಾಸಕರು ಕೂಡ ಒಳಗೊಂಡಂತೆ ತಾವು ಈ ಕೆಲಸವನ್ನು ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಈಗಾಗಲೇ ಆಗಿರತಕ್ಕಂಥ ಹಗರಣಗಳ ಬಗ್ಗೆ ತನಿಖೆ ಮಾಡಲು ಸಿ.ಬಿ.ಐ.ಗೆ ಕೊಡಬೇಕೆಂದು ಮಾನ್ಯ ಶಿವಕುಮಾರ್‌ರವರು ಹೇಳಿದ್ದಾರೆ. ಈ ಹಗರಣಗಳ ಬಗ್ಗೆ ಸಾರ್ವಜನಕರಿಗೆ ಬೆಳಕು ಚೆಲ್ಲುವುದು ಎಷ್ಟು ಮುಖ್ಯವೋ ಈ ಕಾರ್ಯಕ್ರಮಗಳನ್ನು ಮಾಡುವುದೂ ಕೂಡ ಅಷ್ಟೇ ಮುಖ್ಯವಾಗಿದೆ. ಈ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಮುಗಿಸಬೇಕಾಗಿದೆ. ಇದನ್ನು ಮುಗಿಸದಿದ್ದರೆ ಜನರು ನಮ್ಮನ್ನು ಶಪಿಸುತ್ತಾರೆ. ಆದುದರಿಂದ ಇದಕ್ಕೆ ತಮ್ಮ ಯೋಜನೆ ಏನು ಎನ್ನುವುದನ್ನು ದಯವಿಟ್ಟು ತಿಳಿಸಬೇಕೆಂದು ತಮ್ಮ ಮೂಲಕ ವಿನಂತಿ ಮಾಡಿ ತಾವು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಆರ್. ರೋಷನ್‌ಬೇಗ್(ಜಯಮಹಲ್):- ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಶಿವಕುಮಾರ್‌ರವರು ಮತ್ತು ಮಾನ್ಯ ಸೋಮಣ್ಣನವರು ನಡೆದಿರುವ ಹಗರಣಗಳ ಬಗ್ಗೆ ಸಾಕಷ್ಟು ಬೆಳಕು ಚೆಲ್ಲಿದ್ದಾರೆ. ನಾನು ಅದನ್ನು ರಿಪೀಟ್ ಮಾಡುವುದಿಲ್ಲ. ನಾನು ಬೆಂಗಳೂರು ಸಿಟಿಯಲ್ಲಿ ನಾಲ್ಕು ಸಾರಿ ಗೆದ್ದಿದ್ದೇನೆ. ಇದು ಯಾವಾಗ ಪ್ರಾರಂಭವಾಯಿತು ಎಂದರೆ ನನ್ನ ಜಯಮಹಲ್ ಕ್ಷೇತ್ರದಲ್ಲಿ ಹೆಬ್ಬಾಳ್ ವ್ಯಾಲಿ ಬರುತ್ತದೆ. ಹೆಬ್ಬಾಳ್ ವ್ಯಾಲಿಯನ್ನು ನಾನು ಮಾನಿಟರಿಂಗ್ ಮಾಡಿಕೊಂಡು ಬಂದಿದ್ದೇನೆ. ಒಂದು ಹತ್ತು ಬಾರಿ ಕೇಳಿದ್ದೇನೆ. ನಮ್ಮ ಕಾರ್ಯಕರ್ತರನ್ನು ಹೋಗಿ ನೋಡಿಕೊಂಡು ಬನ್ನಿ ಅಲ್ಲಿ ಏನು ಕೆಲಸವಾಗುತ್ತಿದೆಯೆಂದು. ಕೆಲಸ ಎಲ್ಲೆಲ್ಲಿ ಸ್ವಲ್ಪವಾಯಿತೋ ಅದೆಲ್ಲಾ ಸಬ್-ಸ್ಟ್ಯಾಂಡರ್ಡ್, ಕ್ವಾಲಿಟಿ ಕೆಲಸವಾಗಿಲ್ಲ. ಶಿವಕುಮಾರ್‌ರವರು ಹೇಳಿದಂತೆ ಅಷ್ಟೊ

ಟ್ರಕ್‌ಗಳು ಹೋಗಿಯೇ ಇಲ್ಲ, ಇದೆಲ್ಲಾ ಗೋಲ್‌ಮಾಲ್,ಸುಮ್ಮನೆ ನಾಮಕಾವಸ್ಥೆಗೆ ರಾತ್ರಿ ಹೊತ್ತು ಒಂದಷ್ಟು ಟ್ರಕ್‌ಗಳು ಮತ್ತು ಹಗಲು ಹೊತ್ತು ಒಂದಷ್ಟು ಟ್ರಕ್‌ಗಳು ಹೋಗಿವೆಯಷ್ಟೆ.. ಆದರೆ ಕೆಲಸವಾಗಿಯೇ ಇಲ್ಲ. ನಾನು ಮೂರ್‍ನಾಲ್ಕು ಬಾರಿ ಬೆಂಗಳೂರು ಮಹಾನಗರಪಾಲಿಕೆ ಕಛೇರಿಗೆ ಹೋಗಿದ್ದೇನೆ. ನಾನು ಬಹಳ ನೋವಿನಿಂದ ಹೇಳುತ್ತಿದ್ದೇನೆ. ಒಬ್ಬ ಚುನಾಯಿತ ಪ್ರತಿನಿಧಿಯಾಗಿ ಕಾರ್ಪೋರೇಷನ್ ಆಫೀಸಿಗೆ ಹೋಗಿ ಕಮಿಷನರ್ ಮನವಿ ಮಾಡಿ ಕೊಂಡಿದ್ದೇನೆ. ನೋಡಿ ಸ್ವಾಮಿ, ಕೆಲಸಗಳು ಸರಿಯಾಗಿ ಆಗುತ್ತಿಲ್ಲವೆಂದು ಹೇಳಿದ್ದೇನೆ. ಅವರು ಇನ್ನ್ಯಾರೋ ತೋರಿಸಿ ಇದರ ಬಗ್ಗೆ ಇನ್ನೊಬ್ಬ ಐ.ಎ.ಎಸ್. ಆಫೀಸರ್ ಇನ್‌ಚಾರ್ಜ್ ಇದ್ದಾರೆ, ಇವರು ಸ್ಟಾಮ್ ವಾಟರ್, ಡ್ರೈನ್‌ಗೆ ಇನ್‌ಚಾರ್ಜ್, ಇವರನ್ನು ತಾವು ಭೇಟಿ ಮಾಡಿ ಎಂದು ಹೇಳಿದರು. ಅವರನ್ನೂ ಕೂಡ ನಾನು ಮೀಟ್ ಮಾಡಿ ಅವರ ಹತ್ತಿರ ಕೂಡ ನಾನು ಮನವಿ ಮಾಡಿಕೊಂಡೆ. ಆಗ ಅವರು ನಾನು ಬಂದು ಇನ್ಸ್‌ಪೆಕ್ಟ್ ಮಾಡುತ್ತೇನೆ ಎಂದು ಹೇಳಿದರು. ಇನ್ಸ್‌ಪೆಕ್ಟ್ ಮಾಡುತ್ತೇನೆ ಎಂದು ಹೇಳಿದರೆ ಹೊರತು ಇದುವರೆವಿಗೂ ಅವರ‍್ಯಾರು ಇನ್ಸ್‌ಪೆಕ್ಟ್ ಮಾಡಲೇ ಇಲ್ಲ. ಕಾರ್ಪೋರೇಷನ್‌ನಲ್ಲಿ ಕೆಲವು ಅಧಿಕಾರಿಗಳಿಗೆ ಏನಾದರೂ ಹೇಳಿದರೆ ಬಹಳ ಎಫಿಶಿಯೆಂಟ್ ಕೆಲಸ ಮಾಡುವವರೂ ಕೂಡ ಇದ್ದಾರೆ. ಈಗ ಬಂದಿರುವ ಕಮೀಷನರ್ ಕೂಡ ಬಹಳ ಒಳ್ಳೆಯವರು ಇದ್ದಾರೆ. ನಾನು ಇಲ್ಲ ಎಂದು ಹೇಳುವುದಿಲ್ಲ. ಆದರೆ ಈ ಬೆಂಗಳೂರು ಮಹಾನಗರಪಾಲಿಕೆಯಲ್ಲಿ , ನಾನು ಬೆಂಗಳೂರು ನಗರದಲ್ಲಿ, from the time I have been a student leader, ಆಗಿನಿಂದ ನಾನು ನೋಡಿಕೊಂಡು ಬರುತ್ತಿದ್ದೇನೆ, ಈ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಏನು ಕನ್ಸಲ್‌ಟೆಂಟ್ ಎಂದು ಹೇಳಿಕೊಂಡು ಬರುತ್ತಿದ್ದಾರೋ ಇವರದ್ದು ಒಂದು ದೊಡ್ಡ ಮಾಫಿಯಾ. ಈ ಮೋರಿಗಳ ಬಗ್ಗೆ ನಾಲ್ಕು ಪ್ರಾಜೆಕ್ಟ್‌ಗಳು 9ನೇ ಸೆಪ್ಟೆಂಬರ್ 2003 ರಿಂದ ಏನು ಪ್ರಾರಂಭವಾಗಿವೆ, ಆ ದಿನಾಂಕದಿಂದ ಇಲ್ಲಿಯವರೆವಿಗೆ ಅಲ್ಲಿ ಯಾರು ಯಾರು ಅಧಿಕಾರಿಗಳು ಇದ್ದರು ಇವರುಗಳ ಬಗ್ಗೆಯೆಲ್ಲಾ ಸರಿಯಾಗಿ ತನಿಖೆಯಾಗಬೇಕೆಂದರೆ ಶಿವಕುಮಾರ್ ಹೇಳಿದ ಹಾಗೆ ಇದಕ್ಕೆ ಸಿ.ಬಿ.ಐ. ತನಿಖೆಯೇ ಆಗಬೇಕು. ಏಕೆಂದರೆ ಇದರಲ್ಲಿ ಬಹಳ ಜನ ಐ.ಎ.ಎಸ್. ಆಫೀಸರ್ಸ್ ಇದರಲ್ಲಿ ಇನ್‌ವಾಲ್ವ್ ಆಗಿದ್ದಾರೆ. ಈ ಐ.ಎ.ಎಸ್. ಆಫೀಸರ್ಸ್ ಯಾರು ಎಂದರೆ holy cows. ತರಹ. ಇವರ ಮಕ್ಕಳು ಯಾವ ಫಾರೀನ್ ಯುನಿವರ್ಸಿಟಿಯಲ್ಲಿ ಇದ್ದಾರೆ, ಯಾವ ಫಾರೀನ್ ಯೂನಿವರ್ಸಿಟಿಯಲ್ಲಿ ಓದುತ್ತಿದ್ದಾರೆ, ಈ ಬಗ್ಗೆಯೆಲ್ಲಾ ಸ್ವಲ್ಪ ಯಾರಾದರೂ ಇನ್‌ವೆಸ್ಟಿಗೇಟ್ ಮಾಡಿದರೆ ಇದರ ಬಗ್ಗೆಯೆಲ್ಲಾ ಗೊತ್ತಾಗುತ್ತದೆ. ಇವರೆಲ್ಲರೂ

ಬಹಳ ಹರಿಶ್ಚಂದ್ರ ತರಹ ನಾಟಕ ಮಾಡುತ್ತಾರೆ. ಬಹಳ ಆರ್ಡಿನರಿ ಶರ್ಟ್ ಒಂದು ಪ್ಯಾಂಟ್ ಹಾಕಿಕೊಂಡು ಬಂದು ಆಫೀಸ್‌ನಲ್ಲಿ ಕುಳಿತುಕೊಳ್ಳುತ್ತಾರೆ. ಅವನನ್ನು ಹೋಗಿ ನೋಡಿದರೆ ಆಯಿತು, ಆಯಿತು, ಚುಸ್ತಾಂ, ಚುಸ್ತಾಂ ಎಂದು ಹೇಳುತ್ತಾರೆ. ಸಾಯಂಕಾಲ ಒಂದೆರಡು ಪೆಗ್ ವಿಸ್ಕಿ ಹಾಕಿಕೊಂಡು ನಮ್ಮನ್ನೆಲ್ಲಾ ಬಯ್ಕೊಂಡು, ನಮ್ಮನ್ನು ನಿಮ್ಮನ್ನೆಲ್ಲಾ ಬಯ್ಕೊಂಡು, ಏ ಅವನು ಬಂದ, ನಾನು ಹೀಗೆ ಅವನಗೆ ಹೇಳಿದ್ದೇನೆ. ಅವನು ಬಂದಾಗ ಆರೀತಿ ಹೇಳಿದ್ದನೆ. ಈ ಪ್ರೆಸ್‌ನವನು ಬಂದ ಅವನಿಗೆ ಹೀಗೆ ಹೇಳಿದ್ದನೆ. ಇವರಿವರಲ್ಲಿಯೇ ಒಂದು ರೀತಿ ಪೈಪೋಟಿ, ಐ.ಎ.ಎಸ್.ನವರನ್ನು ಕಂಡರೆ ಐ.ಪಿ.ಎಸ್.ನವನಗೆ ಆಗೋಲ್ಲ. ಐ.ಪಿ.ಎಸ್. ನವರನ್ನು ಕಂಡರೆ ಐ.ಎ.ಎಸ್.ನವನಿಗೆ ಆಗೋಲ್ಲ. ಇವರು ಅವರ ಮೇಲೆ story plant ಮಾಡುವುದು. ಅವರ ಮೇಲೆ ಇವರು story plant ಮಾಡುವುದು ಇದೇ ನಡೆದಿದೆ. ಮಾನ್ಯ ಅಧ್ಯಕ್ಷರೆ, the entire State Secretariat is divided into 3-4 groups. ಒಬ್ಬ pro Chief Secretary, ಒಬ್ಬ anti Chief Secretary, ಒಬ್ಬ anti Development Commissioner. ಹೀಗೆ ಇವರದೇ ಮೂರ್ನಾಲ್ಕು ಗ್ರೂಪ್ ಮಾಡಿಕೊಂಡು ಯಾರ್ಯಾರದ್ದೋ ನಡೆಯುತ್ತದೋ ಆ ತರಹ ನಡೆಸಿಕೊಂಡು ಹೋಗುತ್ತಿದ್ದಾರೆ. ಅದಕ್ಕೆ why I am stressing this is, ಇದರ ಬಗ್ಗೆ ಸಿ.ಬಿ.ಐ. ಎನ್‌ಕ್ವೈರಿಯೇ ಆಗಬೇಕು. 9ನೇ ಸೆಪ್ಟೆಂಬರ್ 2003 ರಿಂದ ಶುರುವಾಗಿ ಇದುವರೆಗೆ ಬಂದಿದೆಯಲ್ಲಾ, ಈ ಅವಧಿಯಲ್ಲಿ ಯಾವ ಯಾವ ಅಧಿಕಾರಿಗಳು ಇದ್ದರು, ಯಾರು ಯಾರು ರಾಜಕಾರಣಿಗಳು ಇದ್ದಾರೆ, ಯಾರು ಯಾರು ಇದರಲ್ಲಿ ಇದ್ದಾರೆ, ಏಕೆ ಕೆಲಸ ವಾಗಲಿಲ್ಲ? ನೋಟಿಫಿಕೇಶನ್ ಯಾವಾಗ ಮಾಡಿದರು? ಶಿವಕುಮಾರ್‌ರವರು ಹೇಳಿದ ಹಾಗೆ ತೋರಿಸಿದರಲ್ಲಾ ಈ ಏರಿಯಾಗಳು low lying areas, ಅಲ್ಲಿ ನಾವು ಡೆಬ್ರಿ ಹಾಕಿದ್ದೇವಂತ. ಅದರ ಬಗ್ಗೆ ತನಿಖೆಯಾಗಬೇಕು. ಈ ಪ್ರೆಸ್‌ನವರಿಗೇನೋ 2 ಪರ್ಸೆಂಟ್ ಹೋಗಿದೆಯೆಂದು ಹೇಳಿದ್ದಾರೆ. ಯಾವ ಯಾವ ಪ್ರೆಸ್‌ನವರಿಗೆ ಎಷ್ಟು ಪರ್ಸೆಂಟ್ ಅಮೌಂಟ್ ಹೋಗಿದೆ? ಗೌರ್ನಮೆಂಟ್ ಆಫ್ ಇಂಡಿಯಾಗೆ 5 ಪರ್ಸೆಂಟ್, ಡಿಸ್ಟ್ರಿಕ್ಸ್ ಇನ್‌ಚಾರ್ಜ್ ಮಿನಿಸ್ಟರ್ ಅಶೋಕ್‌ರವರೇನಿದ್ದಾರೆ ಅವರಿಗೆ 5 ಪರ್ಸೆಂಟ್ ಎಂದು ಹೇಳುತ್ತಾರೆ. ಇವೆಲ್ಲಾ ಏನು ಮಾನ್ಯ ಸಭಾಧ್ಯಕ್ಷರೆ, ದಯವಿಟ್ಟು ನಾನು ಮನವಿ ಮಾಡಿಕೊಳ್ಳುತ್ತೇನೆ, ತಾವು ಸರ್ಕಾರಕ್ಕೆ ಆದೇಶ ಮಾಡಬೇಕು. ಇದರ ಬಗ್ಗೆ ಸಿ.ಬಿ.ಐ ತನಿಖೆಯಾಗಬೇಕೆಂದು ನಾನು ಮನವಿ ಮಾಡುತ್ತೇನೆ.

ಶ್ರೀ ದಿನೇಶ್ ಗುಂಡೂರಾವ್(ಗಾಂಧಿನಗರ):- ಮಾನ್ಯ ಅಧ್ಯಕ್ಷರೆ, ನಾನು ಕೆಲವೊಂದು ಹೊಸ ವಿಚಾರಗಳನ್ನು ಇದರಲ್ಲಿ ಹೇಳಬಯಸುತ್ತೇನೆ. ಈ ವಿಚಾರದಲ್ಲಿ ಆಗಿರತಕ್ಕಂಥ ಅವ್ಯವಹಾರಗಳನ್ನು ನೋಡಿದರೆ ನಮಗೆ ಗಾಬರಿಯಾಗುತ್ತದೆ. ಎರಡನೆಯದಾಗಿ, ಈ ಹೂಳು ಎತ್ತಬೇಕೆಂದು ಕಾರ್ಪೋರೇಷನ್‌ನಲ್ಲಿ ಪ್ರಾಜೆಕ್ಟ್‌ನ್ನು ಕಳೆದ ನಾಲ್ಕು ವರ್ಷದ ಹಿಂದಿನಿಂದ ಹಾಕಿರುವುದು. ತದನಂತರ ಅದಕ್ಕೆ ಕನ್ಸಲ್‌ಟೇಶನ್ ಮಾಡತಕ್ಕಂಥದ್ದರ ಬಗ್ಗೆ ಒಂದು ಯೋಜನೆಯನ್ನು ಹಾಕಿದರು. ಆಮೇಲೆ JNURM ಯೋಜನೆಗೆ ಇದನ್ನು ಸೇರಿಸಿದರು. ಅದಕ್ಕೆ ಸೇರಿಸಿ ಇವತ್ತು ಅಂತಿಮವಾಗಿ ಕಾಂಟ್ರಾಕ್ಟ್ ಕೊಡತಕ್ಕಂಥ ಸಂದರ್ಭದಲ್ಲಿ ಆಗಿರತಕ್ಕಂಥ ಲೋಪದೋಷಗಳನ್ನು ನೋಡಿದಾಗ ಕೆಲವು ಕಡೆ ಸಾವಿರ ಪರ್ಸೆಂಟ್ ಹೆಚ್ಚಾಗಿದೆ ಅಧ್ಯಕ್ಷರೆ. ಒಂದು ಕಡೆ ಹೂಳು ಎತ್ತಬೇಕೆಂದು 50 ರೂಪಾಯಿ ಎಸ್ಟಿಮೇಟೆಡ್ ಕಾಸ್ಟ್. ಕಾಂಟ್ರಾಕ್ಟರ್‌ಗೆ ಕೊಡತಕ್ಕಂಥದ್ದು 77 ರೂಪಾಯಿ. ಅಂತಿಮವಾಗಿ ಅಗ್ರಿಮೆಂಟ್ ಆಗುವುದು 135 ರೂಪಾಯಿಗೆ. ಹೀಗೆ ಮೂರರಷ್ಟು ಜಾಸ್ತಿ ಮಾಡಿರತಕ್ಕಂಥದ್ದು. ಮುಖ್ಯವಾಗಿ ಇದರಲ್ಲಿ ನಾವು ನಮ್ಮ ಕ್ಷೇತ್ರದಲ್ಲಿ ಈ storm water drain remodeling ಬಗ್ಗೆ ಕೇಳಿದಾಗ ಯಾರೂ ಮಾಹಿತಿಯನ್ನು ಕೊಡುತ್ತಿರಲಿಲ್ಲ. ಏನೇ ಕೇಳಿದರೂ ಕೂಡ ಸ್ಟೂಪ್ ಕನ್ಸಲ್‌ಟೆನ್ಸಿ ಎಂದು ಹೇಳುತ್ತಿದ್ದರು. ಅವರೇ ಎಲ್ಲವನ್ನೂ ಮಾಡುತ್ತಿದ್ದಾರೆ. ಅವರೇ ವರದಿಯನ್ನು ಕೊಡುತ್ತಾರೆ ಎಂದು ಹೇಳುತ್ತಿದ್ದರು. ಮತ್ತೆ ಇದನ್ನು ಶುರು ಮಾಡತಕ್ಕಂಥ ಸಂದರ್ಭದಲ್ಲಿ ಒಬ್ಬರೂ ಕೂಡ ಇಂಜಿನಿಯರ್ ಆಗಲಿ, ಅಲ್ಲಿರತಕ್ಕಂಥ ಕಾಂಟ್ರಾಕ್ಟರ್ ಆಗಲಿ, ಯಾರೂ ಕೂಡ ಬಂದು ಸಾರ್ ನಮ್ಮ ಕ್ಷೇತ್ರದಲ್ಲಿ ಈ ಕೆಲಸ ಪ್ರಾರಂಭ ಮಾಡುತ್ತಿದ್ದೇವೆ, ಈ ರೀತಿ ನಮಗೆ ಅಗ್ರಿಮೆಂಟ್ ಆಗಿದೆ, ನಮಗೆ ಕಾಂಟ್ರಾಕ್ಟ್ ಸಿಕ್ಕಿದೆ, ಈ ರೀತಿ ನಾವು ಕೆಲಸ ಮಾಡುತ್ತೇವೆ ಎಂದು ಯಾರು ನಮಗೆ ಬಂದು ಹೇಳಲಿಲ್ಲ. ನಾವೇ ಅವರ ಮೈಮೇಲೆ ಬಿದ್ದು, ಇದರ ಬಗ್ಗೆ ಏನಾಗುತ್ತಿದೆ? ಎಲ್ಲಿ ಏನು ಕೆಲಸವನ್ನು ನೀವು ಮಾಡುತ್ತಿದ್ದೀರಿ? ಎಷ್ಟರ ಮಟ್ಟಿಗೆ ಮಾಡಿದ್ದೀರಿ? ಎಂದು ನಾವೇ ಅವರ ಬಳಿಹೋಗಿ ಕೇಳಿಕೊಂಡ ಮೇಲೆ ಆಗಲೂ ಕೂಡ ಮಾಹಿತಿಯನ್ನು ಯಾರೂ ಕೊಡುತ್ತಿರಲಿಲ್ಲ. ಮೊನ್ನೆ ನನ್ನ ಕ್ಷೇತ್ರದಲ್ಲಿ ಇದರ ಬಗ್ಗೆ ಪೂರ್ತಿ ಮಾಹಿತಿಯನ್ನು ತರಿಸಿದೆ. ಆ ಇಂಜಿನಿಯರ್‌ರವರನ್ನೂ ಕೂಡ ಕರೆಸಿದೆ. ಅವರ ಪ್ರಕಾರ ನನ್ನ ಕ್ಷೇತ್ರದಲ್ಲಿ 19 ಸಾವಿರ ಕ್ಯುಬಿಕ್ ಮೀಟರ್ಸ್ ಹೂಳನ್ನು ತೆಗೆದಿದ್ದೇವೆ ಎಂದು ಹೇಳಿದರು. ನನ್ನ ಕ್ಷೇತ್ರದಲ್ಲಿ ಆಗಿರುವ ಕೆಲಸವನ್ನು ನಾನು ನೋಡಿದಂತೆ 30 ಪರ್ಸೆಂಟ್ ಕೆಲಸ ಕೂಡ ಆಗಿಲ್ಲ. ಯಾವ ಹೂಳನ್ನೂ ಕೂಡ ಅಲ್ಲಿ ಎತ್ತಿಲ್ಲ. ಆದರೆ ಅಲ್ಲಿ

records ನೋಡಿದರೆ ಅವರು ಅಲ್ಲಿ 90% ಹೂಳು ತೆಗೆದಿದ್ದೇವೆಂದು ವರದಿಯಲ್ಲಿ ಕೊಟ್ಟಿದ್ದಾರೆ. ಈ ರೀತಿ ಅವ್ಯವಹಾರ ಕಣ್ಣುಮುಂದೆ ಆಗುತ್ತಿದೆ. ಒಂದು ಕಡೆ ಆ ರೀತಿಯಾದರೆ, ಇನ್ನೊಂದು ಕಡೆ ಶಾಸಕರಿರಬಹುದು, ಮಂತ್ರಿಗಳಿರಬಹುದು ಯಾರ ಗಮನಕ್ಕೆ ಬಂದಿಲ್ಲ. ಮಾನ್ಯ ಅಶೋಕ್‌ರವರು ಉಸ್ತುವಾರಿ ಸಚಿವರು, ಅವರೇ ಇದರ ಬಗ್ಗೆ ತನಿಖೆಯಾಗಬೇಕೆಂದು ಹೇಳಿದ್ದಾರೆ. ಅವರಿಗೂ ಕೂಡ ಗೊತ್ತಾಗಿದೆ. ಆದರೆ ನಾನು ಇಷ್ಟು ಸ್ಪಷ್ಟವಾಗಿ ವಿಚಾರವನ್ನು ಹೇಳುತ್ತಿದ್ದೇನೆ, ಆ ವಿಚಾರದಲ್ಲಿ ಸಾಕಷ್ಟು ಮಾಹಿತಿ ಬಂದಿದೆ. ಇದರ ಬಗ್ಗೆ ಪ್ರತಿಯೊಂದರಲ್ಲಿ ಕೂಡ ಸರಿಯಾದ ರೀತಿಯಲ್ಲಿ ತನಿಖೆಯಾಗಬೇಕು. ಅವರ ಯೋಜನೆಯಲ್ಲಿ ಇರುವಂತಹ ವಿಷಯಗಳು ಏನು? ಗೋಡೆಯನ್ನು ನಿರ್ಮಾಣ ಮಾಡಬೇಕು. ತಳಪಾಯಕ್ಕೆ ಕಾಂಕ್ರೀಟ್ ಹಾಕಬೇಕು. ಎಲ್ಲಿ ತಾಳಪಾಯವನ್ನು ಕಾಂಕ್ರೀಟ್‌ನಲ್ಲಿ ಮಾಡುತ್ತಿದ್ದಾರೆ? ಎಲ್ಲಿಯೂ ಕೂಡ ಮಾಡುತ್ತಿಲ್ಲ. ಪ್ರತಿಯೊಂದು ಗೋಡೆಯನ್ನು ಕೂಡ RCC ಗೋಡೆ ನಿರ್ಮಾಣ ಮಾಡಬೇಕು ಎಂದು ಹಾಕಿಕೊಂಡಿದ್ದಾರೆ. ಅದೂ ಕೂಡ ಮಾಡುತ್ತಿಲ್ಲ. ಹಳೇ ಕಲ್ಲನ್ನೇ ಇಟ್ಟುಕೊಂಡು ಅದಕ್ಕೆ painting ಮಾಡಿ ಇವತ್ತು ಅಲ್ಲಿ ಕೆಲಸ ಮುಗಿಸುತ್ತಿದ್ದಾರೆ. ಇದರ ಬಗ್ಗೆ ಯಾವ ಶಾಸಕರಿಗೂ ಕೂಡ ಮಾಹಿತಿ ಇಲ್ಲ. ನೇರವಾಗಿ ಅಧಿಕಾರಿಗಳು, stoop consultant, contractorಗಳಿಂದ ಮುಗಿದು ಹೋಗಿದೆ ಹೊರತು ಯಾರಿಗೂ ಕೂಡ ಗೊತ್ತಿಲ್ಲ. ಇಷ್ಟು ದೊಡ್ಡ ಪ್ರಮಾಣದಲ್ಲಿ ಮಾಡಿರುವುದು ನೋಡಿದರೆ ಆಶ್ಚರ್ಯವಾಗುತ್ತಿದೆ. ಸರ್ಕಾರ ಹೇಗೆ ಅದಕ್ಕೆ ಅನುಮೋದನೆ ಕೊಟ್ಟಿತು? ಇಂತಹ ದೊಡ್ಡ ಮೊತ್ತದ contract ಆಗಬೇಕು ಎಂದರೆ ಮಹಾನಗರ ಪಾಲಿಕೆ ಏಕಾಏಕಿ ತೀರ್ಮಾನ ಮಾಡುವುದಕ್ಕೆ ಸಾಧ್ಯವಿಲ್ಲ. ಅದು ಮಹಾನಗರ ಪಾಲಿಕೆಯಿಂದ ಸರ್ಕಾರಕ್ಕೆ ಬರಬೇಕು. ಸರ್ಕಾರ ಅದಕ್ಕೆ ಅನುಮೋದನೆ ಕೊಡಬೇಕು. ಸರ್ಕಾರ ಇದಕ್ಕೆ ಹೇಗೆ ಅನುಮೋದನೆ ಕೊಟ್ಟಿದೆ ಎಂದು ಒಂದು ಪ್ರಶ್ನೆ ಕೂಡ ಇದೆ. ಇದು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಬಂದಿದೆಯಾ ಇಲ್ಲವೇ? ಅವರು ಇದಕ್ಕೆ permission ಕೊಟ್ಟಿದ್ದಾರಾ ಇಲ್ಲವೇ? ಈ ಒಂದು ಪ್ರಶ್ನೆ ಕೂಡ ಎದು ಕಾಣುತ್ತಿದೆ. ಇದು ಕೇವಲ 5 ಅಥವಾ 10 ಕೋಟಿ ರೂಪಾಯಿಯ ಪ್ರಾಜೆಕ್ಟ್ ಅಲ್ಲ. ಇದು ಹೆಚ್ಚು ಕಡಿಮೆ 500 ಕೋಟಿ ರೂಪಾಯಿ ಪ್ರಾಜೆಕ್ಟ್. ಇದರಲ್ಲಿ ಆಗಿರುವಂತಹ ಅವ್ಯವಹಾರಗಳನ್ನು ಆಲೋಚನೆ ಮಾಡಿದರೆ ಕನಿಷ್ಟ 50% ಗುಳುಂ ಆಗಿದೆ. ಎಲ್ಲೂ ಕೂಡ ಕೆಲಸವಾಗಿರುವುದು ಕಾಣುತ್ತಿಲ್ಲ. ಅವರು ಈಗಾಗಲೇ 14,000,52 cubic meter ತೆಗೆದಿದ್ದೇವೆಂದು ಹೇಳಿದ್ದಾರೆ. ಇದು ನೂರಕ್ಕೆ ನೂರು ಸುಳ್ಳು. ಇಷ್ಟೊಂದು ತೆಗೆದು ಎಲ್ಲಿ ಹಾಕುತ್ತಾರೆ? ಆ dumping

ಹಾಕಿರುವುದು ಯಾವುದೆಂದು ನಮಗೆ ತೋರಿಸಿ. ನಾನು ಹೇಳುತ್ತೇನೆ, ಒಂದು ಸದನ ಸಮಿತಿ ಮಾಡಿ , ಅದರ ಬಗ್ಗೆ ಪೂರ್ತಿ ಪರಿಶೀಲನೆ ಮಾಡೋಣ. ಅವರು ಎಲ್ಲೆಲ್ಲಿ dump ಮಾಡಿದ್ದಾರೆ? ಎಲ್ಲೆಲ್ಲಿ ಕೆಲಸ ಮಾಡಿದ್ದಾರೆ? ಎಲ್ಲೆಲ್ಲಿ ಆಗಿಲ್ಲ? ಇವರ ಮಾಹಿತಿ ಸರಿಯಾಗಿದೆಯಾ? ಕೇವಲ ಅಧಿಕಾರಿಗಳು ಹೇಳಿದರೆ ವಿಷಯ ಆಚೆ ಬರುವುದಿಲ್ಲ. ಇದಕ್ಕೆ ಸದನ ಸಮಿತಿ ಮಾಡಿ. CBI enquiry ಯಾದರೂ ಮಾಡಿ. ಇದರ ವಿಚಾರದಲ್ಲಿ enquiry ಮಾಡದೇ ಹೋದರೆ ಮಹಾನಗರ ಪಾಲಿಕೆಗೆ ಕೇಂದ್ರ ಸರ್ಕಾರದಿಂದ ಬರುವಂತಹ ದುಡ್ಡು ಕೂಡ ಹಾಳಾಗುತ್ತದೆ. ನೀವು ಕೊಡುವಂತಹ ದುಡ್ಡು ಕೂಡ ಹಾಳಾಗುತ್ತದೆ. ಮಹಾನಗರ ಪಾಲಿಕೆ ಸಾಲ ತೆಗೆದುಕೊಂಡು ಕೆಲಸ ಮಾಡಬೇಕಾಗಿದೆ. ಇಷ್ಟೆಲ್ಲಾ ಇರಬೇಕಾದರೆ, ಇದು ಬಹಳ ಗಂಭೀರವಾದ ವಿಚಾರ. ಸರ್ಕಾರ ಇದರ ಬಗ್ಗೆ ಗಂಭೀರವಾಗಿ ತೆಗೆದುಕೊಂಡು ಇದರ ಬಗ್ಗೆ ಒಂದು ನಿರ್ಣಯ ಮಾಡಿ ತನಿಖೆಯನ್ನು ಮಾಡಬೇಕೆಂದು ನಾನು ಒತ್ತಾಯವನ್ನು ಮಾಡುತ್ತಿದ್ದೇನೆ.

ಶ್ರೀ ರಾಮಲಿಂಗಾರೆಡ್ಡಿ: ಮಾನ್ಯ ಅಧ್ಯಕ್ಷರೆ, ಕೋರಮಂಗಲ ಮತ್ತು ಹೆಬ್ಬಾಳ್ ಇನ್ನೂ ಕೆಲವು ಕಡೆ valley 252 ಕಿ.ಮೀ. ರಿಪೇರಿ ಮಾಡಬೇಕು ಎಂದು ನಾವೂ ಕೂಡ ಇದರ ಬಗ್ಗೆ corporation ನಲ್ಲಿ ಬೇಗ ಬೇಗ ಮಾಡಿ, ಈ ಕೆಲಸಗಳು ಆಗಬೇಕು, ಇದು ತೀರಾ ಅವಶ್ಯಕತೆ ಇದೆ ಎಂದು ಹೇಳುತ್ತಿದ್ದೆವು. ನಾವೂ ಕೂಡ Mayor ಗೆ ಹಾಗೂ corporators ಗೆ ಹೇಳಿ ಬೇಗ ಮಾಡಿ, ಬೆಂಗಳೂರಿಗೆ ಒಳ್ಳೆಯದು ಆಗುತ್ತದೆ ಎಂದು Corporation ನಲ್ಲಿ ಇದನ್ನು ಬೇಗ approval ಮಾಡಿಸಿದೆವು. ನಮ್ಮ ಉದ್ದೇಶ ಏನತ್ತೆಂದರೆ ಇದು valley ಚೆನ್ನಾಗಿ ಆಗುತ್ತದೆ. ಪ್ರತಿವರ್ಷ ಮಳೆಗಾಲ ಬಂದಾಗ ಎಲ್ಲಾ ಮನೆಗಳಲ್ಲಿ ನೀರು ನುಗ್ಗುತ್ತಿತ್ತು. ನನ್ನ ಕ್ಷೇತ್ರವಾದ ತಾವರೆಕೆರೆಯ ಸುತ್ತಮುತ್ತಲೂ ಪ್ರದೇಶದಲ್ಲಿ ಯಾವಾಗಲೂ ನೀರು ತುಂಬಿಕೊಳ್ಳುತ್ತಿತ್ತು. valley ಯಿಂದ ಒಂದು ಫರ್ಲಾಂಗ್ ಒಳಗಡೆ ಮನೆಗಳಿಗೆ ನೀರು ಬರುತ್ತಿತ್ತು. ಈ ರೀತಿ ತೊಂದರೆಯಾಗುತ್ತಿದ್ದುದ್ದರಿಂದ, ಈ ಕೆಲಸ ಬೇಗವಾಗುತ್ತದೆ, 496 ಕೋಟಿ ರೂಪಾಯಿ ಹಣ ಬಿಡುಗಡೆಯಾಗಿದೆ, ಎಲ್ಲಾ ಕೆಲಸವಾಗುತ್ತದೆ ಎಂದು ನಾವೂ ಕೂಡ ಖುಷಿಯಾಗಿದ್ದೆವು. ಆದರೆ ದುರಾದೃಷ್ಟವಶಾತ್ ಇಲ್ಲಿ ಏನಾಗಿದೆ ಎಂದರೆ ಏನೇನು ಕೆಲಸಗಳನ್ನು ಮಾಡುತ್ತೇವೆಂದು tender ನಲ್ಲಿ ಹಾಕಿದ್ದರು. ಆ ಪ್ರಕಾರ ಮೋರಿಯಿಂದ ಹೂಳನ್ನು ತೆಗೆಯುವುದು ಎಂದು ಇತ್ತು. ಅದನ್ನು ಮಾತ್ರ ತೆಗೆದಿದ್ದಾರೆ. ಆದರೆ ಅದನ್ನು ಯಾವ ರೀತಿ ತೆಗೆದಿದ್ದಾರೆಂಧು ಸನ್ಮಾನ್ಯ ಸದಸ್ಯರು ಎಲ್ಲಾ ಹೇಳಿದ್ದಾರೆ. ನಾನು ಇದರ ಬಗ್ಗೆ ಹೆಚ್ಚಿಗೆ ಹೇಳುವುದಕ್ಕಾಗುವುದಿಲ್ಲ. ಇನ್ನೊಂದು ಕೆಲಸ

ಮೋರಿಯನ್ನು ಅಗಲಗೊಳಿಸುವುದು ಎಂದಿದೆ. ಆದರೆ ಎಲ್ಲಿ ಯಾವ ಮೋರಿಯನ್ನು ಅಗಲಗೊಳಿಸಿದ್ದಾರೆಂದು ನನಗಂತೂ ಗೊತ್ತಿಲ್ಲ. ನನ್ನ ಕ್ಷೇತ್ರದಲ್ಲಿರುವಂತಹ ಒಂದು ಮೋರಿಯಲ್ಲಿ ಒಂದು ಅಂಗುಲ ಕೂಡ ಅಗಲ ಮಾಡಲಿಲ್ಲ. ಅದರಂತೆ RCC ಮತ್ತು ಕಲ್ಲು ಕಟ್ಟಡಗಳ ಮೋರಿಯ ಗೋಡೆಗಳನ್ನು ನಿರ್ಮಾಣ ಮಾಡುವುದು. ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರಕ್ಕೆ vally double road ನಿಂದ ಪ್ರಾರಂಭವಾಗುತ್ತದೆ. ಎಲ್ಲೂ ಕೂಡ RCC ಗೋಡೆ ಹಾಕಲಿಲ್ಲ. ಅದು ಹೇಗಿದೆಯೋ ಹಾಗೆ ಇದೆ, ಮಣ್ಣು ತೆಗೆದಿರುವುದು ಈಗಲೂ ಬಿದ್ದಿದೆ. ಪೋತ್ಲಪ್ಪ ಗಾರ್ಡನ್ ಹತ್ತಿರ , ಮೊನ್ನೆ ನಾನು ನಮ್ಮ engineer ಗಳಿಗೆ phone ಮಾಡಿ ಆ ಮಣ್ಣನಾದರೂ ತೆಗೆಸಿರಿ, ಕೊಳೆತು ನಾರುತ್ತಿದೆ, ಪಕ್ಕದಲ್ಲಿ ಮನೆಗಳಿವೆ, ಸೊಳ್ಳೆಗಳು ಜಾಸ್ತಿಯಾಗುತ್ತದೆ ಎಂದು ಹೇಳಿದೆ. ಅದೇ ರೀತಿ ಮೋರಿಯ ಗೋಡೆ ಮತ್ತು ಕಲ್ಲು ವಾಟಗಳಿಂದ ಕೆಲಸ ಮಾಡುವುದು. ನಾಲೆಯ ಕೆಳಭಾಗದಲ್ಲಿ ಸಂರಕ್ಷಣೆಗೆ ಕಾಂಕ್ರೀಟ್ ತಳ ಹಾಕುವುದು. ಆದರೆ ಎಲ್ಲೂ ಹಾಕಿಲ್ಲ. ಒಳಚರಂಡಿ ಕೊಳವೆಗಳನ್ನು ಸ್ಥಳಾಂತರಿಸುವುದು. ಮುಖ್ಯನಾಲೆಗೆ ಬಂದು ಸೇರುವ ಇತರೆ ಕಾಲುವೆಗಳನ್ನು ಅಭಿವೃದ್ಧಿಪಡಿಸುವುದು. ನನ್ನ ಕ್ಷೇತ್ರದಲ್ಲಿ ಬನ್ನಿ ತೋರಿಸುತ್ತೇನೆ. ತಾವರೆಕೆರೆ ಪಕ್ಕದಲ್ಲಿರಬಹುದು, ಮಡಿವಾಳದಲ್ಲಿರುವ ಮುಖ್ಯ ಕಾಲುವೆಗಳು ಎಲ್ಲೂ ಹೂಳು ತೆಗೆದಿಲ್ಲ. ನಾನು ಒಂದು ತಿಂಗಳು ಮುಂಚೆ ನಮ್ಮ ಅಧಿಕಾರಿಗಳನ್ನು ಕರೆದುಕೊಂಡು ಹೋಗಿ ಈ ರೀತಿ ಸಮಸ್ಯೆಯಾಗುತ್ತಿದೆ, ಇದನ್ನೆಲ್ಲಾ ತೆಗೆಯಿರಿ ಎಂದು ತೋರಿಸಿದೆ. ಅವರು contract ನವರನ್ನು cancel ಮಾಡುತ್ತಿದ್ದೇವೆ, ಅದನ್ನು ತೆಗೆಸುತ್ತೇವೆಂಧು ಹೇಳಿದರು. ಆದರೆ ಇದುವರೆಗೂ ಕೂಡ ಅಲ್ಲಿ ಕೆಲಸವಾಗಿಲ್ಲ. ನಮ್ಮ ಸಮಸ್ಯೆಗೆ ಪರಿಹಾರವಂತೂ ಕಂಡಿಲ್ಲ. ಈಗಾಗಲೇ 138 ಕೋಟಿ ರೂಪಾಯಿ ಹಣವನ್ನು ಬಿಲ್ ಮಾಡಿಕೊಂಡು ಹೋಗಿದ್ದಾರೆ. ಸರ್ಕಾರ ಈಗಲಾದರೂ ಕೂಡ ಎಚ್ಚೆತ್ತುಕೊಳ್ಳಬೇಕು. ಇದರ tender ನ್ನೆಲ್ಲಾ cancel ಮಾಡಬೇಕು. ನಾವು 15 package ಏನು ಕೊಟ್ಟಿದ್ದೇವೆ, ಅದರ ಕೆಲಸವನ್ನು ಇವರು ಖಂಡಿತ ಮಾಡುವುದಿಲ್ಲ. ಹೂಳು ತೆಗೆಯುವುದು ಬಿಟ್ಟರೆ ಇವರ ಕೈಯಲ್ಲಿ ಯಾವ ಕೆಲಸ ಕೂಡ ಮಾಡುವುದಕ್ಕೆ ಆಗುವುದಿಲ್ಲ. ಆದುದರಿಂದ packages ಎಲ್ಲಾ cancel ಮಾಡಬೇಕೆಂದು ಹೇಳುತ್ತಾ, ಇದರಲ್ಲಿ lower level officer, bogus bill ಮಾಡುವುದರಲ್ಲಿ ಬಹಳ involve ಆಗಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಇದರಲ್ಲಿ higher officer involve ಆಗಿಲ್ಲವೆಂದು ಅನಿಸುತ್ತದೆ. ನೂರಕ್ಕೆ ನೂರು ಭಾಗ Engineer and Consultant ಈ ಹಗರಣದಲ್ಲಿ ಭಾಗಿಗಳಾಗಿದ್ದಾರೆ.

ಅಧ್ಯಕ್ಷರು: ನಿಮಗೆ ಎಲ್ಲಾ ಚೆನ್ನಾಗಿ ಗೊತ್ತಲ್ಲ. ನೀವು corporator ಆಗಿದ್ದಿರಿ, ಮಂತ್ರಿಯಾಗಿದ್ದಿರಿ, ಈಗ MLA ಆಗಿದ್ದಿರಿ. ನಿಮ್ಮ Corporation ಬಗ್ಗೆ ಇಂಚಿಂಚು ಗೊತ್ತಿರಬೇಕಲ್ಲ. ಸತ್ಯವನ್ನು ಹೇಳಿಬಿಡಿ.

ಶ್ರೀ ರಾಮಲಿಂಗರೆಡ್ಡಿ: ಹೌದು.

ಶ್ರೀ ಡಿ.ಕೆ. ಶಿವಕುಮಾರ್: ಅವರು ಸತ್ಯ ನುಡಿಯುವುದಕ್ಕೆ ನಿಂತಿದ್ದಾರೆ. ಅವರು ಹೇಳುತ್ತಿರುವುದೆಲ್ಲಾ ಸತ್ಯ.

ಅಧ್ಯಕ್ಷರು: ಅಲ್ಲ, ಸತ್ಯ. ಹೇಳುತ್ತಿರುವುದೇ ಬೇರೆ, ಒಳಗಡೆ ಇರುವುದೇ ಬೇರೆ. ಸತ್ಯ ಎಂದರೆ ಶಿವಕುಮಾರ್ ನಿಮಗೆ ಅರ್ಥವಾಗುವುದಿಲ್ಲ. ಅವರಿಗೆ ಅರ್ಥವಾಗಿದೆ, ನೀವು ಕುಳಿತುಕೊಳ್ಳಿ, ಅವರು ಹೇಳುತ್ತಾರೆ.

ಶ್ರೀ ಡಿ.ಕೆ. ಶಿವಕುಮಾರ್: ನನಗೆ ಅರ್ಥವಾಯಿತು, ಅವರು ಏನು ಹೇಳಿದರು ಎಂದರೆ ಅಕ್ಬರ್‌ಗೂ, ಬೀರಬಲ್‌ಗೂ ಸತ್ಯಕ್ಕೂ, ಸುಳ್ಳಿಗೂ ಎಷ್ಟು ವ್ಯತ್ಯಾಸ ಎಂದು ಒಂದು ಸಂಭಾಷಣೆ ನಡೆಯಿತು ಅಂತೆ. ಅವನು ಸ್ವಾಮಿ ನಾಲ್ಕೇ ನಾಲ್ಕು ಬೆರಳು ಎಂದು ಹೇಳಿದನಂತೆ. ಹೇಗೆ ಎಂದು ಕೇಳಿದಾಗ, ಈ ಕಿವಿಯಲ್ಲಿ ಕೇಳುವುದೆಲ್ಲಾ ಸುಳ್ಳು. ಕಣ್ಣಿನಲ್ಲಿ ನೋಡುವುದೆಲ್ಲಾ ಸತ್ಯ. ಸತ್ಯಕ್ಕೆ ನಾಲ್ಕೇ ಬೆರಳು ಎಂದು. ನೀವು ಇಲ್ಲಿ ಏನನ್ನೂ ಕಿವಿಯಲ್ಲಿ ಕೇಳುವ ಪ್ರಶ್ನೆ ಇಲ್ಲ. ನಿಮ್ಮ ಅಧ್ಯಕ್ಷತೆಯಲ್ಲಿ ಸದನ ಸಮಿತಿ ಮಾಡಿ. CBI ಗೆ ಹೋಗುವುದು ಹೋಗಿಯೇ ಹೋಗುತ್ತದೆ. ಸರ್ಕಾರ ವಹಿಸಲಿ, ವಹಿಸದಿರಲಿ, ನಾವಂತೂ Prime Minister ಗೆ, Urban Development Minister ಹತ್ತಿರ ಹೋಗಿ ಕೊಡುವವರೆ. CBI ಆಗಿಯೇ ಆಗುತ್ತದೆ. Central Government ದುಡ್ಡು ಇದೆ. ಅದು ಬೇರೆ ವಿಚಾರ.

ಅಧ್ಯಕ್ಷರು: ಅವರು corporation ಬಗ್ಗೆ ಮಾತನಾಡಲಿ, ನೀವು ಕುಳಿತುಕೊಳ್ಳಿ.

ಶ್ರೀ ಡಿ.ಕೆ.ಶಿವಕುಮಾರ್: ತಮ್ಮ ಅಧ್ಯಕ್ಷತೆಯಲ್ಲಿ ಎಲ್ಲಾ ನೋಡೋಣವಂತೆ.

ಅಧ್ಯಕ್ಷರು: ನೀವು ಎಲ್ಲಾ ಚೆನ್ನಾಗಿ ಹೇಳಿದ್ದೀರಿ, ಅವರು ಮಾತನಾಡಲಿ.

ಶ್ರೀ ರಾಮಲಿಂಗಾರೆಡ್ಡಿ: ಯಾರು MB entry ಮಾಡಿದ್ದಾರೆ, consultant ಯಾರಿದ್ದಾರೆ, ಇವರ ಮೇಲೆ action ತೆಗೆದುಕೊಳ್ಳಬೇಕೆಂದು ಹೇಳಿ, ಹಿರಿಯ ಅಧಿಕಾರಿಗಳ ಗಮನಕ್ಕೆ ಬರದೇ ಇದೆಲ್ಲ ಆಗುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಈಗ ಮಾನ್ಯ ಶಿವಕುಮಾರ್ ಆಹ್ವಾನ ಕೊಟ್ಟಿದ್ದಾರೆ. ಜೊತೆಯಲ್ಲಿ ಹೋಗಿ ನೋಡೋಣ. ಎಲ್ಲಾ ಟೀಂ ಮಾಡಿಕೊಂಡು ಕರೆದುಕೊಂಡು ಹೋಗಿ ಸಾರ್.

ಅಧ್ಯಕ್ಷರು: consider ಮಾಡೋಣ. ಅವರು ಮಾತನಾಡಲಿ, ಏನು ಹೇಳುತ್ತಾರೆ ನೋಡೋಣ. ಆಮೇಲೆ ಮಾನ್ಯ ಅಶೋಕ್‌ರವರು ಏನು ಹೇಳುತ್ತಾರೆ, ಸರ್ಕಾರ ಏನು ಹೇಳುತ್ತದೆ ನೋಡೋಣ.

ಶ್ರೀ.ಡಿ.ಕೆ.ಶಿವಕುಮಾರ್ : ಅಶೋಕ್‌ರವರು ಏನು ಹೇಳಿದ್ದಾರೆಂದರೆ ಇದರಲ್ಲಿ ಅನ್ಯಾಯವಾಗಿರುವುದು ನಿಜ. ಇದು ತನಿಖೆಯಾಗಿ, ಶಿಕ್ಷೆಯಾಗಬೇಕು ಎಂದು ಮೂರನೇ ತಾರೀಖಿನ ಪೇಪರ್‌ನಲ್ಲಿ ಹೇಳಿಬಿಟ್ಟಿದ್ದಾರೆ. It is already on record.

ಅಧ್ಯಕ್ಷರು: ಈಗ ಈ House ನಲ್ಲಿ ಏನು ಹೇಳುತ್ತಾರೆ ನೋಡೋಣ.

ಶ್ರೀ ಆರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೆ, ನನ್ನ ವಿನಂತಿ ಏನೆಂದರೆ ಈ ಎಲ್ಲಾ ಭಾಷಣ ಮಾಡಿದವರು, ಅದನ್ನು ಪರಾಮರ್ಶೆ ಮಾಡಿ ಅದಕ್ಕೆ ಏನು demands ಮಾಡಿದ್ದಾರೆ, ಅದರ ಬಗ್ಗೆ ನನ್ನದೇನೂ ಇಲ್ಲ. ನನ್ನ ಅನುಮಾನ ಏನೆಂದರೆ, ಎಲ್ಲರೂ ಕೂಡ ಇದನ್ನು CBI ಗೆ ವಹಿಸಿ ಎಂದು ಒಂದೇ ಸಮನೆ ಜಪ ಮಾಡುತ್ತಿದ್ದಾರೆ. CBI ಎಂದರೆ ಏನು? ಅವರು ಇಲ್ಲಿ ಕುಳಿತುಕೊಂಡಾಗ, ಇಲ್ಲ, COD ಗೆ ವಹಿಸಿ ಎಂದು ಹೇಳುತ್ತಿದ್ದರು. ಆ ಕಡೆಗೆ ಹೋದ ಕೂಡಲೇ CBI ಗೆ ವಹಿಸಿ ಎಂದು ಹೇಳುತ್ತಿದ್ದಾರೆ. ಇದು ಏನು? CBI ಎಂದರೆ ಅಲ್ಲಿ ದೇವರುಗಳು ಇದ್ದಾರಾ? ಅಲ್ಲಿ ಯಾವ ಸೃಷ್ಟಿಯ ಜನ ಇದ್ದಾರೆ? ನಮ್ಮಲ್ಲಿ ಪೊಲೀಸ್ ಅಧಿಕಾರಿಗಳಾಗಿ ನಿವೃತ್ತಿಯ ಅಂಚಿಗೆ ಬಂದಿರುವವರೆಲ್ಲ ಅಲ್ಲಿದ್ದಾರೆ.

ಅಧ್ಯಕ್ಷರು: ನಂಬಿಕೆ.

ಶ್ರೀ ಡಿ.ಕೆ. ಶಿವಕುಮಾರ್: CBI enquiry ಆದರೆ ನಮಗೆ ಹೆದರಿಕೆ ಏಕೆ?

ಶ್ರೀ ಆರಗ ಜ್ಞಾನೇಂದ್ರ: ನಮ್ಮ ರಾಜ್ಯದ ಎಲ್ಲಾ enquiry officer ಅಪ್ರಮಾಣಿಕರೆ? ಅದನ್ನು ಹೇಳಲಿ. ಏಕೆಂದರೆ ಅವರು ಬಹಳ ವರ್ಷ ರಾಜ್ಯವನ್ನು ಆಳಿದವರು ಅವರ ಕೈಕೆಳಗೆ ಕೆಲಸ ಮಾಡುವಂತಹ ಅನೇಕ ಹಿರಿಯ ಪೊಲೀಸ್ ಅಧಿಕಾರಿಗಳು ಇದ್ದಾರೆ. ಅವರ ಬಗ್ಗೆ ಇವರ ಸ್ಪಷ್ಟನೆ ಏನು? ಅವರೆಲ್ಲಾ ಅಪ್ರಮಾಣಿಕರೆ? ಇದನ್ನು enquiry ಮಾಡುವುದಕ್ಕೆ ಹಾಕಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನಮ್ಮ ಅಭಿಪ್ರಾಯ ಅವರ ಅಭಿಪ್ರಾಯ ಒಂದೇ ಎಂದು ಅಲ್ಲ. ನಿಮ್ಮ ಮಂತ್ರಿಗಳೇ ಅಲ್ಲಿ ಅನ್ಯಾಯವಾಗಿದೆ, ತಪ್ಪು ಮಾಡಿದವರಿಗೆ ಶಿಕ್ಷೆ ಕೊಡಬೇಕೆಂದು ಹೇಳಿದ್ದಾರೆ. ಅವರು CBI ಅನ್ನು ಕೇಳಿದ್ದಾರೆ, House Committee ಯನ್ನು ಕೇಳಿದ್ದಾರೆ. ನೀವು ಯಾವುದಕ್ಕೆ ಒಪ್ಪುತ್ತೀರೋ ಒಪ್ಪಿ. ನೀವು House Committee ಗೆ ಹೋಗುತ್ತೀರೊ, CBI ಗೆ ಹೋಗುತ್ತೀರೊ, ಅದನ್ನು ಬಿಟ್ಟು ಎಲ್ಲಾ ಮಾತಿಗೆ, ನಮ್ಮಲ್ಲಿ ಹೇಳುತ್ತಾರೆ, ತಲೆ ನೋವಿಗೆ ಅದೇ ಔಷಧಿ, ಹೊಟ್ಟೆ ಕಡಿತಕ್ಕೂ ಅದೇ ಔಷಧಿ, ಎಲ್ಲಕ್ಕೂ ಅದೇ ಹೇಳುವುದು. ಇವರು ಎದ್ದ ಕೂಡಲೇ ಅದನ್ನೆ ಹೇಳುವುದು.

ಶ್ರೀ ರಾಮಲಿಂಗರೆಡ್ಡಿ: ಮಾನ್ಯ ಅಧ್ಯಕ್ಷರೆ, ಈಗ ಏನು ಕಾಂಟ್ರಾಕ್ಟ್ ಕೊಟ್ಟಿದ್ದೆವೊ, ಇದೆಲ್ಲಾ cancel ಆಗಬೇಕು, ಮತ್ತೆ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಯಾರು ಆಯುಕ್ತರು ಇರುತ್ತಾರೋ ಅವರು ಸ್ವಲ್ಪ ಹುಷಾರ್ ಆಗಿ ಇರಬೇಕು. ಇವರು ಸ್ವಲ್ಪ ಯಾಮಾರಿದರೆ ಈ ರೀತಿಯ ಅನಾಹುತಗಳು ಆಗುತ್ತವೆ. ಇಲ್ಲಿ ಹಿಂದೆಯೂ ಒಳ್ಳೆಯ officers ಇದ್ದರು, ಒಳ್ಳೆಯ ಕಮೀಷನರ್‌ಗಳು ಇದ್ದರು. ಈಗಲೂ ಒಳ್ಳೆಯ ಕಮಿಷನರ್ ಇದ್ದಾರೆ.

ಅಧ್ಯಕ್ಷರು: ಏನು ಹುಷಾರ್ ಆದರೂ ಏನು ಪ್ರಯೋಜನ? ನೀವು ಕೆಳಗಡೆ ಇರುವವರು involve ಆಗಿದ್ದಾರೆಂದು ಹೇಳಿದ್ದೀರಿ. ಇದು ಎಲ್ಲಾ ಕೆಳ ಹಂತದಲ್ಲಿ ಎಂದು ಹೇಳಿದ್ದೀರಿ. ಅವರು ಮೇಲೆ ಕುಳಿತುಕೊಂಡು ಅವರನ್ನೆಲ್ಲಾ ಬಲಿ ಎತ್ತಿದರೆ ಮಾತ್ರ ಮಾಡುವುದಕ್ಕೆ ಸಾಧ್ಯ. ಅವರನ್ನು ಬಲಿ ಎತ್ತುವುದಕ್ಕೆ ಆಗುತ್ತದಾ? ಹೇಳಿ. ಯಾರಾದರೂ ಸರಿ ಬಂದು ಅವನು ಮೊದಲು ಅವರ ಜಾತಿಯ ಮಿನಿಸ್ಟರ್ ಕಾಲು ಹಿಡಿಯುತ್ತಾನೆ. ಇನ್ನೊಂದು ಮಾಡುತ್ತಾನೆ, ಜಾತಿ ಎನ್ನುವ ದೊಡ್ಡ ಪೆಡಂಭೂತ ತಲೆಗೆ ಹೋಗಿ ಬಿಡುತ್ತದೆ. ರಾಜಕೀಯದವರು ಎಲ್ಲರಿಗೂ ರಕ್ಷಣೆಯನ್ನು ಕೊಡುತ್ತೇವೆ. ಇದು ಹೇಗೆ ಆಗುತ್ತದೆ? ನೀವು ಆಗದೇ ಇರುವ ಕತೆಯನ್ನು ಹೇಳುತ್ತಿರಲ್ಲಾ, ಹೇಳಿ.

ಶ್ರೀ ರಾಮಲಿಂಗರೆಡ್ಡಿ: ಮಾನ್ಯ ಅಧ್ಯಕ್ಷರೆ, ಇಲ್ಲಿ ಆಯುಕ್ತರು ಮತ್ತು Additional Commissioner ಸ್ವಲ್ಪ vigilant ಆಗಿ ಇದ್ದರೆ, ಈ ರೀತಿಯ ಅನಾಹುತಗಳು ಆಗುವುದಿಲ್ಲ. ಇದು ಅವರ ಗಮನಕ್ಕೆ ಬರದೇ ಆಗಿದೆಯೆಂದು ನನ್ನ ಅಭಿಪ್ರಾಯವಾಗಿದೆ. ಆದರೂ ತಪ್ಪು ಯಾರು ಮಾಡಿದ್ದಾರೊ, ಅವರಿಗೆ ಶಿಕ್ಷೆ ಆಗಬೇಕು.

ಅಧ್ಯಕ್ಷರು: ಆಯಿತು, ಮಾನ್ಯ ನರೇಂದ್ರ ಬಾಬು, ತಾವು 5 ನಿಮಿಷಗಳಲ್ಲಿ ತಮ್ಮ ಮಾತನ್ನು ಮುಗಿಸಬೇಕು. ಈಗಾಗಲೇ 1.15 ಗಂಟೆಯಾಯಿತು.

ಶ್ರೀ ನರೇಂದ್ರಬಾಬು(ರಾಜಾಜಿನಗರ): ಮಾನ್ಯ ಅಧ್ಯಕ್ಷರೆ, Jawaharlal Nehru Urban Renewal Mission ನ ಅಡಿಯಲ್ಲಿ 650 ಕೋಟಿ ರೂಪಾಯಿಗಳ storm water drain ಮಳೆನೀರು ಕಾಲುವೆಯನ್ನು ಆಧುನೀಕರಣಗೊಳಿಸಿ, ಬೆಂಗಳೂರು ನಗರದಲ್ಲಿ ಮಳೆ ಬಂದಾಗ flood ಆಗದ ರೀತಿಯಲ್ಲಿ ಮತ್ತು ಬೆಂಗಳೂರು ನಗರದಲ್ಲಿ storm water drain ಏನು 250 ಕಿ.ಮೀ. ವ್ಯಾಪ್ತಿಯಲ್ಲಿ sanitary chamber ಗಳು ಏನು ಇದೆ, ಅದರ ಪಕ್ಕದಲ್ಲಿ encroachmentsಗಳು ಇವೆ. ಅದನ್ನು strengthen ಮಾಡಬೇಕು, ಜೊತೆಗೆ ಯಾವ ರೀತಿಯಲ್ಲೂ flood ಆಗುವುದನ್ನು avoid ಮಾಡಬೇಕೆಂದು ಹೇಳಿ ಇರುವಂಥಾ ಯೋಜನೆ ಪ್ರಾರಂಭವಾಗಿದ್ದು 2002ರಲ್ಲಿ.....

ಅಧ್ಯಕ್ಷರು: ಈ ವಿಷಯಗಳನ್ನು ಎಲ್ಲಾ ಹೇಳಿದ್ದಾರೆ, ಅದು ಬಿಟ್ಟು ಹೊಸ ವಿಚಾರಗಳು ಗೊತ್ತಿದ್ದರೆ, ಹೇಳಿ. ತಾವು ಅದನ್ನೆ repeat ಮಾಡಬೇಡಿ.

ಶ್ರೀ ನೆ.ಲ. ನರೇಂದ್ರಬಾಬು: ಮಾನ್ಯ ಅಧ್ಯಕ್ಷರೆ, ನಾನು ಈಗ ಒಂದು ವಿಚಾರವನ್ನು ಹೇಳ ಬಯಸುತ್ತೇನೆ. Sanitary Engineering Cell ಎಂದು ಶುರುವಾಯಿತು. ನಾನು ಹೇಳುತ್ತಿರುವಂಥಾದ್ದು 1991ರಲ್ಲೆ ಬೆಂಗಳೂರು ನಗರದಲ್ಲಿ ಸರ್ವೆ ಮಾಡಿ ಒಂದು ಸ್ಕೆಚ್ ಅನ್ನು ಮಾಡಿ ಇಟ್ಟಿದ್ದರು. ಈ ವಿಚಾರ ಮಾನ್ಯ ದಿನೇಶ್ ಗುಂಡೂರಾವ್‌ರವರಿಗೂ ಗೊತ್ತು. ನನಗೂ ಅವರಿಗೂ common border ಇದೆ, ವೃಷಭಾವತಿ ವ್ಯಾಲಿಯಲ್ಲಿ, ಕಳೆದ ಮೂರು ವರ್ಷಗಳ ಹಿಂದೆ ಮಳೆ ನೀರು ಜೋರಾಗಿ ಬಂದಾಗ ಪ್ರಕಾಶ್ ನಗರದ ಸುತ್ತ ಮುತ್ತ ಪ್ರವಾಹವಾಗಿ ಇಬ್ಬರು ಸಾವನ್ನಪ್ಪಿದರು. ಆಗ ದೊಡ್ಡ issue ಆಯಿತು. ಇದೇ ರೀತಿ ಬೆಂಗಳೂರು ನಗರದಲ್ಲಿ ಮಳೆ ಬಂದಾಗ, ನಮಗೆ ಭಯವಾಗುತ್ತಿರುತ್ತದೆ. ಎಲ್ಲಿ flood ಆಯಿತೋ, ಎಲ್ಲಿ ನೀರಲ್ಲಿ ಕೊಚ್ಚಿಕೊಂಡು ಹೋದರೋ ಎಂದು. ಅದು ಆದಮೇಲೆ ನಾವು ಹಂತ ಹಂತವಾಗಿ ಕೇಳಿದೆವು. ಮಾನ್ಯ ಜ್ಯೋತಿಲಿಂಗಂರವರು ಮತ್ತು ಮಾನ್ಯ ಶ್ರೀನಿವಾಸಮೂರ್ತಿಯವರು ಇದ್ದಾಗ, ಹಲವಾರು ಸಭೆಗಳು ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಆಯಿತು. ಬೆಂಗಳೂರು ನಗರದಲ್ಲಿ ಸಮಗ್ರವಾಗಿ ಕೆಲಸ ಮಾಡಬೇಕೆಂದು ಸ್ಟೂಪ್ ಕನ್ಸಲ್‌ಟೆಂಟ್ಸ್ ಎನ್ನುವವರಿಗೆ ಕೊಟ್ಟಿದ್ದಾರೆಂದು ಹೇಳಿದರು. ಇಲ್ಲಿ ನಡೆದಂಥ

ಹಲವಾರು ಸಭೆಗಳಲ್ಲಿ ಇದ್ದಂಥ ಎಲ್ಲಾ ಆಯುಕ್ತರು ಸೂಚನೆಯನ್ನು ಕೊಟ್ಟರು. ದಯವಿಟ್ಟು ನೀವು ಶಾಸಕರುಗಳಿಗೆ ಮಾಹಿತಿಯನ್ನು ಕೊಡಿಯೆಂದು ಹೇಳಿದರು. ಅದು ಯಾರೋ ಒಬ್ಬರು ಒಂದು ಸಾರಿ ಮಾತ್ರ ಬಂದು, ಅಲ್ಲಿ ಮ್ಯಾಪನ್ನು ತೋರಿಸಿ ಮಾಹಿತಿಯನ್ನು ಕೊಡುತ್ತೇವೆಂದು ಹೇಳಿ ಇದುವರೆಗೂ ಕೊಟ್ಟಿಲ್ಲ. ಬೆಂಗಳೂರು ನಗರದಲ್ಲಿ ಹೇಗೆ ಇರುತ್ತದೆಂಬುವುದು ಬಹಳ ಜನ ಶಾಸಕರುಗಳಿಗೆ ಗೊತ್ತಾಗುವುದಿಲ್ಲ. ಅಲ್ಲಿ ಸಂಪೂರ್ಣವಾಗಿ ಮಾಹಿತಿಯನ್ನೆ ಕೊಡಲಿಲ್ಲ. ಸ್ಟೂಪ್ ಕನ್ಸಲ್‌ಟೆಂಟ್ಸ್ ಯಾವ basis ಮೇಲೆ ಮಾಡಿದ್ದೀರೆಂದು ಕೇಳಿದರೆ, ಹಳೆಯ Sanitary Engineering Cell ಮಾಡಿದ್ದ basis ಅನ್ನು ಇಟ್ಟುಕೊಂಡು ಅವರೇ ನಾಲ್ಕು ಗೋಡೆಯ ಮಧ್ಯೆ ಯಾವುದೇ ರೀತಿಯ ಸರ್ವೆಯನ್ನು ಮಾಡದೇ, ಒಂದು cosmetic surgery ಯನ್ನು ಮಾಡಿ ಬಿಟ್ಟು, ಅದನ್ನು place ಮಾಡಿ, ಅವರು consultation fee ಯನ್ನು ತೆಗೆದುಕೊಂಡರೆ ಹೊರತು, practical ಆಗಿ ಎಲ್ಲೆಲ್ಲಿ ಏನೇನು ತೊಡಕುಗಳು ಇವೆಯೆಂಬ ಬಗ್ಗೆ ನಾವು ಪ್ರಶ್ನೆ ಮಾಡಿದಾಗ ಉತ್ತರ ಕೊಡಲಿಲ್ಲ. ಅದನ್ನು ಸರಿ ಮಾಡೋಣ, ಎಲ್ಲೆಲ್ಲಿ addition ಇದೆಯೋ ಅಲ್ಲಿ ಮಾಡೋಣವೆಂಬ ಹಾರಿಕೆಯ ಉತ್ತರವನ್ನು ಕೊಟ್ಟು ತಪ್ಪಿಸಿಕೊಂಡರೆ ಹೊರತು, ಈ ಬೆಂಗಳೂರು ನಗರ ಪಾಲಿಕೆಯಲ್ಲಿ ಯಾವ ರೀತಿಯಲ್ಲಿ ದೊಡ್ಡ ದೊಡ್ಡ ಹಗರಣಗಳು ಆಗುತ್ತವೆಂಬುದು ವಿವರಗಳನ್ನು ನೀಡಲಿಲ್ಲ. ಇವತ್ತು ಆಕ್ಟ್ರಾಯ್ ನಿಂತ ಮೇಲೆ, ನಮ್ಮಲ್ಲಿ ಹಣ ಕಡಿಮೆ ಇದೆ. ಇಂಥ ದೊಡ್ಡ ದೊಡ್ಡ ಕಾಮಗಾರಿಗಳನ್ನು ಮಾಡಬೇಕಾದರೆ, ಬರುವಂಥ tax ನಲ್ಲಿ ಆಗುವುದಿಲ್ಲವೆಂದು ಹೇಳಿ, ಇಂಥ ದೊಡ್ಡ ಯೋಜನೆಯನ್ನು JNURM ಅಡಿಯಲ್ಲಿ ನಮಗೆ ಮಾಡುವುದಕ್ಕೆ ಅನುಮತಿಯನ್ನು ಕೊಟ್ಟರು. ಆದರೆ ಈ ಅನುಮತಿಯನ್ನು ಕೊಟ್ಟಿದ್ದು ಯಾರಿಗೆ ಲಾಭವಾಯಿತೆಂದರೆ, consultantsಗೆ ಲಾಭವಾಯಿತು. Contractor ಗಳಿಗೆ ಲಾಭವಾಯಿತು. ಈ ಮಧ್ಯೆ ಯಾರು ಮಧ್ಯವರ್ತಿಗಳು ಇದ್ದಾರೆ, ಯಾರು ಶಾಮೀಲು ಆಗಿರುವಂಥ ಅಧಿಕಾರ ವರ್ಗಕ್ಕೆ ಲಾಭವಾಯಿತೇ ಹೊರತು, ಬೆಂಗಳೂರು ನಗರಕ್ಕೆ ಲಾಭವಾಗಿರುವಂಥಾದ್ದು ಕೇವಲ ಶೇ. 20 ರಿಂದ ಶೇ.25 ರಷ್ಟು ಎಂದು ನಾನು ಈ ಸಂದರ್ಭದಲ್ಲಿ ಸ್ಪಷ್ಟವಾಗಿ ಹೇಳಬಯಸುತ್ತೇನೆ. ಈ ಸಂದರ್ಭದಲ್ಲಿ ಹಲವಾರು ಮಾಹಿತಿಗಳನ್ನು ಸನ್ಮಾನ್ಯ ಶಿವಕುಮಾರ್‌ರವರು ಮತ್ತು ಮಾತನಾಡಿದಂಥ ಸದಸ್ಯರು ನೀಡಿದ್ದಾರೆ. ನಾನು ಈ ಸಂದರ್ಭದಲ್ಲಿ ಒಂದು ವಿಚಾರವನ್ನು ಕೇಳುವುದೇನೆಂದರೆ, ಇವತ್ತು ಬಹಳಷ್ಟು ಕಡೆಗಳಲ್ಲಿ ಮಳೆ ಬಂದರೆ ನಮಗೆ ಭಯವಾಗುತ್ತದೆ. ಎಲ್ಲಿ flood ಆಗುತ್ತದೊ ಎಂದು, ಮಾಜಿ ಮುಖ್ಯಮಂತ್ರಿಗಳಾದ ಸನ್ಮಾನ್ಯ ಧರ್ಮಸಿಂಗ್‌ರವರು

ಬಂದು ನೋಡಿಕೊಂಡು ಹೋದರು. ಈಗ ಹಾಲಿ ಮುಖ್ಯಮಂತ್ರಿಯವರು ಮಳೆ ಬಂದ ತಕ್ಷಣ ಬೆಂಗಳೂರಿನಲ್ಲಿ ಒಂದು ಪ್ರವಾಸ ಮಾಡುವಂಥಾದ್ದು ಆಗುತ್ತದೆ. ಈ ಎಲ್ಲಾ ದುರಂತಕ್ಕೆ ಕಾರಣ, ನಾನು ಈ ಸಭೆಯಲ್ಲಿ ಒಂದು ವಿಚಾರವನ್ನು ಸ್ಪಷ್ಟವಾಗಿ ಹೇಳುತ್ತೇನೆ. ಬೆಂಗಳೂರಿನಲ್ಲಿದ್ದಂಥ ಕೆರೆಗಳನ್ನು, ರಾಜ ಕಾಲುವೆಗಳನ್ನು ಮುಚ್ಚಿದ್ದು, ಇವತ್ತು ಆ ರಾಜ ಕಾಲುವೆಗಳು ಎಲ್ಲೆಲ್ಲಿ encroachment ಆಗಿದೆಯೆಂಬುದರ ಬಗ್ಗೆಯೂ ಸಹ storm water drain ಆಗುತ್ತದೆನ್ನುವಂಥಾದ್ದನ್ನೆಲ್ಲಾ, ಒಂದು ಸರ್ವೆ ಮಾಡಿ report ನಲ್ಲಿ ಕೊಡಬೇಕಾಗಿತ್ತು. ನಾನು ನೋಡಿದ report ನಲ್ಲಿ ಅದು ಎಲ್ಲೂ ಕಾಣಲಿಲ್ಲ. ಇವತ್ತು ನಾನು ಕೇಳುವುದೇನೆಂದರೆ, ಇವರು ಹಣವನ್ನು ಖರ್ಚು ಮಾಡಿದ್ದೇವೆಂದು ಏನು ಹೇಳಿದ್ದಾರೆ, ಅಥವಾ desilt ಮಾಡಿದ್ದಾರೆಂದು ಏನು ಹೇಳಿದ್ದಾರೆ, ನಾನು ಸ್ಪಷ್ಟವಾಗಿ ಆಗ್ರಹಿಸುತ್ತೇನೆ. ಈ silt ಅನ್ನು ಎಲ್ಲಿಗೆ ತೆಗೆದುಕೊಂಡು ಹೋಗಿ ಹಾಕಿದರು? ಬೆಂಗಳೂರಿನಲ್ಲಿ silt ಅನ್ನು ತೆಗೆದುಕೊಂಡು ಹೋಗಿ ಆ ರಸ್ತೆಗೆ ಹಾಕುವುದು. ಅದಕ್ಕೆ ಬಿಲ್ ಮಾಡುವುದು, ಅಲ್ಲಿಂದ ಇನ್ನೆಲ್ಲೋ ಹಾಕುವುದು, ಮತ್ತೆ ಬಿಲ್ ಮಾಡುವುದು ಇದು ಆಗುತ್ತದೆ. ನಮ್ಮಲ್ಲಿ ಯಾವಾಗಲೂ ತಮಾಷೆ ಮಾಡುತ್ತಿರುತ್ತಾರೆ. " ಹಳೆ ಕಲ್ಲು ಹೊಸ ಬಿಲ್"ಎಂದು ಹೇಳುತ್ತಾರೆ. ಇವತ್ತು ಹಾಗೆ ಇಂಥಾ ಹೂಳನ್ನು, ಬೆಂಗಳೂರು ನಗರದಲ್ಲಿ ಬಾವಿ ತೋಡಿದ ಕತೆ ತಮಗೆ ಗೊತ್ತಿರಬಹುದು. ಬಾವಿ ತೋಡಿದರು, ನೀರು ಬರಲಿಲ್ಲ, ಆಮೇಲೆ ಮಳೆಗಾಲ ಬಂತು ಅದು ಮುಚ್ಚಿ ಹೋಯಿತು. ಬಿಲ್ ಮಾತ್ರ ಆಯಿತು, ಬಾವಿ ಮಾತ್ರ ಕಾಣಲಿಲ್ಲ, ಹಾಗೆ ಇವತ್ತು ಬೆಂಗಳೂರು ನಗರದಲ್ಲಿ ಹೂಳಿನ ಕತೆ ಆಗಿದೆ. ಬೆಂಗಳೂರು ನಗರದಲ್ಲಿ ಇಷ್ಟೊಂದು ಹೂಳನ್ನು ತೆಗೆದಿದ್ದೇವೆಂದು ಹೇಳುತ್ತಾರೆ. ಇದು ಎಲ್ಲಿ ಹೋಯಿತೆಂದು ಬಹಳ ನಿಗೂಢವಾಗಿರುವಂಥಾದ್ದು. ನಾವೆಲ್ಲಾ ಖುಷಿಯಾಗಿರುತ್ತಿದ್ದದ್ದು ಏನೆಂದರೆ, ತಡೆ ಗೋಡೆಗಳನ್ನು ಬಹಳ strong ಆಗಿ ಕಟ್ಟುತ್ತಾರೆ. RCC Wallಗಳನ್ನು ಕಟ್ಟುತ್ತಾರೆ, ಪಕ್ಕದಲ್ಲಿರುವಂಥಾ encroachment ಅನ್ನು ತೆಗೆಯುತ್ತಾರೆ. ಇದರ ಜೊತೆಯಲ್ಲಿ flood ಆಗುವಂಥದ್ದನ್ನು ತಡೆಯುತ್ತಾರೆಂದು ಇದ್ದೆವು. ಆದರೆ ಏನೇನು ಆಗಿಲ್ಲ. ಕಳೆದ ಒಂದು ವಾರದ ಹಿಂದೆ ಇಲ್ಲೊಂದು ಸೇತುವೆಯನ್ನು ಕಟ್ಟಿದ್ದೇವೆ, ಬನ್ನಿ ಎಂದರು. ಅದು ಪ್ರಕಾಶ ನಗರದ ಮರಿಯಪ್ಪನ ಪಾಳ್ಯದ ಹತ್ತಿರ ನನ್ನನ್ನು ಕರೆದುಕೊಂಡು ಹೋದರು. ನಾನು ಈ ಸೇತುವೆಗೆ 27 ಲಕ್ಷ ರೂಪಾಯಿಗಳು ಇವತ್ತು ಹೇಗೆ ಖರ್ಚಾಗುತ್ತದೆಂದು ಕೇಳಿದರೆ, ಆಯಿತು ಸಾರ್, ಕಂಟ್ರಾಕ್ಟರ್ ಎಲ್ಲಾ ಕೆಲಸ ಮಾಡಿದ್ದಾನೆಂದು ಹೇಳುತ್ತಾರೆ. ಅದು ಒಂದು ಸಣ್ಣ ಸೇತುವೆ, ಈ ರೇಟ್‌ಗಳನ್ನು

ನೋಡಿದರೆ ಆಶ್ಚರ್ಯವಾಗುತ್ತದೆ, ಹೇಗೆ exorbitant figure ಗಳನ್ನು ಸರ್ಕಾರ ಅನುಮತಿ ಇಲ್ಲದೇ ಕೊಟ್ಟರು. ಒಂದು civil works, ಎರಡು ಹೂಳು ಎತ್ತುವ ಕೆಲಸ, ಇದನ್ನೆಲ್ಲಾ ನೋಡಿದಾಗ ಆರೋಗ್ಯ ಸಚಿವರಾದ ಸನ್ಮಾನ್ಯ ಅಶೋಕ್‌ರವರು ಹೇಳಿದ ಹಾಗೆ ಖಂಡಿತವಾಗಿಯೂ ಈ ಬಗ್ಗೆ ತನಿಖೆಯಾಗಬೇಕು. ಇದರ ಬಗ್ಗೆ ಏಕೆ ಇನ್ನು ತನಿಖೆ ಮಾಡಿಲ್ಲ? ನಮ್ಮ ಮಾತಿಗೆ ಮಾನ್ಯತೆ ಇಲ್ಲವಾ? ಅಥವಾ ನೀವು ಕೊಟ್ಟಿರುವಂಥ ಸೂಚನೆಯನ್ನು ಪಾಲನೆ ಮಾಡಿಲ್ಲವಾ ಎಂದು ಮಾನ್ಯ ಸಚಿವರನ್ನು ಈ ಸಂದರ್ಭದಲ್ಲಿ ನಾನು ಕೇಳಬಯಸುತ್ತೇನೆ.]

ಅಧ್ಯಕ್ಷರು: ಆಯಿತು.

ಶ್ರೀ ನೆ.ಲ.ನರೇಂದ್ರಬಾಬು: ಮಾನ್ಯ ಅಧ್ಯಕ್ಷರೆ, ನೀವು ಕೊಟ್ಟರುವ ಟೈಮ್‌ನಲ್ಲಿ ಮುಗಿಸುತ್ತೇನೆ.

ಅಧ್ಯಕ್ಷರು: ನೀವು ಹೇಳಿದ್ದನ್ನೆ ಹೇಳುತ್ತಿದ್ದೀರಿ. ಅವರು ಹೇಳಿದ್ದನ್ನೆ ನೀವು repeat ಮಾಡುತ್ತಿದ್ದೀರಿ. ನೀವು ಬೇರೆ ಏನಾದರೂ ಹೊಸ ವಿಷಯ ಇದ್ದರೆ ಹೇಳಿ. ಇದನ್ನು ಮುಗಿಸೋಣ, ಟೈಮ್ ಆಯಿತು.

ಶ್ರೀ. ನೆ.ಲ. ನರೇಂದ್ರಬಾಬು: ಮಾನ್ಯ ಅಧ್ಯಕ್ಷರೆ, ನಾನು ಹೆಚ್ಚು ಸಮಯವನ್ನು ತೆಗೆದುಕೊಳ್ಳದೇ ನನ್ನ ಮಾತನ್ನು ಮುಗಿಸುತ್ತೇನೆ. ಇವತ್ತು ಬೆಂಗಳೂರು ನಗರದಲ್ಲಿ ಹೂಳು ಎತ್ತುವ ನೆಪದಲ್ಲಿ ಆಗಿರುವಂಥ ಪ್ರಶ್ನೆಯನ್ನು ತಮ್ಮ ಮುಂದೆ ಇಡುತ್ತಾ, ದಯವಿಟ್ಟು ಟೆಂಡರ್‌ನಲ್ಲಿ ಒಂದು ಬಾರಿ ದರ ನಮೂದಿಸಿದ್ದನ್ನು ಮತ್ತೆ revise ಮಾಡಬೇಕಾದರೆ, ಸರ್ಕಾರದ ಅನುಮತಿ ಆಗಿತ್ತಾ? ಇದುವರೆಗೂ ನಾಲ್ಕು ಕಣಿವೆಗಳಲ್ಲಿ ಮಾಡಿರುವಂಥ 15 ಪ್ಯಾಕೇಜುಗಳ ಬಗ್ಗೆ ಸ್ಪಷ್ಟವಾಗಿ ಸಾರ್ವಜನಿಕರಿಗೆ ಮತ್ತು ಜನ ಪ್ರತಿನಿಧಿಗಳಿಗೆ ತಿಳಿಯುವಂತೆ ತನಖೆ ಆಗಬೇಕು. ಸದನ ಸಮಿತಿ ಆಗಬೇಕು ಮತ್ತು ಜೊತೆಯಲ್ಲಿ ಸುಮಾರು 14 ಲಕ್ಷ ಕ್ಯೂಬಿಕ್ ಮೀಟರ್‌ನಷ್ಟು ಹೂಳನ್ನು ಯಾವ ಭಾಗಕ್ಕೆ ಸಾಗಿಸಲಾಗಿತ್ತು. ಎಲ್ಲಿ ಯಾವ ಟೈಮ್‌ನಲ್ಲಿ, ಎಂಬ ಬಗ್ಗೆ ಟೈಮ್ ಷೆಡ್ಯೂಲ್ ಎಲ್ಲವನ್ನು ತೋರಿಸಬೇಕು. ಇದುವರೆಗೂ 4 ಕಣಿವೆಗಳಲ್ಲಿ ಮಾಡಿರುವಂಥ ಹೂಳು ಎತ್ತಲು ಸುಮಾರು ಮೂರು ಬಾರಿ ಬಿಲ್ ಅನ್ನು ಮಾಡಲಾಗಿದೆ, ಮತ್ತು ಹಳೆಯ ಅಂದರೆ ಈ JNURM ಬರುವುದಕ್ಕೆ ಮುಂಚಿತವಾಗಿ ಏನು estimateಗಳನ್ನು ಮಾಡಿದ್ದರು, ಆ 145 ಕೋಟಿ ರೂಪಾಯಿಗಳ ಲೆಕ್ಕ ಇನ್ನು ಸಿಗುತ್ತಾ ಇಲ್ಲ. ಇದರ ಬಗ್ಗೆ ಯಾರಿಗೂ ಗೊತ್ತಾಗುತ್ತಿಲ್ಲ. ಹಿಂದೆ

ಆಗಿರುವಂಥಾದ್ದು, ಇದರ ಬಗ್ಗೆಯೂ ತನಿಖೆಯಾಗಬೇಕು. ಈಗಾಗಲೇ ಈ ಗುತ್ತಿಗೆದಾರ ಅವಧಿ ಮುಗಿದಿದೆ. ಇದುವರೆಗೂ ಕರ ರೂಪದಲ್ಲಿ ಎಷ್ಟು ದಂಡವನ್ನು ವಿಧಿಸಲಾಗಿದೆ? ಹಾಗೂ ಗುತ್ತಿಗೆ ಅವಧಿ ಮುಗಿದಿದ್ದು, ಇದನ್ನು ನವೀಕರಿಸಲಾಗಿದೆಯಾ ಎಂದು ಈ ಸಂದರ್ಭದಲ್ಲಿ ಕೇಳುತ್ತಾ, ಇದಕ್ಕೆ ಸಮಗ್ರವಾಗಿ ತನಿಖೆಯಾಗಿ, ಯಾವುದೇ ಒಂದು ಇಂಥಾ ಯೋಜನೆ ಬಂದಾಗ, ಯಾರಿಗೋ ಲಾಭ ಮಾಡಿ ಬೆಂಗಳೂರು ನಗರಕ್ಕೆ ಇವತ್ತು ಅನ್ಯಾಯ ಮಾಡುವಂಥಾದ್ದು ಸರಿಯಲ್ಲವೆನ್ನುವಂಥ ಮಾತನ್ನು ಹೇಳಿ, ಇದನ್ನು CBI ಗೆ ಮತ್ತು ಸದನ ಸಮಿತಿ ಇವುಗಳಲ್ಲಿ ಯಾವುದು ಸೂಕ್ತವೆಂಧು ನೋಡಿ, ತಮ್ಮ ಆದೇಶ ಮುಖೇನಾ ತನಿಖೆಯಾಗಿ ಸತ್ಯಾಂಶ ಹೊರಗೆ ಬರಲಿ, ಯಾವ ಅಧಿಕಾರಿಗಳು ಯಾರ್‍ಯಾರ period ನಲ್ಲಿ work orderಅನ್ನು ಕೊಟ್ಟಿದ್ದಾರೆ, ಟೆಂಡರ್ ಬಿಡುಗಡೆ ಮಾಡಬೇಕಾದರೆ ಯಾರ್‍ಯಾರು ಶಾಮೀಲು ಆಗಿದ್ದರು. ಈ ಎಲ್ಲಾ ವಿಚಾರಗಳು ತನಿಖೆಯ ಮೂಲಕ ಹೊರಗಡೆ ಬರಬೇಕೆಂದು ಆಗ್ರಯಿಸುತ್ತೇನೆ.

ಶ್ರೀ ಎನ್.ಧರ್ಮಸಿಂಗ್: ಮಾನ್ಯ ಅಧ್ಯಕ್ಷರೆ, ನಾನು ಕೂಡ ಇದಕ್ಕೆ ಸಹಿ ಹಾಕಿದ್ದೇನೆ.

ಅಧ್ಯಕ್ಷರು: ತಾವು ಮೊದಲು 10 ನಿಮಿಷ ಮಾತನಾಡಿದ್ದಿರಲ್ಲಾ....

ಶ್ರೀ ಎನ್. ಧರ್ಮಸಿಂಗ್: ಮಾನ್ಯ ಅಧ್ಯಕ್ಷರೆ, ದಿ: 11.2.2005ರಂದು ಮಾನ್ಯ ಪ್ರಧಾನಮಂತ್ರಿಯವರು ಕರ್ನಾಟಕ ರಾಜ್ಯಕ್ಕೆ ಬಂದಿದ್ದರು. ಆಗ ನಮ್ಮ ಸಿದ್ಧರಾಮಯ್ಯನವರು ಉಪಮುಖ್ಯಮಂತ್ರಿಗಳಾಗಿದ್ದರು. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ನಾವೆಲ್ಲಾ infrastructure ಗೆ ಹೆಚ್ಚಿನ ಒತ್ತನ್ನು ಕೊಡಬೇಕೆಂದು, Bangalore 74% growth. It is the fastest growing city in the country. ಇವತ್ತು ಸಾಕಷ್ಟು ಕೆಲಸ ಕಾರ್ಯಗಳು ಆಗಬೇಕಾಗಿದೆ. ಈಗ ಬೆಳೆಯುತ್ತಿರುವಂಥ ನಗರಗಳಿಗೆ ಹೆಚ್ಚಿನ ಹಣವನ್ನು ಕೊಡಬೇಕೆಂದು ಕೇಳಿದೆವು. ತದನಂತರ ಹಣವನ್ನು ಬೆಂಗಳೂರು ಮತ್ತು ಮೈಸೂರು ನಗರಗಳಿಗೆ ಕೊಟ್ಟಿದ್ದಾರೆ. ಇವತ್ತು ಬೆಂಗಳೂರು ನಗರಕ್ಕೆ 22,536 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಮೈಸೂರು ನಗರಕ್ಕೆ 12 ಸಾವಿರ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಮೊನ್ನೆ ಕೂಡ ಪ್ರಧಾನಮಂತ್ರಿಯವರು ರಿವ್ಯೂ ಮಾಡತಕ್ಕಂಥ ಕಾಲದಲ್ಲಿ, ಜವಹರ್‌ಲಾಲ್ ನೆಹರೂ ಮಿಷನ್‌ಗೆ ನೀವು ಹೆಚ್ಚು ಒತ್ತು ಕೊಡಬೇಕು, ಕೆಲಸವಾಗಬೇಕು ಎಂದು ಹೇಳಿದ್ದಾರೆ. ಈ ಎಲ್ಲ Project Reportಗಳನ್ನು appraisalಗೆ ಅಹಮದಾಬಾದ್‌ಗೆ

ಕಳುಹಿಸಬೇಕಾಗುತ್ತದೆ. ಇಂಥ ಒಂದು ನಗರ ಪ್ರದೇಶದ ಅಭಿವೃದ್ಧಿಗೆ ರಾಷ್ಟ್ರಮಟ್ಟದಲ್ಲಿ 1 ಕೋಟಿ 36 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಇದು ನಮಗೆ ಒಂದು ದೊಡ್ಡ opportunity. I.T, B.T, centre ಆಗಿರತಕ್ಕ, ಬೃಹದಾಕಾರವಾಗಿ ಬೆಳೆಯುತ್ತಿರುವಂಥ ಈ ನಗರದಲ್ಲಿ ನೀರಿನ ಸಮಸ್ಯೆ, ಸ್ಲಂ ಸಮಸ್ಯೆ, ಹೂಳೆತ್ತುವ ಕೆಲಸ ಇಂಥವುಗಳು ಇವೆ. ನಗರದಲ್ಲಿ ಮಳೆ ಬಂದು ಹಾನಿಯಾದಂಥ ಸಂದರ್ಭದಲ್ಲಿ ಹಿಂದೆ ಸನ್ಮಾನ್ಯ ಎಸ್.ಎಂ.ಕೃಷ್ಣರವರು ಹೋಗಿದ್ದರು, ನಾನು ಕೂಡ ಹೋಗಿದ್ದೆ, ಪ್ರಸ್ತುತ ಮುಖ್ಯಮಂತ್ರಿಗಳೂ ಹೋಗಿದ್ದಾರೆ. ಕೇಂದ್ರದ ಮಾನ್ಯ ಜಯಪಾಲ ರೆಡ್ಡಿಯವರು ನಗರಕ್ಕೆ ಬಂದಿದ್ದರು. ರಾಮಲಿಂಗಾರೆಡ್ಡಿಯವರೂ ಇದ್ದರು, ಆಗಿನ ಮೇಯರ್‌ರವರೂ ಇದ್ದರು. ಆಗ ಒಂದು ವಿಚಾರ ಸಂಕೀರ್ಣ ಆಯಿತು. ನಾನು ಮತ್ತು ಸಿದ್ದರಾಮಯ್ಯನವರು ವಿಚಾರ ಸಂಕೀರ್ಣಕ್ಕೆ ಹೋಗಿದ್ದೆವು, ಬೆಳೆಯುತ್ತಿರುವಂಥ ಬೆಂಗಳೂರು ನಗರವನ್ನು ಹತೋಟಿಯಲ್ಲಿಡಬೇಕಾಗಿದೆ, ಇದಕ್ಕೆ Metropolitan Authority ಆಗಬೇಕು ಎನ್ನುವ ಅಭಿಪ್ರಾಯ ವಿಚಾರ ಸಂಕೀರ್ಣದಲ್ಲಿ ಬಂತು. Citizens Forum ಮಾಡಬೇಕು. you have to consult the senior citizens. ಇದರಲ್ಲಿ public involvement ಕೂಡ ಆಗಬೇಕು. ಯಾವ ಯಾವ ಬಾಬತ್ತಿನಲ್ಲಿ ಖರ್ಚು ಮಾಡಬೇಕು. ಎಂದು ಎಲ್ಲರೂ instructions ಕೊಟ್ಟಿದ್ದಾರೆ. ಇವತ್ತು ಶಿವಕುಮಾರ್‌ರವರು ಪ್ರಸ್ತಾಪ ಮಾಡಿದಂತೆ, ಹೂಳು ಎತ್ತತಕ್ಕಂಥ ಕಾರ್ಯಕ್ರಮದಲ್ಲಿ, ಕೇಂದ್ರದಿಂದ ಬಂದಂಥ ಹಣ ಎಷ್ಟೆಷ್ಟು misuse ಆಗಿದೆ, ಇದರಲ್ಲಿ ಇಂಜಿನಿಯರುಗಳು ಮತ್ತು ಹಿಂದಿನ ಕಮೀಷನರುಗಳು ಏನು ಮಾಡಿದ್ದಾರೆ ಎನ್ನುವುದನ್ನೂ ಬಹಳಷ್ಟು ಬಯಲಿಗೆ ಎಳೆದಿದ್ದಾರೆ. ಹಿರಿಯ ಸದಸ್ಯರಾದ ಸೋಮಣ್ಣನವರೂ ಕೂಡ ಮಾತನಾಡಿದ್ದಾರೆ. ಅವರು Corporator ಆಗಿ, ಶಾಸಕರಾಗಿ, ಸಚಿವರಾಗಿ ಕೆಲಸ ಮಾಡಿದ್ದಾರೆ. ಅದೇ ರೀತಿ, ದಿನೇಶ್ ಗುಂಡೂರಾವ್‌ರವರು, ರೋಷನ್ ಬೇಗ್‌ರವರು, ರಾಮಲಿಂಗಾರೆಡ್ಡಿಯವರೂ ಕೂಡ ಹೇಳಿದ್ದಾರೆ. ನಾನು ಬಹಳಷ್ಟು ವಿಚಾರಗಳನ್ನು ಪ್ರಸ್ತಾಪ ಮಾಡುವುದಿತ್ತು. ಡಿ.ಕೆ.ಶಿವಕುಮಾರ್‌ರವರು ಅದರ ಬಗ್ಗೆ ಸರಿಯಾಗಿ ಅಧ್ಯಯನ ಮಾಡಿ ಯಾವ ಯಾವ ರೀತಿಯಲ್ಲಿ ಆಗಿದೆ ಎನ್ನುವುದನ್ನು ಹೇಳಿದ್ದಾರೆ. ಹೂಳೆತ್ತುವ ಕೆಲಸಕ್ಕೆ 10 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದರೆ, ಹೂಳು ಗುಡ್ಡದ ಹಾಗೆ ಬೀಳಬೇಕಾಗಿತ್ತು. ಎಷ್ಟು ಲಾರಿಗಳು ಹೋಗಬೇಕಾಗಿತ್ತು? ಆದರೆ ಎಲ್ಲಿ ಕೆಲಸವಾಗುತ್ತಿದೆ. ಕಣ್ಣಿಗೆ visibility ಬೇಕಲ್ಲವೇ? ಕೇಂದ್ರ ಸರ್ಕಾರದಿಂದ ಬಂದಂಥ ಹಣವನ್ನು ಉಪಯೋಗ ಮಾಡುವಾಗ, there must be visibility.

ಜನರಿಗೆ ಕಾಣಬೇಕು. ಅವರಲ್ಲಿ ವಿಶ್ವಾಸ ಮೂಡಿಸತಕ್ಕಂಥಾದ್ದು ಆಗಬೇಕು. ಯಾರ ಅಪ್ಪನ ಮನೆಯ ಹಣ ಇದು? ಹಣ ಎಲ್ಲಿಂದ ಬರುತ್ತದೆ? ಕಾರ್ಪೊರೇಷನ್ನಿನಲ್ಲಿ ಇರತಕ್ಕಂಥ ಜನರಿಗೆ ಕೊಡಲಿಕ್ಕೇ ಆ ಹಣವಿರವುದು? ಬೆಂಗಳೂರು ನಗರದಲ್ಲಿ, ರಾಜ್ಯದ ರಾಜಧಾನಿಯಲ್ಲಿ ಈ ರೀತಿಯ ಅವ್ಯವಹಾರವಾದರೆ ಕೇಂದ್ರ ಸರ್ಕಾರ ಹೇಗೆ ಹಣ ಕೊಡುತ್ತದೆ? ಕೇಂದ್ರ ಸರ್ಕಾರದಿಂದ ಕೂಡ ವೀಕ್ಷಣೆಗಾಗಿ ತಂಡ ಬರುತ್ತದೆ. ಅದು ಬಂದು ನೋಡಿದಾಗ, ಕೊಟ್ಟಂಥ ಹಣವನ್ನು ನೀವು ಉಪಯೋಗ ಮಾಡಿಕೊಳ್ಳುತ್ತಿಲ್ಲ ಎನ್ನುವ ಮಾತೂ ಬರುತ್ತದೆ. ಕುಡಿಯುವ ನೀರಿನ ಬಗ್ಗೆ ಏನು ಮಾಡುತ್ತಿದ್ದೀರಿ? ಮುಖ್ಯಮಂತ್ರಿಗಳು Greater Bangalore Bill ಅನ್ನು ತೆಗೆದುಕೊಂಡು ಬಂದರು. 100 ಇದ್ದುದ್ದನ್ನು 150 ಮಾಡುತ್ತೇನೆ, ಇದು ಮಹಾತ್ವಾಕಾಂಕ್ಷೆಯ ಯೋಜನೆಯಾಗಿದೆ, ಅದರ ಬಗ್ಗೆ ಕನಸು ಕಾಣುತ್ತಿದ್ದೇನೆ, ಕೆಂಪೇಗೌಡರು ಕಟ್ಟಿದ ಈ ನಗರವನ್ನು ಸುವ್ವಸ್ಥಿತವಾಗಿ ಮಾಡುತ್ತೇನೆ ಎಂದು ಹೇಳಿ Greater Bangalore Bill ತಂದರು. ಆಗ ಸಹಾ ನಾವು ಹೇಳಿದ್ದೇವೆ. ಇದಕ್ಕೆ ಇವತ್ತಿನ ದಿವಸ ಮುಖ್ಯಮಂತ್ರಿಯವರು ಉತ್ತರ ಕೊಡುತ್ತಾರೋ, ಜಿಲ್ಲಾ ಉಸ್ತುವಾರಿ ಸಚಿವರಾಗಿ ಅಶೋಕ್‌ರವರು ಉತ್ತರ ಕೊಡುತ್ತಾರೋ ಗೊತ್ತಿಲ್ಲ. ಆ ಉತ್ತರದಿಂದ ನಮಗೆ ಸಮಾಧಾನವಾಗುವುದಿಲ್ಲ. ಇದು ಕೇಂದ್ರದ ಹಣವಾದ ಕಾರಣ ಇದನ್ನು C.B.I. ಗೆ ವಹಿಸಿ ಕೊಡಬೇಕು, C.B.I. ನಿಂದ ತನಿಖೆಯಾಗಬೇಕು. ಈ ರೀತಿಯ 19 ಪ್ರಾಜೆಕ್ಟ್‌ಗಳಿವೆ. ಎಲ್ಲದಕ್ಕೂ ಹಣ ಕೊಡುತ್ತಿದ್ದಾರೆ. ಪ್ರಪ್ರಥಮವಾಗಿ ಪ್ರಾರಂಭ ಮಾಡತಕ್ಕಂಥ ಪ್ರಾಜೆಕ್ಟ್‌ನಲ್ಲೇ ಈ ರೀತಿಯಾಗಿದೆ. ಕೊಟ್ಟಂಥ ಹಣ ದುರುಪಯೋವಾಗುತ್ತಿದೆ ಎಂದು ನಾವು ಕೇಂದ್ರ ಸರ್ಕಾರಕ್ಕೆ ಹೇಳುತ್ತೇವೆ. ಅದೆಲ್ಲ ನೀರು ಪಾಲಾಗಿ ಹೋಗುತ್ತಿದೆ. ಯಾವ ಅಧಿಕಾರಿಗಳೂ ಮನಸಿಟ್ಟು ಕೆಲಸ ಮಾಡುತ್ತಿಲ್ಲ. There is no commitment ಎಂದು ನಾವು ಹೇಳಬೇಕಾಗುತ್ತದೆ. ಸೋಮಣ್ಣನವರು, ರೋಷನ್‌ಬೇಗ್‌ರವರು ಎಲ್ಲರೂ ಇದರ ಬಗ್ಗೆ ಸದನ ಸಮಿತಿ ಆಗಬೇಕೆಂದು ಹೇಳಿದ್ದಾರೆ. ಶಿವಕುಮಾರ್ ಅವರು C.B.I. ತನಿಖೆ ಆಗಬೇಕೆಂದು ಹೇಳಿದ್ದಾರೆ. ಕೇಂದ್ರ ಸರ್ಕಾರದಿಂದ ಬಂದಂಥ ಹಣದ ದುರುಪಯೋಗವಾಗಿದೆ, ಆದ್ದರಿಂದ C.B.I. ತನಿಖೆಯಾಗಬೇಕೆಂದು ಹೇಳಿದ್ದಾರೆ. ನಗರ ಪ್ರದೇಶಗಳ infrastructure developmentಗೆಂದು ಕೇಂದ್ರ ಸರ್ಕಾರದವರು ಕೊಡುತ್ತಿರುವ ಹಣ ಇಲ್ಲಿ ಸರಿಯಾಗಿ ಉಪಯೋಗವಾಗಿಲ್ಲ, ದುರುಪಯೋಗವಾಗಿದೆ. ಅವರು ಮಾತನಾಡತಕ್ಕಂಥ ಕಾಲದಲ್ಲಿ ನೇರವಾಗಿ ಆಯುಕ್ತರ ಮೇಲೆ ಮತ್ತು

ಇಂಜಿನಿಯರ್ಸ್ ಮೇಲೆ ಹೇಳಿದ್ದಾರೆ. ನಾನು corporator ಆಗಿದ್ದೆ, Muncipality member ಆಗಿದ್ದೆ ಮತ್ತು ನಗರಾಭಿವೃದ್ಧಿ ಮಂತ್ರಿಯಾಗಿಯೂ ಸಹ 27 ವರ್ಷಗಳ ಹಿಂದೆ ಕೆಲಸ ಮಾಡಿದ್ದೇನೆ. ಬೆಂಗಳೂರು ನಗರದಲ್ಲಿ ಯಾವ ರೀತಿ ಹಣ misuse ಆಗಿದೆ, ಯಾವ ರೀತಿ ಲೂಟಿ ಮಾಡುತ್ತಿದ್ದಾರೆ ಎಂದರೆ, ಅದಕ್ಕೆ ಮಿತಿಯೇ ಇಲ್ಲ. ಕೇಂದ್ರದಿಂದ ಬಂದಂಥ ಹಣವನ್ನು ನೀರುಪಾಲು ಮಾಡಿದ್ದಾರೆ, ಯಾವುದೇ ಕೆಲಸವಾಗಿಲ್ಲ. ಕೆಲಸಗಳನ್ನು ನೋಡತಕ್ಕಂಥ ರೀತಿಯಲ್ಲಿ ಸದನ ಸಮಿತಿ ಆಗಬೇಕು. ಎರಡನೆಯದಾಗಿ, ನಾವು ಇದನ್ನು C.B.I. ಗೆ ವಹಿಸಬೇಕು ಎಂದು ಏಕೆ ಕೇಳುತ್ತಿದ್ದೇವೆ ಎಂದರೆ infrastructure ಗೆ ಹೆಚ್ಚಿನ ಒತ್ತು ಕೊಡಲು ಕೇಂದ್ರದಿಂದ ಕೊಟ್ಟಂಥ ಹಣವಿದು. ಇದು ತನಿಖೆಯಾಗಬೇಕು, C.B.I. ತನಿಖೆಯಿಂದ ಅವ್ಯವಹಾರ ಬಯಲಿಗೆ ಬರುತ್ತದೆ ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಅಧ್ಯಕ್ಷರು: ಒಂದು ಪ್ರಕಟಣೆ ಇದೆ.

5. ಪ್ರಕಟಣೆ

ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಬಂದಿರುವ ಸಂದೇಶದಲ್ಲಿ ದಿನಾಂಕ 07-08-2007 ರಂದು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 118ರ ಮೇರೆಗೆ ವಿಧಾನ ಪರಿಷತ್ತು 2007ನೇ ಸಾಲಿನ ಕೆಳಕಂಡ ವಿಧೇಯಕಗಳನ್ನು ಯಾವುದೇ ತಿದ್ದುಪಡಿಗಳಿಲ್ಲದೆ ಅಂಗೀಕರಿಸಿರುತ್ತದೆಂದು ತಿಳಿಸಿರುತ್ತಾರೆ.

1) ಚಿಟ್‌ಫಂಡುಗಳ(ಕರ್ನಾಟಕ ತಿದ್ದುಪಡಿ) ವಿಧೇಯಕ

2) ಕರ್ನಾಟಕ ಉಚ್ಚ ನ್ಯಾಯಾಲಯ ಮತ್ತು ಇತರ ಕೆಲವು ಕಾನೂನುಗಳ (ತಿದ್ದುಪಡಿ) ವಿಧೇಯಕ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೇ, ಆರೋಗ್ಯ ಮಂತ್ರಿಗಳಾದ ಅಶೋಕ್‌ರವರು ಬಂದಿದ್ದಾರೆ. ಆರೋಗ್ಯ ಮಂತ್ರಿಗಳು ಬಂದ ತಕ್ಷಣ ಭ್ರೂಣ ಹತ್ಯೆಯ ಬಗ್ಗೆ ಸ್ಟೇಟ್‌ಮೆಂಟ್ ಕೊಡಿಸುತ್ತೇನೆ ಎಂದು ಹೇಳಿದಿರಲ್ಲ. ಅವರು ಬಂದಿದ್ದಾರೆ. ದಯವಿಟ್ಟು ಸ್ಟೇಟ್‌ಮೆಂಟ್ ಕೊಡಿಸಬೇಕು.

ಶ್ರೀ ಧರ್ಮಸಿಂಗ್: ಮಹಾನಗರಪಾಲಿಕೆಯಲ್ಲಿ ಆದಂಥ ಹಣದ ದುರುಪಯೋಗದ ಬಗ್ಗೆ ಈಗಾಗಲೇ ಪ್ರಸ್ತಾಪವಾಗಿದೆ. ಬೆಂಗಳೂರು ನಗರದ

ಎಲ್ಲ ಶಾಸಕರು ಮಾತನಾಡಿದ್ದಾರೆ. ಇದಕ್ಕೆ ಯಾರು ಉತ್ತರ ಕೊಡುತ್ತಾರೆ? ಆಗಿದೆ ಎಂದು ಅಶೋಕ್‌ರವರೇ ಹೇಳಿದ್ದಾರೆ.

ಶ್ರೀ ಸಿದ್ದರಾಮಯ್ಯ: ಬಹಳ ಗಂಭೀರವಾದಂಥ ವಿಷಯವನ್ನು ಪ್ರಸ್ತಾಪ ಮಾಡಿದ್ದು, ದುರುಪಯೋಗವಾಗಿದೆ, ಭ್ರಷ್ಟಾಚಾರ ನಡೆದಿದೆ, ಅಷ್ಟೊಂದು ಕೋಟಿ ಹಣವನ್ನು ಗುಳುಂ ಮಾಡಿದ್ದಾರೆ ಎಂದೆಲ್ಲ ಹೇಳಿರುವಾಗ ಇದರಲ್ಲಿ ಯಾರ್‍ಯಾರು ಸೇರಿದ್ದಾರೆ ಎನ್ನುವುದು ಗೊತ್ತಾಗಬೇಕೋ ಬೇಡವೋ? ಇದರ ಬಗ್ಗೆ C.B.I. enquiry ಮಾಡುವುದಕ್ಕೆ ಒಪ್ಪಿಕೊಳ್ಳಿ.

ಅಧ್ಯಕ್ಷರು: ಉತ್ತರ ಕೊಡುವಾಗ ಹೇಳಿ. ಯಾರು ಉತ್ತರ ಕೊಡುತ್ತಿರೋ ಅವರು ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ಅವ್ಯವಹಾರವಾಗಿದೆ, ಭ್ರಷ್ಟಾಚಾರವಾಗಿದೆ, C.B.I. ತನಿಖೆಯಾಗಬೇಕು ಎಂದು ಎಲ್ಲದ್ದಕ್ಕೂ ಕೇಳುತ್ತಿದ್ದಾರೆ. ಯಾವುದಾದರೂ ಒಂದಕ್ಕೆ ಕೇಳಿದರೆ ಅದಕ್ಕೆ ಮಹತ್ವವಾದರೂ ಇರುತ್ತದೆ.

ಅಧ್ಯಕ್ಷರು: ಯಾವುದಕ್ಕಾದರೂ ಒಪ್ಪಿಕೊಳ್ಳಿ ಎಂದು ಕೇಳುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ: ಯಾವುದಾದರೂ ಒಂದಕ್ಕಾದರೂ ನೀವು ಒಪ್ಪಿಕೊಂಡಿರುವಿರಾ?

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ: ನಾವು ಲೋಕಾಯುಕ್ತರ ಬಗ್ಗೆ ಇಷ್ಟೊಂದು ಗೌರವವನ್ನು ಇಟ್ಟುಕೊಂಡಿದ್ದೇವೆ. ಪ್ರಾಮಾಣಿಕವಾಗಿ, suo motu ಅವರು ತನಿಖೆ ಮಾಡಿದ್ದಾರೆ. ಅವರು ವರದಿ ಕೊಡಲಿ. ಆಮೇಲೆ ಯಾರು ಬೇಡವೆನ್ನುತ್ತಾರೆ?

(ಗೊಂದಲ)

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: C.B.I. ಗೆ ಯಾವುದು ಕೊಟ್ಟಿದ್ದಾರೆ? ಒಂದೂ ಕೊಟ್ಟಿಲ್ಲ.

(ಗೊಂದಲ)

ಅಧ್ಯಕ್ಷರು: ದಯಮಾಡಿ ಕೇಳಿ. ಅನೇಕ ವಿಚಾರಗಳು ಪ್ರಸ್ತಾಪ ಆಗಬೇಕಾಗಿವೆ, ಚರ್ಚೆಯಾಗಬೇಕಾಗಿದೆ. ಅದಕ್ಕೆ ಉತ್ತರ ಕೊಡುವಾಗ ಅವರು ಹೇಳುತ್ತಾರೆ ಬಿಡಿ. ಅಶೋಕ್‌ರವರೇ ಈಗ ಭ್ರೂಣ ಹತ್ಯೆಯ ಬಗ್ಗೆ ಉತ್ತರ ಕೊಡಿ.

ಶ್ರೀ ಡಿ.ಕೆ. ಶಿವಕುಮಾರ್: ಜಿಲ್ಲಾ ಮಂತ್ರಿಗಳಾದ ಅಶೋಕ್‌ರವರು ಈಗಾಗಲೇ, on record, ಭ್ರಷ್ಟಾಚಾರವಾಗಿದೆ ತಪ್ಪಿತಸ್ಥರ ವಿರುದ್ಧ....

ಅಧ್ಯಕ್ಷರು: ಒಳ್ಳೆಯದಲ್ಲವೇನ್ರೀ ಶಿವಕುಮಾರ್‌ರವರೇ. ಅವರು ಈಗಾಗಲೇ ಹೇಳಿಬಿಟ್ಟಿದ್ದಾರೆ, ಈಗಲೂ ಅದನ್ನೇ ಹೇಳುತ್ತಾರೆ, ಹೇಳಲಿ ಬಿಡಿ.

ಶ್ರೀ ಡಿ.ಕೆ. ಶಿವಕುಮಾರ್: there is no need of his answer. He has already accepted, he has already commited. It has come on record. ಹಾಗಾಗಿ ನಮಗೆ ಉತ್ತರ ಬೇಡ. Deputy Chief Ministerರವರು ಹೇಳಲಿ.

ಅಧ್ಯಕ್ಷರು: ಆಯಿತು ಬಿಡಿ. ಯಾರು ಉತ್ತರ ಹೇಳುತ್ತಾರೋ ಆಗ ನೋಡೋಣ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ವಿರೋಧಪಕ್ಷದ ನಾಯಕರು ಈ ವಿಷಯವನ್ನು ಎತ್ತಿದ್ದಾರೆ. ಶಿವಕುಮಾರ್‌ರವರು detail ಆಗಿ ಹೇಳಿದ್ದಾರೆ. ಬೆಂಗಳೂರಿನ ಇತರ ಶಾಸಕರು ಕೂಡ ಇದರ ಬಗ್ಗೆ ಗಂಭೀರವಾಗಿ ಚರ್ಚೆ ಮಾಡಿದ್ದಾರೆ. ಇದಕ್ಕೆ ಸಂಬಂಧಪಟ್ಟಂಥ ಮಂತ್ರಿಗಳು ಅಂದರೆ ಮುಖ್ಯಮಂತ್ರಿಗಳು ಇದಕ್ಕೆ ಉತ್ತರ ಕೊಡಬೇಕು.

ಅಧ್ಯಕ್ಷರು: ಮುಖ್ಯಮಂತ್ರಿಗಳು ಬರುತ್ತಾರೆ. ಅವರು ಬಂದಾಗ ಕೊಡಲಿಬಿಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಇದು ಹೇಗಾಗಿದೆ ಎಂದರೆ, "ಯಜಮಾನನಿಲ್ಲದ ಮನೆಯಂತಾಗಿದೆ". ಯಾವಾಗಲೂ ಸದನಕ್ಕೆ ಯಾರೂ ಬರುವುದೇ ಇಲ್ಲ, ಯಾರೂ ಕೇಳುವುದೇ ಇಲ್ಲ. ಸೇನಾಧಿಪತಿ ಇಲ್ಲದೇ ಸೈನಿಕರು ಇದ್ದ ಹಾಗಿದೆ.

ಅಧ್ಯಕ್ಷರು: ಅವರು 1.30ಕ್ಕೆ ಬರುತ್ತಾರೆ. ಈಗ ಅಶೋಕ್‌ರವರು ಹೇಳಲಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಪ್ರತಿಸಲವೂ ಅವರು ಸದನದಲ್ಲಿರುವುದಿಲ್ಲ. ಹೀಗಾದರೆ ಹೇಗೆ?

ಅಧ್ಯಕ್ಷರು: ಏನು ಮಾಡುತ್ತೀರಿ, Business ನಡೆಯಬೇಕಲ್ಲ.

ಶ್ರೀ ಎಂ.ಪಿ. ಪ್ರಕಾಶ್: ಇವತ್ತು ಅವರ ಮನೆಯಲ್ಲಿ.....

ಶ್ರೀ ಮಲ್ಲಿಕಾರ್ಜುನ ಖರ್ಗೆ: ಇದು ಇವತ್ತಿನ ಪ್ರಶ್ನೆಯಲ್ಲ. ತಾವು ಕಡತವನ್ನು ತೆಗೆದು ನೋಡಿ. ಯಾವಾಗಲೂ ಕೂಡ important issue ಇದ್ದಾಗ ಅವರು ಸದನದಲ್ಲಿರುವುದಿಲ್ಲ. ತಮಗೇ ಗೊತ್ತಿದೆ, ನಿನ್ನೆ ಒಬ್ಬರಾದರೂ ಇದ್ದರೇ? ಮೊನ್ನೆ ಇದ್ದರೇ?

ಶ್ರೀ ಎಂ.ಪಿ.ವೆಂಕಟೇಶ್: ಅವರು ಸದಾ ಇರುತ್ತಾರೆ. ಅವರು ಇದ್ದಾಗ ಪ್ರಸ್ತಾಪ ಮಾಡುವುದಿಲ್ಲ. ಅವರು ಇಲ್ಲದೇ ಇದ್ದಾಗಲೇ ಮಾತನಾಡುತ್ತಾರೆ. ಉಪ ಮುಖ್ಯಮಂತ್ರಿಗಳು, Law Minister ಇದ್ದಾರೆ.

ಅಧ್ಯಕ್ಷರು: ಅವರು ಬಂದ ಮೇಲೆ ಅದಕ್ಕೆ ಉತ್ತರ ಕೊಡಿ ಎಂದು ಹೇಳುತ್ತೇನೆ. ಅಶೋಕ್‌ರವರೇ ಈಗ ಭ್ರೂಣ ಹತ್ಯೆಯ ಬಗ್ಗೆ ಉತ್ತರ ಕೊಡಿ.

(ಗೊಂದಲ)

ಅಧ್ಯಕ್ಷರು: ಅಶೋಕ್‌ರವರೆ, ಭ್ರೂಣ ಹತ್ಯೆ ಬಗ್ಗೆ ಉತ್ತರ ಕೊಡಿ.

ಶ್ರೀ ಸಿದ್ದರಾಮಯ್ಯ: ನಾವು ಕೇಳಿದ ವಿಷಯಕ್ಕೆ ಯಾರು ಉತ್ತರ ಕೊಡುವುದೆಂಧು ತೀರ್ಮಾನವಾಗಿಲ್ಲ.

ಅಧ್ಯಕ್ಷರು:ಮುಖ್ಯಮಂತ್ರಿಗಳು ಬಂದ ಮೇಲೆ ಉತ್ತರವನ್ನು ಕೊಡುತ್ತಾರೆ.

ಶ್ರೀ ಸಿದ್ದರಾಮಯ್ಯ: ಈ ನೋಟೀಸ್ ಕೊಟ್ಟು ಎಷ್ಟು ದಿನಗಳಾಯಿತು? ಸರ್ಕಾರಕ್ಕೆ ಜವಾಬ್ದಾರಿ ಬೇಡವೇ? ಬಹಳ ಗಂಭೀರವಾದ ವಿಚಾರವನ್ನು ಪ್ರಸ್ತಾಪ ಮಾಡಿದ್ದೇವೆ. ನಿನ್ನೆ ಅವರಿಲ್ಲವೆಂದಾಯಿತು. ಇವತ್ತಾದರೂ ಅವರು ಸದನಕ್ಕೆ ಬಂದು ಉತ್ತರ ಕೊಡಬೇಕಲ್ಲವೇ?

ಅಧ್ಯಕ್ಷರು: ಬಂದು ಉತ್ತರ ಕೊಡುತ್ತಾರೆಂದು ಮಾನ್ಯ ಗೃಹ ಸಚಿವರು ಹೇಳಿದ್ದಾರಲ್ಲ. ಅವರ ಬಂದುಗಳ್ಯಾರೋ ತೀರಿ ಹೋಗಿದ್ದಾರಂತೆ. ಅವರು ಅಲ್ಲಿಗೆ ಹೋಗಿ ಬರುತ್ತಾರೆ.

ಶ್ರೀ ಸಿದ್ದರಾಮಯ್ಯ: ಅವರು ಬರದೇ ಇದ್ದರೆ? ಯಡಿಯೂರಪ್ಪ, Deputy Chief Minister ರವರು ಇರುತ್ತಾರೆ, ಅಶೋಕ್ ಕೊಡುತ್ತಾರೆಂದರು. ಅಶೋಕ್‌ರವರೇ ಒಪ್ಪಿಕೊಂಡಿದ್ದಾರೆ, ಅನ್ಯಾಯವಾಗಿರುವುದು ನಿಜ,

ಭ್ರಷ್ಟಾಚಾರವಾಗಿರುವುದು ನಿಜ, ಅಲ್ಲಿ ಹಣ ಹೊಡೆದಿರುವುದು ನಿಜ, ಮೋಸ ನಡೆದಿರುವುದು ನಿಜವೆಂದು ಒಪ್ಪಿಕೊಂಡಿದ್ದಾರೆ. ಈ ತರಹ ಎಲ್ಲ ಆದ ಮೇಲೂ ಕೂಡ ಇಂಥ ವಿಚಾರಗಳಲ್ಲೂ ಕೂಡ ಯಾವ ರೀತಿ ಗಂಭೀರವಾಗಿ ಯೋಚನೆ ಮಾಡುತ್ತಿದ್ದಾರೆ? ಹೇಳಿ.

ಅಧ್ಯಕ್ಷರು: ಇದಕ್ಕೆ ಉತ್ತರ ಕೊಡಿ ಎಂದು ನಾನು ಹೇಳುತ್ತೇನೆ.

ಶ್ರೀ ಸಿದ್ದರಾಮಯ್ಯ: ಇವತ್ತೇ ಅಧಿವೇಶನದ ಕೊನೆಯ ದಿವಸವೆಂದು ಹೇಳುತ್ತಿದ್ದೀರಿ.

ಅಧ್ಯಕ್ಷರು: ಆಯಿತು, ಅವರು ಬಂದ ತಕ್ಷಣ ಉತ್ತರ ಕೊಡಿಸುತ್ತೇನೆ.

ಶ್ರೀ ಸಿದ್ದರಾಮಯ್ಯ: ಅವರು ಬರದೇ ಇದ್ದರೆ?

ಅಧ್ಯಕ್ಷರು: ಅವರು ಬರದೇ ಇದ್ದರೆ, ಉಪ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ.

ಶ್ರೀ ಸಿದ್ದರಾಮಯ್ಯ: ಅದು ಹೇಗೆ? ಅವರು ಉತ್ತರ ಕೊಡುವುದಕ್ಕೆ ತಯಾರಾಗಿಲ್ಲ.

ಅಧ್ಯಕ್ಷರು: ಅವರು ಬರುವುದನ್ನು ಕಾಯೋಣ. ಅವರು ಬರದಿದ್ದರೆ ಉಪ ಮುಖ್ಯಮಂತ್ರಿಯವರು ಉತ್ತರ ಕೊಡುತ್ತಾರೆ.

ಶ್ರೀ ಸಿದ್ದರಾಮಯ್ಯ: ಅದಕ್ಕೆ ಮುಖ್ಯಮಂತ್ರಿಯವರೇ ಉತ್ತರ ಕೊಡಬೇಕು. ಬೇಜವಾಬ್ದಾರಿಯಾದರೆ, ಇದರ ಬಗ್ಗೆ ಅಗೌರವದಿಂದ ನಡೆದುಕೊಂಡರೆ, ನೀವು ಈ ಸದನ ಗೌರವವನ್ನು ಕಾಪಾಡಬೇಕಾಗುತ್ತದೆ. ಇಲ್ಲದಿದ್ದರೆ, ನಾವೇಕೆ ಇದನ್ನು ಪ್ರಸ್ತಾಪ ಮಾಡಬೇಕು ಹೇಳಿ?

ಅಧ್ಯಕ್ಷರು: ಎಲ್ಲ ಮಾತನಾಡಿ ಆಗಿದೆ. ಈಗ ಅದಕ್ಕೆ ಉತ್ತರ ಬರಬೇಕಾಗಿದೆ. ತಾವು ಕುಳಿತುಕೊಳ್ಳಿ. ಅಶೋಕ್‌ರವರೆ, ಭ್ರೂಣ ಹತ್ಯೆ ಬಗ್ಗೆ ಉತ್ತರ ಹೇಳಿ.

(ಗೊಂದಲ)

ಅಧ್ಯಕ್ಷರು: ಈಗ ಅವರು ಭ್ರೂಣ ಹತ್ಯೆ ಬಗ್ಗೆ ಉತ್ತರ ಹೇಳುತ್ತಿದ್ದಾರೆ.